
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜೂನ್ 4, 2008 ರೂ. 12/-

- ಕೇಸರಿ ಸ್ವರ್ಗಕ್ಕೆ ಮೂರೇ ಸೀಟು!
- ಮುಗ್ಗರಿಸಿದ ಆನೆ
- ಬಿಜೆಪಿಯನ್ನು ಗೆಲ್ಲಿಸಿದ್ದು ಕಾಂಗ್ರೆಸ್ ಮತ್ತು ಜೆಡಿಎಸ್
- ಬೆಂಗಳೂರಿಗೆ ಭೂಕಂಟಕ ಶಾಸಕರು




ತ್ರಿ ಮೇಲೆ ನಡಿಗೆ!



ಮೋನಿಕಾ ಮೈ ಡಾರ್ಲಿಂಗ್!

ಅಂದ ಒಬ್ಬ ಕೊಲೆಯಾದ ಇನ್ನೊಬ್ಬ ಜೈಲುಪಾಲಾದ

ಐಪಿಎಲ್ ನಡೆಯುತ್ತಿರುವ ಟ್ವೆಂಟಿ-20 ಕ್ರಿಕೆಟ್ ಮ್ಯಾಚುಗಳು ಭರದಿಂದ ನಡೆಯುತ್ತಿವೆ. ಕಾರ್ಖಾನೆಗಳಲ್ಲಿ ಸರಕುಗಳು ಉತ್ಪಾದನೆಯಾಗುವಂತೆ ದಿನನಿತ್ಯದಂತೆ ಮ್ಯಾಚುಗಳು ನಡೆಯುತ್ತಿವೆ. ಬ್ಯಾಟು-ಬಾಲಿನ ನಡುವೆ ನಡೆಯುತ್ತಿರುವ ಘನಘೋರ ಯುದ್ಧದಂತೆ ಕಾಣುತ್ತಿರುವ ಈ ಟ್ವೆಂಟಿ-20 ಕ್ರಿಕೆಟ್‌ನಲ್ಲಿ ಒಂದು ಕ್ರೀಡೆಗೆ ಇರಬೇಕಾದ ಎಲ್ಲಾ ಗುಣಲಕ್ಷಣಗಳು ಒಂದೊಂದಾಗಿ ಮರೆಯಾಗುತ್ತಿವೆ. ಎಲ್ಲಕ್ಕಿಂತ ಹೆಚ್ಚಾಗಿ ಭಾರತದ ದೊಡ್ಡ ದೊಡ್ಡ ಉದ್ಯಮಿಗಳು ಈ ತಂಡಗಳನ್ನು ಖರೀದಿಸಿದ ಮೇಲೆ ತಂಡಗಳ ಆಟಗಾರರು ಮಾತ್ರವಲ್ಲದೆ ಆಟ, ಗೆಲುವು, ಸೋಲು, ವೀಕ್ಷಕರ ಚಪ್ಪಾಳೆ, ಸಂತೋಷ ಎಲ್ಲವೂ ಒಂದು ಸರಕಾಗಿ ಬಿಟ್ಟಿರುವಂತೆ ತೋರುತ್ತಿದೆ. ಐಪಿಎಲ್ ಆಟವು ಒಂದು ಕ್ರೀಡೆಯೆಂದು ಕರೆಸಿಕೊಳ್ಳುವ ಎಲ್ಲಾ ಅಂಶಗಳನ್ನು ಕಳೆದುಕೊಳ್ಳುತ್ತಿದೆ.



ಕ್ರಿಕೆಟ್ ಇರಲಿ, ಫುಟ್‌ಬಾಲ್ ಇರಲಿ ಇತರ ಯಾವುದೇ ಕ್ರೀಡೆಗಳಿರಲಿ ಅದರ ಮುಖ್ಯ ಗುಣಲಕ್ಷಣ ಸೋಲು ಗೆಲುವುಗಳಲ್ಲವೇ ಅಲ್ಲ. ಆದ್ದರಿಂದಲೇ ಯಾವುದೇ ಆಟದಲ್ಲಿ ಸೋಲುಗೆಲುವುಗಳಿಗಿಂತ ಭಾಗವಹಿಸುವುದು ಮುಖ್ಯವೆಂಬುದು ಒಂದು ದೊಡ್ಡ ಮೌಲ್ಯವೇ ಆಗಿತ್ತು. ಸೋಲು ಗೆಲುವನ್ನು ಸಮಚಿತ್ತದಿಂದ ತೆಗೆದುಕೊಳ್ಳುವುದನ್ನು ಕ್ರೀಡಾಸ್ಫೂರ್ತಿಯೆಂದೇ ಕರೆಯಲಾಗುತ್ತಿತ್ತು. ಈ ಕ್ರೀಡಾಸ್ಫೂರ್ತಿಯೆಂಬುದು ಕೇವಲ ಕ್ರೀಡೆಗೆ ಮಾತ್ರವಲ್ಲದೆ ಜೀವನದ ಎಲ್ಲಾ ಸೋಲುಗೆಲುವುಗಳ ಬಗ್ಗೆಯೂ ಇರಬೇಕಾದ ಮನಸ್ಥಿತಿಯೆಂಬುದನ್ನು ಅರ್ಥಮಾಡಿಕೊಂಡರೆ ಕ್ರೀಡೆ ಕೇವಲ ಒಂದು ಆಟ ಮಾತ್ರವಲ್ಲದೆ ನಮ್ಮ ಮನೋಧರ್ಮವನ್ನೇ ರೂಪಿಸುತ್ತದೆ ಎಂಬುದು ಅರ್ಥವಾಗುತ್ತದೆ.

ಅಸಲು ಮನುಕುಲ ಕ್ರೀಡೆಯನ್ನು ತಮ್ಮ ಬದುಕು ಮತ್ತು ಸಂಸ್ಕೃತಿಯ ಭಾಗವಾಗಿ ಅನ್ವೇಷಿಸಿದ್ದೇ ಮನೋಲ್ಲಾಸಕ್ಕಾಗಿ ಮತ್ತು ಬದುಕಿನ ಶಿಸ್ತು ಮತ್ತು ಸ್ಫೂರ್ತಿಗಳನ್ನು ಬೆಳೆಸಿಕೊಳ್ಳಲಿಕ್ಕಾಗಿ. ಹಾಗೆ ನೋಡಿದರೆ ಯಾವುದು ಆಟ ಮತ್ತು ಯಾವುದು ಆಟವಲ್ಲ ಎಂಬುದಕ್ಕೆ ನಿರ್ವಚನವೇನು? ಯಾವುದರಲ್ಲಿ ಆರ್ಥಿಕ, ರಾಜಕೀಯ ಮತ್ತು ಸೈನಿಕಾತ್ಮಕವಾದ ಹೊರಗಿನ ಒತ್ತಡಗಳು ಕಡಿಮೆಯಾಗುತ್ತಾ ಸ್ವಸಂತೋಷವೇ ಪ್ರಧಾನವಾಗುತ್ತದೆಯೋ ಅದೇ ಆಟವೆಂದು ಹೇಳಲಾಗುತ್ತದೆ. ಹಾಗೂ ಕ್ರೀಡೆಯೆಂಬ ಪದದ ಜೊತೆಗೆ ಮನೋಲ್ಲಾಸವೆಂಬ ಪರಿಕಲ್ಪನೆ ಜೊತೆಜೊತೆಗೆ ಸಾಗುತ್ತದೆ.

ಚಾರ್ವಾಕ

ಶಿವಸುಂದರ್

ಆದರೆ ಈ ಕ್ರೀಡೆಯೆಂಬುದು ಮನುಕುಲದ ವಿಕಾಸದ ಗತಿಯಲ್ಲಿ ರೂಪಿಸಿಕೊಂಡ ರಾಷ್ಟ್ರಗಳ ಪ್ರತಿಷ್ಠೆಗಳಿಗೆ ಪ್ರತಿಮೆಯಾಗುತ್ತಿದ್ದಂತೆ ಕ್ರೀಡೆಯಲ್ಲಿ ಆಟಗಾರನಿಗಿಂತ, ಕ್ರೀಡೆಗಿಂತ ಕ್ರೀಡೇತರ ಅಂಶಗಳೇ ಪ್ರಧಾನವಾಗುತ್ತಾ ಬಂದಿತು. ಭಾರತದಲ್ಲಂತೂ ಸಮೂಹ ಮಾಧ್ಯಮಗಳ ಪ್ರಭಾವ ಹೆಚ್ಚುತ್ತಾ ಹೋದಂತೆ ಕ್ರಿಕೆಟ್ ಆಟವು ಭಾರತ ರಾಷ್ಟ್ರೀಯತೆಯ ಸಂಕೇತವಾಗುತ್ತಾ ಬಂದಿತು. ಇದು ಒಂದೆಡೆ ಭಾರತ ರಾಷ್ಟ್ರೀಯತೆಯ ದುರ್ಬಲ ತಳಹದಿಯನ್ನು ಪ್ರತಿನಿಧಿಸುವುದು ಮಾತ್ರವಲ್ಲದೆ ಮತ್ತೊಂದೆಡೆ ಅದೇ ಕಾರಣಕ್ಕೆ ಕ್ರಿಕೆಟ್ ಆಟದ ಪ್ರಧಾನ ಗುಣಲಕ್ಷಣವಾದ ಸೋಲು-ಗೆಲುವಿನ ಸಹಜತೆಯನ್ನೇ ಕಳೆದುಕೊಂಡು ಬಂದಿತು.

ನಂತರದ ಜಾಗತೀಕರಣದ ಈ ಕಾಲಘಟ್ಟದಲ್ಲಿ ಪ್ರಪಂಚದಲ್ಲಿ ಬಂಡವಾಳಶಾಹಿ ಉತ್ಪಾದನಾ ಕ್ರಮಗಳೂ ಬೆಳೆಯುತ್ತಾ ಬರುತ್ತಿದ್ದಂತೆ ಕಾರ್ಲ್ ಮಾರ್ಕ್ಸ್ ಹೇಳಿದಂತೆ ಅದು ಎಲ್ಲವನ್ನು ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ಸರಕಾಗುವಂತೆ ಮಾಡುತ್ತಿದೆ. ಹೀಗಾಗಿ ಬಂಡವಾಳಶಾಹಿಯ ವಿಸ್ತರಣಾ ಕ್ರಮದಲ್ಲಿ ಕ್ರೀಡೆಯೂ ಅದರ ಜೊತೆಗೆ ಸಂತೋಷ, ಮನೋಲ್ಲಾಸವೆಂಬ ಮನುಷ್ಯ ಸಹಜ ಭಾವನೆಗಳು ಸಹ ಬಿಕರಿಯಾಗಬಲ್ಲ ಮತ್ತು ಕೊಂಡುಕೊಳ್ಳಬಲ್ಲ ಸರಕಾಗಿದೆ. ಆದ್ದರಿಂದಲೇ ಬಂಡವಾಳಶಾಹಿ ಉತ್ಪಾದನಾ ಕ್ರಮದಲ್ಲಿ ಆಗುವಂತೆ, ಉತ್ಪಾದನೆಯನ್ನು ನಿಯಂತ್ರಿಸುವ ಮಾಲೀಕನೇ ತನ್ನ ಸರಕಿನ ಗುಣಮಟ್ಟವನ್ನು ನಿಯಂತ್ರಿಸುವಂತೆ, ಕ್ರಿಕೆಟ್ ಆಟವನ್ನು ಕೊಂಡುಕೊಂಡ ಮಾಲೀಕರೇ ಆಟದ ನಿಯಮಗಳನ್ನು ಮತ್ತು ಆಟದ ಸಂಸ್ಕೃತಿಯನ್ನು ತಮ್ಮ ಲಾಭದ ಅಗತ್ಯಕ್ಕೆ ತಕ್ಕಂತೆ ತಿದ್ದುತ್ತಿದ್ದಾರೆ. ಹೀಗಾಗಿ ಈ ಐಪಿಎಲ್ ಎಂಬ ಆಟದ ವ್ಯವಸ್ಥೆ ಈಗಾಗಲೇ ವಾಣಿಜ್ಯೀಕರಣಗೊಂಡ ಕ್ರೀಡೆಯ ಅತ್ಯಂತ ವಿಕೃತ ಅಭಿವ್ಯಕ್ತಿಯೂ ಆಗಿದೆ.

ಉದಾಹರಣೆಗೆ ಬೆಂಗಳೂರು ರಾಯಲ್ ಚಾಲೆಂಜರ್ಸ್ ತಂಡದ ಮಾಲೀಕ ವಿಜಯ್ ಮಲ್ಯ ತನ್ನ ತಂಡ ಸತತ ಸೋಲನ್ನು ಉಂಡ ನಂತರ ತುಂಬಾ ಸ್ಪಷ್ಟವಾಗಿ ತನ್ನ ಆಸಕ್ತಿಯನ್ನು ಹೊರಗೆಡವಿದ್ದಾನೆ. "ಅಂತಿಮವಾಗಿ ಇಲ್ಲಿ ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ವಿಷಯವೊಂದಿದೆ. ಐಪಿಎಲ್ ಈಗ ಕ್ರಿಕೆಟ್ ಮಾತ್ರವಲ್ಲ, ಇಲ್ಲಿ ಬಿಸಿನೆಸ್ ಮಾಡಲು ಬಂದಿರುವ ನಾವು, ಕಾರ್ಪೊರೇಟ್ ಜನಗಳಿದ್ದೇವೆ."


ಅದೇ ರೀತಿ ರಾಜಸ್ಥಾನ್ ರಾಯಲ್ಸ್ ತಂಡದ ಅಧಿಕಾರಿ "ಐಪಿಎಲ್ ಕ್ರಿಕೆಟ್ ಮೂಲಭೂತವಾಗಿ ಒಂದು ಆಟವೆಂಬುದು ನಿಜವೇ ಆದರೂ ಅದರ ಅಡಿಯಲ್ಲಿ ನಾವು ಹೂಡಿರುವ ಹಣವಿದೆ" ಎಂದು ಗುಡುಗಿದ್ದಾನೆ. ಇದೇ ತಂಡದ ಆಟಗಾರರು ಈ ಹಿಂದೆ ದೇಶಕ್ಕಾಗಿ ಆಡುವಾಗ ಗಮನವಿಟ್ಟು ಆಡದೇ ಹೋದಾಗ ಅವರನ್ನು ಔದಾರ್ಯದಿಂದ ಕ್ಷಮಿಸಿ ಎಂದೆಲ್ಲಾ ಹೇಳಿಕೆ ಇತ್ತಿದ್ದ ಇದೇ ಕಾರ್ಪೊರೇಟ್ ಮಹಾಶಯರೇ ಅವರು ತಮ್ಮ ತಂಡದ ಪರವಾಗಿ ಆಡುವಾಗ ವಿಫಲವಾದಾಗ ಮುಲಾಜು ನೋಡದೆ ಕಿತ್ತುಹಾಕುತ್ತಿದ್ದಾರೆ. ಈಗಾಗಲೇ ಶಾರೂಕ್ ಖಾನ್ ತಂಡದಿಂದ ನಾಲ್ವರು ಹೊರಬಿದ್ದಿದ್ದರೆ ವಿಜಯ್ ಮಲ್ಯ ತಂಡದಿಂದ ಮ್ಯಾನೇಜರ್ ಚಾರು ಶರ್ಮನನ್ನು ಕೈಬಿಟ್ಟಿದ್ದಾರೆ. ರಾಹುಲ್ ದ್ರಾವಿಡ್‌ಗೂ ಎಲ್ಲಾ ಬಗೆಯ ಅವಮಾನ ಮಾಡಿ ಹೊರಹಾಕುವ ಪ್ರಯತ್ನ ನಡೆದಿದೆ. ಈ ಆಟಗಾರರೂ ಸಹ ಈ ಹಿಂದೆಯೂ ಆಟಕ್ಕಿಂತ ಹೆಚ್ಚಾಗಿ ತಮಗೆ ಬರುವ ಹಣದ ಮೇಲೆ ಕಣ್ಣಿಟ್ಟು ಆಡುತ್ತಿದ್ದವರೇ.

ಹೀಗಾಗಿ ಐಪಿಎಲ್‌ನಲ್ಲಿ ಆಡುವುದು ತಮ್ಮ ತಮ್ಮ ದೇಶಗಳಿಗೆ ಆಡುವುದಕ್ಕಿಂತ ಹೆಚ್ಚು ಲಾಭದಾಯಕವಾಗಲಿದೆ ಎಂದು ಅರಿತಿರುವ ಆಟಗಾರರು ಕ್ರಮೇಣ ತಮ್ಮ ತಮ್ಮ ದೇಶದ ಬೋರ್ಡುಗಳ ನಿಯಂತ್ರಣವನ್ನು ತಪ್ಪಿಸಿಕೊಳ್ಳಲು ಹಲವಾರು ತಂತ್ರಗಳನ್ನು ಬಳಸಿದ್ದಾರೆ. ಅದರಲ್ಲಿ ಒಂದು ದಿಢೀರ್ ನಿವೃತ್ತಿ ಘೋಷಿಸುವುದು. ಆದರೆ ಐಪಿಎಲ್ ನಿಯಮಾವಳಿಯಲ್ಲಿ ಎರಡು ವರ್ಷಗಳ ಕೂಲಿಂಗ್ ಪೀರಿಯಡ್ ನಿಯಮ ಇತ್ತಾದರೂ ಐಪಿಎಲ್ ಹಣವನ್ನು ಸೆಳೆಯಲು ತನ್ನೆಲ್ಲಾ ನಿಯಮಾವಳಿಗಳನ್ನು ಸಡಿಲಿಸಿದೆ. ಆದ್ದರಿಂದಲೇ ಇತ್ತೀಚೆಗೆ ತಾನೆ ನಿವೃತ್ತಿ ಘೋಷಿಸಿದ ಆಸ್ಟ್ರೇಲಿಯಾದ ಕೀಪರ್ ಆಡಂ ಗಿಲ್‌ಕ್ರಿಸ್ಟ್‌ನಿಗೆ ಐಪಿಎಲ್ ಸೇರಲು ಸುಲಭವಾಯಿತು. ಇದರಿಂದಾಗಿ ಪ್ರಪಂಚಾದ್ಯಂತ ಪ್ರೌಢ ಕ್ರಿಕೆಟ್ ಆಟಗಾರರು ಇನ್ನು ಮುಂದೆ ರಾಜೀನಾಮೆ ಇತ್ತು ಕೇವಲ ಐಪಿಎಲ್‌ಗೆ ಮಾತ್ರ ಆಡಬಹುದೆಂದು ಆಸ್ಟ್ರೇಲಿಯಾ ನಾಯಕ ಪಾಂಟಿಂಗ್ ಅಭಿಪ್ರಾಯ ಪಟ್ಟಿದ್ದಾನೆ.

ಐಪಿಎಲ್‌ನ ಈ ಹಣದ ಪ್ರಲೋಭನೆ ಎಲ್ಲಾ ದೇಶಗಳ ಕ್ರಿಕೆಟ್ ಆಟಗಾರರ ದೇಶಭಕ್ತಿಯ ಮುಖವಾಡವನ್ನು ಸಂಪೂರ್ಣವಾಗಿ ಬಯಲು ಮಾಡಿದೆ. ಪಾಕಿಸ್ತಾನ್ ಕ್ರಿಕೆಟ್ ಮಂಡಳಿಯ ವಿರುದ್ಧ ವೇಗಿ ಶೋಯಬ್ ಅಕ್ತರ್ "ನಾನು ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್‌ನೊಂದಿಗೆ ಗುತ್ತಿಗೆ ಹೊಂದಿಲ್ಲ. ನಾನು ಐಪಿಎಲ್‌ನಲ್ಲಿ ಆಡಲು ಪಾಕಿಸ್ತಾನದ ಬೋರ್ಡಿನ ನಿರಪೇಕ್ಷಣಾ ಪತ್ರ ಬೇಕಾಗಿಲ್ಲ" ಎಂದು ಬಂಡಾಯ ಎದ್ದಿದ್ದು ಮಾತ್ರವಲ್ಲದೆ ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ಐಪಿಎಲ್‌ನ ಹಣಬಲಕ್ಕೆ ಬಗ್ಗಿ ತನ್ನ ನಿಯಮಾವಳಿಯನ್ನೇ ಬದಲಿಸಿಕೊಂಡು ಅಕ್ತರ್‌ಗೆ ಅವಕಾಶ ಮಾಡಿಕೊಟ್ಟಿತು. ಮತ್ತೊಂದು ಕಡೆ ಆಸ್ಟ್ರೇಲಿಯಾದ ಶೇನ್‌ವಾರ್ನ್ "ಬಿಸಿಸಿಐನ ಐಪಿಎಲ್‌ನಲ್ಲಿ ಆಡುವುದೆಂದರೆ ಅದೊಂದು ಅದ್ಭುತ ಅನುಭವ. ಕ್ರಿಕೆಟ್ ಆಸ್ಟ್ರೇಲಿಯಾ ಅದನ್ನು ವಿರೋಧಿಸುವ ಬದಲು ಅದನ್ನು ಪ್ರೋತ್ಸಾಹಿಸಬೇಕು" ಎಂದು ತಣ್ಣನೆಯ ಬೆದರಿಕೆಯನ್ನು ಒಡ್ಡಿದ್ದಾನೆ. ಆಸ್ಟ್ರೇಲಿಯಾದ ಸೈಮಂಡ್ಸ್ ಮತ್ತು ಬ್ರೆಟ್ ಲೀಗಳ ಏಜೆಂಟ್ ಆದ ನೀಲ್ ಮಾಕ್ಸೆಲ್ ಅಂತೂ ಐಪಿಎಲ್ ಜೊತೆ ಆಡುವುದನ್ನು ನಿರ್ಬಂಧಿಸಿದರೆ ಆಟಗಾರರು ಬಂಡಾಯವೆದ್ದು "ಅವಧಿ ಪೂರ್ವ ನಿವೃತ್ತಿ ಘೋಷಿಸಿ ಸೀದಾ ಐಪಿಎಲ್ ಸೇರಿಕೊಳ್ಳುತ್ತಾರೆ" ಎಂದು ಎಚ್ಚರಿಸಿದ್ದಾನೆ.

ಇದೆಲ್ಲದರಿಂದ ಈ ಆಟಗಾರರಲ್ಲಾಗಲೀ, ಐಪಿಲ್ ಕ್ರೀಡೆಯಲ್ಲಾಗಲೀ ಕ್ರೀಡೆಯ ಮೂಲಸತ್ವವಾದ ಮನೋಲ್ಲಾಸವಾಗಲೀ, ಸೋಲುಗೆಲುವನ್ನು ದಾಟಿದ ಜೀವನ ಪ್ರೀತಿಯಾಗಲೀ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ಐಪಿಎಲ್ ಸಾರಾಂಶದಲ್ಲಿ ಕ್ರೀಡೆಯನ್ನು ಕೊಂದಿದೆ. ಇದು ಯಾವ ಕ್ರಿಡೆಗೂ ಮಾದರಿಯಾಗಬಾರದು. ■

No Comments



"ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮರಾಠಿಗರಿಗೆ ವಿಶೇಷ ಸೌಲಭ್ಯ ಕಲ್ಪಿಸುವುದಾಗಿ ಹೇಳಿರುವುದು ಖಂಡನೀಯ. ಅವರು ಚುನಾವಣೆಗೆ ಮುನ್ನವೇ ಜಾತಿ ರಾಜಕೀಯ ಮಾಡಲು ಹೊರಟಿದ್ದಾರೆ."

-ಬರಗೂರು ರಾಮಚಂದ್ರಪ್ಪ

"ಸಾರಾಯಿ ನಿಷೇಧಕ್ಕೆ ಮುನ್ನ ಅದರಿಂದಾಗುವ ಪರಿಣಾಮದ ಬಗ್ಗೆ ಯೋಚಿಸದೆ ಮದ್ಯ ತಯಾರಕರ ಲಾಬಿಗೆ ಮಣಿದು ನಿಷೇಧ ವಿಧಿಸಿದ ಯಡಿಯೂರಪ್ಪನವರೇ ಕಳ್ಳಬಟ್ಟಿ ದುರಂತಕ್ಕೆ ಪ್ರಮುಖ ಹೊಣೆಗಾರರು."

-ಜಿ.ಆರ್.ಕೃಷ್ಣದಾಸ್, ದಲಿತ ಸಂಘಟನೆಗಳ ಏಕೀಕರಣ ಚಳವಳಿಯ ಮುಖಂಡರು

"ಹಿಲರಿ ಕ್ಲಿಂಟನ್‌ರ ಹೋರಾಟ ಹೇಗೆ ಕೊನೆಗೊಳ್ಳಲಿದೆ ಎಂಬುದು ಮುಖ್ಯವಲ್ಲ, ಆದರೆ ಆಕೆ ಹಳೆಯ ಸಂಪ್ರದಾಯಗಳನ್ನು, ತಡೆಗೋಡೆಗಳನ್ನು ಕೆಡವಿ ಮುನ್ನುಗ್ಗಿದ್ದಾರೆ. ಅಮೆರಿಕದಲ್ಲೊಂದು ಹೊಸ ಬದಲಾವಣೆಯನ್ನು ತಂದು ನನ್ನ ಮತ್ತು ನಿಮ್ಮ ಪುತ್ರಿಯರಿಗೆಲ್ಲಾ ಧಾರಾಳ ಸ್ಫೂರ್ತಿ ನೀಡಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಕೃತಜ್ಞ"

-ಬರಾಕ್ ಒಬಾಮ, ಹಿಲರಿಯ ಜೊತೆ ಅಮೆರಿಕದ ಅಧ್ಯಕ್ಷ ಪದವಿಗೆ ಪೈಪೋಟಿ ನಡೆಸುತ್ತಿರುವ ಮತ್ತೊಬ್ಬ ಡೆಮಾಕ್ರಾಟ್ ಪಕ್ಷದ ಅಭ್ಯರ್ಥಿ

"ಮಹಿಳಾ ಪ್ರಾತಿನಿಧ್ಯದ ದೃಷ್ಟಿಯಲ್ಲಿ ಮಹಿಳಾ ಸಂಸದರನ್ನು ಹೊಂದಿರುವ 181 ದೇಶಗಳಲ್ಲಿ ಭಾರತ 134ನೇ ಸ್ಥಾನದಲ್ಲಿದೆ. ಭಾರತದ ರಾಜಕೀಯದಲ್ಲಿ ಮಹಿಳೆಯರ ಪಾಲು ಎಂದಿಗೂ ಶೇ.8ನ್ನು ದಾಟಿಲ್ಲ."

-ಒಂದು ವರದಿ

"ಬಂದೂಕಿದ್ದಿದ್ದರೆ ಗುಜರಾತ್ ಹತ್ಯಾಕಾಂಡಕ್ಕೆ ಕಾರಣನಾದ ನರೇಂದ್ರ ಮೋದಿಗೆ ಗುಂಡಿಕ್ಕಿ ಕೊಲ್ಲುತ್ತಿದ್ದೆ ಎಂದು ಇತ್ತೀಚೆಗೆ ನಿಧನರಾದ ಖ್ಯಾತ ನಾಟಕಕಾರ ವಿಜಯ್ ತೆಂಡೂಲ್ಕರ್ ಹೇಳುತ್ತಿದ್ದರು."

-ಪತ್ರಿಕಾ ವರದಿ



"ಅಂತಿಮವಾಗಿ ಇಲ್ಲಿ ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ವಿಷಯವೊಂದಿದೆ. ಐಪಿಎಲ್ ಈಗ ಕ್ರಿಕೆಟ್ ಮಾತ್ರವಲ್ಲ, ಇಲ್ಲಿ ಬಿಸಿನೆಸ್ ಮಾಡಲು ಬಂದಿರುವ ನಾವು, ಕಾರ್ಪೊರೇಟ್ ಜನಗಳಿದ್ದೇವೆ."

-ವಿಜಯ್ ಮಲ್ಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ಪೊಲೀಸರು ಮುನ್ನೆಚ್ಚರಿಕೆ ವಹಿಸಿದ್ದರೆ ಕಳ್ಳಬಟ್ಟಿ ದುರಂತ ಸಂಭವಿಸುತ್ತಿರಲಿಲ್ಲ."

-ಮದ್ಯಪಾನ ವಿರೋಧಿ ಆಂದೋಲನ ಸಮಿತಿ

"ಜಗತ್ತಿಗೇ ಶಾಂತಿ ಸಂದೇಶ ಸಾರುವ ಈ ಸ್ಥಳದ (ಲುಂಬಿನಿ) ದರ್ಶನವಾದ ಬಳಿಕ ನನಗೆ ಸಾಮ್ರಾಟ ಅಶೋಕನಂತೆಯೇ ಇನ್ನು ಮುಂದೆ ಶಸ್ತ್ರಾಸ್ತ್ರಗಳ ಅಗತ್ಯವಿಲ್ಲ ಎಂದು ಘೋಷಿಸಬೇಕೆನಿಸುತ್ತದೆ."

-ಪ್ರಚಂಡ, ನೇಪಾಳದ ಮಾವೋವಾದಿ ಪಕ್ಷದ ಅಧ್ಯಕ್ಷ

"ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಶ್ರೀಮಂತರ ಪರ ಮತ್ತು ಅಮೆರಿಕ ಪರವಾದ ಪಕ್ಷಗಳೇ."

-ಗೋವಿಂದಾಚಾರ್ಯ, ಬಿಜೆಪಿಯ ಮಾಜಿ ಕಾರ್ಯದರ್ಶಿ

ಎಲ್ಲಾ ಸರ್ವಾಧಿಕಾರಿಗಳಿಗೂ ಹೀಗೆ ಅನಿಸುವುದೇಕೆ?

"ಫಲಿತಾಂಶ ಬಂದ ದಿನ ಬೆಳಿಗ್ಗೆ ಎಂಟು ಗಂಟೆಗೂ ನಮಗೆ ಈ ರೀತಿ ಫಲಿತಾಂಶ ಬರುವ ನಿರೀಕ್ಷೆ ಇರಲಿಲ್ಲ."

-ಪ.ಬಂಗಾಳ ಪಂಚಾಯತ್ ಚುನಾವಣೆಯಲ್ಲಿ ಪರಾಭವ ಅನುಭವಿಸಿದ ನಂತರ ಆ ರಾಜ್ಯದ ಸಿಪಿಎಂ ಕಾರ್ಯದರ್ಶಿ ಹೇಳಿಕೆ

ಆ ಬ್ಯಾಂಕಿನಲ್ಲಿ ದುಡ್ಡು ಎಷ್ಟಿಡುತ್ತೀರಿ ಎಂಬುದು ಮುಖ್ಯ!

"ರೈತರಿಗೆ ನಬಾರ್ಡ್ ಇರುವ ರೀತಿಯಲ್ಲೇ ದಲಿತರಿಗಾಗಿಯೇ ವಿಶೇಷ ಬ್ಯಾಂಕೊಂದನ್ನು ಸ್ಥಾಪಿಸುವ ಯೋಜನೆ ಯೋಜನಾ ಆಯೋಗದ ಮುಂದಿದೆ."

-ಯೋಜನಾ ಆಯೋಗ

ಹಾವು ಸಾಯಲ್ಲ, ಕೋಲು ಮುರಿಯಲ್ಲ

"ಲೋಕಾಯುಕ್ತಕ್ಕೆ ಸಂಪೂರ್ಣ ಅಧಿಕಾರ ನೀಡಿದರೆ ಮಾತ್ರ ಅಕ್ರಮ ಗಣಿಗಾರಿಕೆ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಾಧ್ಯ."

-ಸಂತೋಷ್ ಹೆಗ್ಡೆ

ಕಳ್ಳಬಟ್ಟಿ ತಯಾರಕರು ಇವರಿಗಿಂತ ವಾಸಿ!

"ನನ್ನ ಮಗ ಕುಮಾರಸ್ವಾಮಿಗೆ ಕೆಟ್ಟ ಹೆಸರು ತರಲೆಂದೇ ಕಳ್ಳಭಟ್ಟಿ ದುರಂತವನ್ನು ಸೃಷ್ಟಿಸಲಾಗಿದೆ."

-ದೇವೇಗೌಡ




"ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ವ್ಯವಸ್ಥಿತ ಒಳಸಂಚಿನಿಂದ ಈ ಕಳ್ಳಬಟ್ಟಿ ದುರಂತ ನಡೆದಿದೆ."

-ಯಡಿಯೂರಪ್ಪ

"ಕೋಲಾರ ಜಿಲ್ಲೆಯ ಕಳ್ಳಬಟ್ಟಿ ದುರಂತಕ್ಕೆ ಸಮ್ಮಿಶ್ರ ಸರ್ಕಾರ ರಚಿಸಿದ್ದ ಜೆಡಿಎಸ್-ಬಿಜೆಪಿಯೇ ಕಾರಣ."

-ಕೆ. ಶ್ರೀನಿವಾಸ ಗೌಡ

ಕತ್ತೆಗಳಿಗೂ ಜನರಿಗೂ ವ್ಯತ್ಯಾಸವಿದೆ ವಾಟಾಳರೇ!



"ಈಗಿನ ಚುನಾವಣಾ ಪದ್ಧತಿಯ ಎಲ್ಲಾ ದೋಷಗಳು ನಿವಾರಣೆಯಾಗಬೇಕೆಂದರೆ ಕಡ್ಡಾಯ ಮತದಾನ ವ್ಯವಸ್ಥೆ ಜಾರಿಗೆ ಬರಬೇಕು"

-ವಾಟಾಳ್ ನಾಗರಾಜ್

ಬಾಯಲ್ಲಿ ಗೋವು, ತಲೆಯಲ್ಲಿ ಸಗಣಿ ಎನ್ನುವುದು ಇದಕ್ಕೆ!

"ಕೃಷಿ ಕೆಲಸಕ್ಕಾಗಿ ಗೋವುಗಳನ್ನು ಕೊಂಡೊಯ್ಯುತ್ತಿದ್ದ ಲಾರಿಯನ್ನು ತಡೆಯಲು ಹೋದ ಬಜರಂಗದಳದ ಕಾರ್ಯಕರ್ತರಿಗೆ ಹಾಸನದ ಬಳಿಯ ಗ್ರಾಮಸ್ಥರು ಹಿಡಿದು ಥಳಿಸಿದ್ದಾರೆ."

-ಪತ್ರಿಕಾವರದಿ

ಸರ್ವನಾಶ

"ಭಾರತದ ಶೇ.85ರಷ್ಟು ಜನರನ್ನು ನಗರಗಳಿಗೆ ಬರುವಂತೆ ಮಾಡುವುದೇ ನನ್ನ ದೂರದೃಷ್ಟಿ."

-ಪಿ.ಚಿದಂಬರಂ

ಬರಲಿರುವ ಕರಾಳ ದಿನಗಳು



ಕಂಡಹಾಗೆ

■ ಗೌರಿ ಲಂಕೇಶ್

ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಇವತ್ತು, ೇ 25, 2008 ಒಂದು ಕಪ್ಪು ದಿನ. ಯಾವುದು ಗ ಕೂಡದೆಂದು ನಾವೆಲ್ಲ ಆಶಿಸಿದ್ದೆವೋ ಅದು ದೆದುಹೋಗಿದೆ. ಬಿಜೆಪಿ ಎಂಬ ಫ್ಯಾಸಿಸ್ಟ್ ಪಕ್ಷ ಳ ಬಹುಮತದ ಹತ್ತಿರದಷ್ಟು ಸ್ಥಾನವನ್ನು ಡೆದು ಹಲವೇ ನಗಳಲ್ಲಿ ಅಧಿಕಾರದ ುಕ್ಕಾಣಿಯನ್ನು ಿಡಿಯಲಿದೆ. ನಂತರ ನಮ್ಮ ಾಜ್ಯದಲ್ಲಿ ಎಂತಹ ನಾಹುತಗಳು ುಭವಿಸಲಿವೆ ಎಂದು ಗಲೇ ಊಹಿಸಬಹುದು.





ಇವತ್ತು ಸುಷ್ಮ ಾಜ್, ನರೇಂದ್ರ ೋದಿ ಮತ್ತು ಂಕಯ್ಯ ನಾಯ್ಡು ರಹದ ಬಿಜೆಪಿ ಾಯಕರು ಯಡಿಯೂರಪ್ಪನ ೇತೃತ್ವ ಮತ್ತು ದಕ್ಷ ಡಳಿತದಿಂದಾಗಿಯೇ ಮ್ಮ ಪಕ್ಷ ಗೆದ್ದಿದೆ ಂದು ಹೇಳಿದ್ದಾರೆ. ದರೆ ಅದು ತ್ಯವಲ್ಲ. ಬದಲಿಗೆ ವತ್ತು ಬಿಜೆಪಿ ಪಕ್ಷ ರ್ನಾಟಕದಲ್ಲಿ ಗೆಲ್ಲುವುದಕ್ಕೆ ಕಾರಣ ಮಲ್ಲಿಕಾರ್ಜುನ ರ್ಗೆ, ಧರಂಸಿಂಗ್, ದೇವೇಗೌಡ ಮತ್ತು ುಮಾರಸ್ವಾಮಿ ತರಹದ ಜಾತ್ಯತೀತ ಪಕ್ಷಗಳ ಾಯಕರ ಬೇಜವಾಬ್ದಾರಿತನ ಎಂದರೆ ಪ್ಪಾಗಲಾರದು.

ಅಧಿಕಾರದಾಶೆ ಮತ್ತು ಪುತ್ರ ವ್ಯಾಮೋಹದಿಂದಾಗಿ ಬಿಜೆಪಿಯವರೊಂದಿಗೆ ಕೈಜೋಡಿಸಿದ ದೇವೇಗೌಡರು ಮೊದಲ ತಪ್ಪು ಮಾಡಿದರು. ಆನಂತರ ಬಿಜೆಪಿಯ ಮಂತ್ರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾಗ ಸುಮ್ಮನಿದ್ದ ಅವರ ಪುತ್ರ ಕುಮಾರಸ್ವಾಮಿ ಎರಡನೆ ತಪ್ಪು ಮಾಡಿದರು. ರಾಜ್ಯದಲ್ಲಿ ಬಿಜೆಪಿ ತನ್ನ ವಿಷದ ಕಳೆಯನ್ನು ಬಿತ್ತುತ್ತಿರುವಾಗ ಈ ಅಪ್ಪ-ತಂದೆ ಕುರುಡರಂತಿದ್ದು ಮೂರನೆ ತಪ್ಪು ಮಾಡಿದರು. ರಾಮಸೇತು ವಿವಾದಕ್ಕೆ ಸಂಬಂಧಪಟ್ಟಂತೆ ಬಿಜೆಪಿಗಳು ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ಬಸ್ಸಿಗೆ ಬೆಂಕಿ ಹಚ್ಚಿ ಇಬ್ಬರನ್ನು ಕೊಂದಾಗ ತಮ್ಮ ಪಕ್ಷದ ಬೆಂಬಲವನ್ನು ಹಿಂದೆ ಪಡೆಯದೇ ಕಾರಣ ಅಲ್ಲದ ಕಾರಣಕ್ಕೆ ಬೆಂಬಲವನ್ನು ವಾಪಸ್ಸು ಪಡೆದರು. ಹಾಗೆ ಮಾಡುವ ಮೂಲಕ ಬಿಜೆಪಿ ಪರ ಸಹಾನುಭೂತಿ ಉಂಟಾಗುವಂತೆ ಮಾಡಿದ್ದು ಅವರಿಬ್ಬರ ಐದನೇ ತಪ್ಪು.


ದೇವೇಗೌಡ ಮತ್ತವರ ಪುತ್ರರು ಮಾಡಿದ ತಪ್ಪುಗಳನ್ನಾದರೂ ಹೀಗೆ ಲೆಕ್ಕಾ ಹಾಕುತ್ತಾ ಹೋಗಬಹುದು. ಆದರೆ ಅದೇ ಮಾತನ್ನು ಕಾಂಗ್ರೆಸ್‌ನವರ ಬಗ್ಗೆ ಹೇಳಲಾಗುವುದಿಲ್ಲ, ಯಾಕೆಂದರೆ ಅವರು ಲೆಕ್ಕ ಹಾಕಲಾಗದಷ್ಟು ತಪ್ಪುಗಳನ್ನು ಮಾಡಿದ್ದಾರೆ. ಸುಮ್ಮನೆ ನೆನಪಿಸಿಕೊಳ್ಳಿ. ಯಡಿಯೂರಪ್ಪ ಒಂದೇ ಒಂದು ವಾರ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಆತ ನಡೆಸಿದ ಸೈಕಲ್ ಖರೀದಿ ಡೀಲ್ ಬಗ್ಗೆ ಯಾವ ಕಾಂಗ್ರೆಸ್ ನಾಯಕನಾದರೂ ಹೋರಾಟ ಮಾಡಿದನೇ? ಆರ್. ಅಶೋಕ್‌ನಂತಹ ಚೆಡ್ಡಿ ಮಂತ್ರಿ ಬೆಂಗಳೂರಿನ ಸುತ್ತಮುತ್ತಲಿನ ನೂರಾರು ಎಕರೆ ಭೂಮಿಯನ್ನು ಕಬಳಿಸುತ್ತಿದ್ದಾಗ ತಾನು ಬಡವರ ಪರ, ದೀನ ದಲಿತರ ಪರ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷದ ಯಾವ ನಾಯಕ ಚಕಾರವೆತ್ತಿದ? ಜನರ ಕೋಟ್ಯಂತರ ರೂಪಾಯಿಗಳನ್ನು ಯಡಿಯೂರಪ್ಪ ರಾಜ್ಯ ಖಜಾನೆಯಿಂದ ತೆಗೆದು ಮಠಗಳಿಗೆ ದಾನವಾಗಿ ನೀಡಿದಾಗ ಯಾವ ಜಾತ್ಯತೀತ ನಾಯಕ ವಿರೋಧಿಸಿದ?

ಇಂಥವರು ಇನ್ನು ಮುಂದೆ ವಿರೋಧ ಪಕ್ಷದ ಸ್ಥಾನದಲ್ಲಿದ್ದರೂ ಬಿಜೆಪಿಯ ದುರಾಡಳಿತ, ಕಬಳಿಕೆ, ವಂಚನೆ, ಭ್ರಷ್ಟಾಚಾರದ ಬಗ್ಗೆ ಯಾವ ತರಹದ ವಿರೋಧವನ್ನು ಒಡ್ಡಿಯಾರು? ಅದೆಂತಹ ಜನಪರ ನಿಲುವನ್ನು ತೆಗೆದುಕೊಂಡಾರು?

ಕಾಂಗ್ರೆಸ್ ಎಂದೂ ಒಂದು ಸಮರ್ಥ ವಿರೋಧ ಪಕ್ಷವಾಗಿ ಕೆಲಸ ಮಾಡಿಲ್ಲ, ಆ ಅನುಭವವೂ ಆ ಪಕ್ಷಕ್ಕಿಲ್ಲ. ಇದರ ಸದುಪಯೋಗ ಪಡೆದಿರುವ ಬಿಜೆಪಿ ಈಗ ಗೆದ್ದು ಬಂದು ನಮ್ಮ ರಾಜ್ಯದಲ್ಲಿ ಜನವಿರೋಧಿ ರಾಜಕಾರಣವನ್ನು ಉದ್ಘಾಟನೆ ಮಾಡಲಿದೆ.

ಆದರೆ ಜನಪರವಾಗಿ ಹೋರಾಡಲು ಮತ್ತು ನಿಜವಾದ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಲು ನಿಮ್ಮ ಈ ಪತ್ರಿಕೆ ಇದ್ದೇ ಇದೆ. ಕಳೆದ 28 ವರ್ಷಗಳಿಂದ 'ಲಂಕೇಶ್' ಮಾಡುತ್ತಾ ಬಂದಿರುವುದು ಅದನ್ನೇ ಅಲ್ಲವೆ?

ಇವತ್ತು ನಿಮ್ಮ ಈ ಪತ್ರಿಕೆಯ ಜವಾಬ್ದಾರಿ ಇನ್ನೂ ಹೆಚ್ಚಾಗಿದೆ. ಇಲ್ಲಿಯ ತನಕ ಮೃದು



ಹಿಂದೂತ್ವವನ್ನು ಅನುಸರಿಸುತ್ತಿದ್ದ ಕಾಂಗ್ರೆಸ್ ಪಕ್ಷವನ್ನು ಅಥವಾ ಢೋಂಗಿ ಜಾತ್ಯತೀತತೆಯನ್ನೇ ಪಾಲಿಸುತ್ತಿದ್ದ ಜೆಡಿಎಸ್ ಅನ್ನು ವಿರೋಧ ಪಕ್ಷವಾಗಿ ನಿಮ್ಮ ಈ ಪತ್ರಿಕೆ ತರಾಟೆಗೆ ತೆಗೆದುಕೊಳ್ಳುತ್ತಿತ್ತು. ಆದರೆ ಈಗ ಸ್ಪಷ್ಟವಾಗಿ ಕೋಮುವಾದಿಯಾದ, ಜಾತ್ಯತೀತತೆಯ ಸೋಂಕು ಇರದ, ಧರ್ಮದ ಹೆಸರಲ್ಲಿ ಗಲಭೆಗಳನ್ನು ಸೃಷ್ಟಿಸುವ, ಅಮಾಯಕರನ್ನು ಕೊಲ್ಲಿಸುವ ಬಿಜೆಪಿ ಪಕ್ಷವೇ ಆಡಳಿತ ಪಕ್ಷವಾಗಿ ಬರಲಿದೆ. ಈಗ ನಮ್ಮ ಹೋರಾಟ ಮತ್ತು ವಿರೋಧಕ್ಕೆ ಸ್ಪಷ್ಟವಾದ ಗುರಿ ಸಿಕ್ಕಂತಾಗಿದೆ, ನೇರ ಸವಾಲನ್ನು ಹಾಕಲು ಸರಿಯಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಇವತ್ತು ಬೆಳಗ್ಗೆ ಚುನಾವಣೆಯ ಫಲಿತಾಂಶ ಹೊರಬರಲಾರಂಭಿಸಿದಾಗ ಇತರೆ ಜಾತ್ಯತೀತರಂತೆ ನನಗೂ ಆತಂಕ, ಬೇಸರ, ಕಳವಳ ಆಗಿದ್ದು ನಿಜ. ಆದರೆ ಗಂಟೆಗಳು ಉರುಳಿದಂತೆ ರಾಜ್ಯದ ಅರ್ಧ ಜನ ವಿವಿಧ ಕಾರಣಗಳಿಗೆ ಬಿಜೆಪಿಯನ್ನು ಬೆಂಬಲಿಸಿದ್ದರೆ, ಇನ್ನರ್ಧ ಜನ ಆ ಪಕ್ಷವನ್ನು ವಿರೋಧಿಸಿದ್ದಾರೆಂಬ ವಿಷಯ ಒಂದಿಷ್ಟು ನೆಮ್ಮದಿ ಮೂಡಿಸಿತು.

ಬರುವ ದಿನಗಳು ಕರಾಳ ದಿನಗಳಾಗಲಿವೆ. ಅದನ್ನು ಎದುರಿಸುವ ಧೈರ್ಯ ಮತ್ತು ಶಕ್ತಿ ನಮ್ಮೆಲ್ಲರದ್ದಾಗಲಿ ಎಂದು ಆಶಿಸುವೆ. ■



ಭೂಗಳ್ಳ ಸ್ವಾಮಿಗೆ ಬಂಧನದ ಬರ್ತ್‌ಡೆ ಗಿಫ್ಟ್!

ಈತನ ಹೆಸರು ಗಣಪತಿ ಸಚ್ಚಿದಾನಂದ ಸ್ವಾಮಿ. ವಾಸಸ್ಥಳ ಮೈಸೂರಿನ ದತ್ತ ನಗರ. ವೃತ್ತಿ ಪೂಜೆ, ಪುನಸ್ಕಾರ, ಮಠ, ಮಂದಿರಗಳ ಹೆಸರಿನಲ್ಲಿ ಕಂಡವರ ಭೂಮಿಗೆ ಕೈಹಾಕುವುದು. ಈತನ ಗೆಳೆಯರು ಭಾರತದ ಮಾಜಿ ರಾಷ್ಟ್ರಪತಿ ಆರ್. ವೆಂಕಟರಾಮನ್‌ನಂತಹ ಹೈ ಪ್ರೊಫೈಲ್ ಜನಗಳೆ.

ಅಂದಹಾಗೆ, ಮೇ 27ಕ್ಕೆ ಈತನ ಬರ್ತ್‌ಡೆ ಇದೆ. ಈತನ ಈ ಹಿಂದಿನ ಬರ್ತ್‌ಡೇಗಳಿಗೆ ಖುದ್ದು ಮಾಜಿ ರಾಷ್ಟ್ರಪತಿ ಆರ್.ವೆಂಕಟರಾಮನ್ ಅವರೇ ಅಧ್ಯಕ್ಷತೆ ವಹಿಸಿದ್ದರು. ವಾರಗಟ್ಟಲೇ ನಡೆಯುತ್ತಿದ್ದ ಈ ಹುಟ್ಟು ಹಬ್ಬಗಳಿಗೆ ವಿವಿಧ ರಾಜ್ಯಗಳ ರಾಜ್ಯಪಾಲರು, ನ್ಯಾಯಾಧೀಶರುಗಳು, ದೊಡ್ಡ ದೊಡ್ಡ ಅಧಿಕಾರಿಗಳು ನೆರೆಯುತ್ತಿದ್ದರು. ಸಾಕಷ್ಟು ಉಡುಗೊರೆಗಳನ್ನೂ ಕೊಡುತ್ತಿದ್ದರು.

ಈ ವರ್ಷವೂ ಮತ್ತೆ ಅವನ ಬರ್ತ್‌ಡೆ ಬಂದಿದೆ. ಈ ಹಿಂದೆ ಸಿಕ್ಕಂತ ಗಿಫ್ಟ್‌ಗಳು ಈ ಬಾರಿ ಸಿಗುವ ಸೂಚನೆಯಿಲ್ಲ. ಬದಲಿಗೆ ಬರ್ತ್‌ಡೆ ಆಚರಣೆ ಪ್ರಾರಂಭವಾಗುವ ಮೊದಲೇ ಪೊಲೀಸರು ಇವನನ್ನು ಅರೆಸ್ಟ್ ಮಾಡುವ ಮೂಲಕ ಅಡ್ವಾನ್ಸ್ ಬರ್ತ್‌ಡೆ ಗಿಫ್ಟ್ ಕೊಟ್ಟಿದ್ದಾರೆ.

ಯಾಕೆ ಈ ಬಂಧನ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಮೊದಲೇ ಹೇಳಿದಂತೆ ಈತನ ಹುಟ್ಟುಗುಣವೇ ಕಂಡವರ ಭೂಮಿಗೆ ಕೈಹಾಕುವುದು. ಈ ಕಾರಣಕ್ಕಾಗಿಯೇ ಅವನನ್ನು ಎಳೆದುಕೊಂಡು ಹೋಗಿದ್ದಾರೆ.

ಮೈಸೂರಿನ ಇವನ ಆಶ್ರಮದ ಪಕ್ಕದಲ್ಲಿ ಸರ್ವೆ ನಂಬರ್ 106/1ರಲ್ಲಿ ಡಾ. ಎಸ್.ಆರ್. ಅನಿಲ್ ಕುಮಾರ್ ಎಂಬುವವರಿಗೆ ಸೇರಿದ ವಿಲೇಜ್ ಹ್ಯಾಲೆಟ್ ಎಂಬ ಹೋಟೆಲ್ ಇದೆ. ಜೊತೆಗೆ ಅಕ್ಕಪಕ್ಕದಲ್ಲಿ ಸರ್ವೆ ನಂಬರ್ 106/3 ಮತ್ತು 106/3ಎ ನಲ್ಲಿಯೂ ಬೇರೆ ಬೇರೆಯವರಿಗೆ ಸೇರಿದ ಜಾಗವಿದೆ. ಅದನ್ನೆಲ್ಲಾ ಈ ಸ್ವಾಮಿ ಗುಳುಂ ಮಾಡಿಕೊಂಡಿದ್ದಾನೆ. ಈ ಭೂಸ್ವಾಹ ಕಾರ್ಯಕ್ಕಾಗಿಯೇ 'ಶ್ರೀ ಗಣಪತಿ ಸಚ್ಚಿದಾನಂದ ಅವಧೂತ ಟ್ರಸ್ಟ್' ಎಂಬ ಭೂಗೆಬರಿಕೆಯ ಟ್ರಸ್ಟನ್ನೂ ಕಟ್ಟಿಕೊಂಡಿದ್ದಾನೆ. ದುರಂತ ಎಂದರೆ ಇತ ಈ ರೀತಿಯಲ್ಲಿ ಅಕ್ರಮವಾಗಿ ಭೂಮಿ ಕಬಳಿಸಿದ ಮತ್ತು ಕಬಳಿಸುತ್ತಿರುವ ಎಲ್ಲಾ ಕೃತ್ಯಗಳಿಗೆ ಮೈಸೂರು ಮಹಾನಗರ ಪಾಲಿಕೆ ಬೆಂಗಾವಲಾಗಿ ನಿಂತಿದೆ. ಇದು ನಡೆದದ್ದು ಹೆಚ್ಚು ಕಡಿಮೆ ಎಂಟೊಂಭತ್ತು ವರ್ಷಗಳ ಹಿಂದೆ. ಆಗಲೇ ಡಾ. ಅನಿಲ್ ಕುಮಾರ್ ಅವರು ಭೂಗಳ್ಳ ಸ್ವಾಮಿಯ ವಿರುದ್ಧ ಕಂಪ್ಲೇಂಟ್ ಕೊಟ್ಟಿದ್ದರು.

2001ರಲ್ಲಿ ಮೈಸೂರಿನ ಅವನ ಆಶ್ರಮದಲ್ಲಿ ಅದ್ದೂರಿಯಾಗಿ ಅವನ ಬರ್ತ್‌ಡೆ ನಡೆಯುತ್ತಿದ್ದ ಸಂದರ್ಭದಲ್ಲಿಯೇ, ಅವನ ಬರ್ತ್‌ಡೇಗೆ ಮಾಜಿ ರಾಷ್ಟ್ರಪತಿ ಆರ್. ವೆಂಕಟರಾಮನ್ ಬಂದಿದ್ದಾಗಲೇ ರಾಜ್ಯದ ಹಿರಿಯ ಚಿಂತಕರಾಗಿದ್ದ ದಿವಂಗತ ಕೆ.ರಾಮದಾಸ್ ಅವರು ತಮ್ಮ ಅನೇಕ ಸಮಾನ ಮನಸ್ಕ ಸ್ನೇಹಿತರನ್ನು ಕಟ್ಟಿಕೊಂಡು ಪ್ರತಿಭಟನೆಯನ್ನೂ ನಡೆಸಿ ಅವನ ಭೂಗಳ್ಳತನವನ್ನು ಬಯಲಿಗೆಳೆದಿದ್ದರು.

ಇಷ್ಟೆಲ್ಲಾ ಆದರೂ ಸ್ವಾಮಿಯನ್ನು ಏನೂ ಮಾಡಿಕೊಳ್ಳಲಾಗಿರಲಿಲ್ಲ. ಅಂದಿನಿಂದ ಇಂದಿನ ತನಕ ಆತ ಕಂಡವರ ಭೂಮಿಯನ್ನು ಕದಿಯುವ ಕೆಲಸವನ್ನು ಚಾಚೂ ತಪ್ಪದೇ ಮಾಡಿಕೊಂಡು ಬಂದಿದ್ದಾನೆ.

ಆದರೆ, ಈಗ ಡಾ. ಅನಿಲ್ ಕುಮಾರ್ ಅವರು ಮತ್ತೆ ಮೊನ್ನೆ ಮಾರ್ಚ್ 26, 2008ರಂದು ಅವನ ವಿರುದ್ಧ ಕಂಪ್ಲೇಂಟ್ ಕೊಟ್ಟಿದ್ದಾರೆ. ಪೊಲೀಸರು ಜಾಗಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲಾ ಪರಿಶೀಲಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಆ ಕಾಗದ ಪತ್ರಗಳೆಲ್ಲಾ ಫೋರ್ಜರಿ ಎಂಬುದು ಸಾಬೀತಾದ ಮೇಲೆ ಅದಕ್ಕೆ ಉತ್ತರಿಸುವಂತೆ ಸಚ್ಚಿದಾನಂದ ಸ್ವಾಮಿಗೆ ನೋಟೀಸ್ ಜಾರಿ ಮಾಡಿದ್ದಾರೆ. ಆದರೆ, ದೊಡ್ಡ ದೊಡ್ಡ ಜನಗಳ ಬೆಂಬಲವಿರುವ ಸ್ವಾಮಿಜಿ ಇಂತಹ ಕಾಂಚಿಪೀಂಚಿ ನೋಟೀಸ್‌ಗೆ ಕೇರ್ ಮಾಡುತ್ತಾನೆಯೆ? ಸ್ವಾಮಿಯಿಂದ ಉತ್ತರ ಬಾರದಿದ್ದಾಗ ಖುದ್ದು ಪೊಲೀಸರೇ ಅವನ ಹೇಳಿಕೆ ದಾಖಲಿಸಿಕೊಂಡು ಬರಲು ಅವನ ಆಶ್ರಮಕ್ಕೆ ಹೋಗಿದ್ದಾರೆ. ಅಲ್ಲಿಯೂ ಆತ ಪೊಲೀಸರಿಗೆ ಬೆಲೆ ಕೊಟ್ಟಿಲ್ಲ. ಕೊನೆಗೆ ಖುದ್ದು ಜಿಲ್ಲಾಧಿಕಾರಿಯೇ ಮಧ್ಯ ಪ್ರವೇಶಿಸಿ ಅವನನ್ನು ಎಳೆದುಕೊಂಡು ಬರಲು ಆದೇಶಿದ್ದಾರೆ. ಅದರಂತೆ ಪೊಲೀಸರು ಅವನ ಬರ್ತ್‌ಡೆಗೆ ಎರಡು ದಿನ ಮುಂಚಿತವಾಗಿಯೇ ಒದ್ದು ಎಳೆದುಕೊಂಡು ಹೋಗಿದ್ದಾರೆ.

ಸಂಜೆವರೆಗೂ ಸ್ಟೇಶನ್‌ನಲ್ಲಿ ಖೈದಿಯಂತೆ ಕುಳಿತಿದ್ದ ಸಚ್ಚಿದಾನಂದ ಕೊನೆಗೂ ಜಾಮೀನು ಪಡೆದು ಆಶ್ರಮಕ್ಕೆ ಮರಳಿದ್ದಾನೆ.

ಏನೇ ಆದರೂ ಕಳೆದ ಹತ್ತು ವರ್ಷಗಳಿಂದ ತನ್ನನ್ನು ಯಾರೂ ಮುಟ್ಟಲು ಸಾಧ್ಯವಿಲ್ಲ ಎಂಬ ಠೇಂಕಾರದಿಂದ ಬೀಗುತ್ತಿದ್ದ ಸಚ್ಚಿದಾನಂದ ಎಂಬ ಭೂಗಳ್ಳನಿಗೆ ಕೊನೆಗೂ ದೇಶದ ಕಾನೂನನ್ನು ಕಲಿಸುವ ಸಾಹಸಕ್ಕೆ ಮೈಸೂರು ಪೊಲೀಸರು ಕೈಹಾಕಿದ್ದು ಪ್ರಶಂಸಾರ್ಹವೇ ಸರಿ. ಈ ಕಾರ್ಯವನ್ನು ಅವರು ಮುಂದುವರೆಸಿ ಅವನ ಎಲ್ಲಾ ಅಪರಾಧಗಳನ್ನು ಬಯಲಿಗೆಳೆದು ತನಿಖೆ ಮಾಡಬೇಕು. ಅವನಿರಬೇಕಾದುದು ಆಶ್ರಮದಲ್ಲಲ್ಲ, ಜೈಲಿನಲ್ಲಿ ಎಂಬುದನ್ನು ಎಲ್ಲರಿಗೂ ತೋರಿಸಬೇಕು. ■

ತಂತಿ ಮೇಲಿನ ನಡಿಗೆ

ಬಿಜೆಪಿಗೆ ಇವತ್ತಿನ ಪರಿಸ್ಥಿತಿ ನಿಜಕ್ಕೂ ತಂತಿ ಮೇಲಿನ ನಡಿಗೆಯಂತಿದೆ. ಕರ್ನಾಟಕದ 224 ಸದಸ್ಯಬಲದ ವಿಧಾನಸಭೆಯಲ್ಲಿ ಸರಳ ಬಹುಮತ ಅಂದರೆ ಕನಿಷ್ಠ 113 ಸ್ಥಾನಬಲ ಬೇಕು. ಆದರೆ ಬಿಜೆಪಿಗೆ ಈಗ ಸಿಕ್ಕಿರುವುದು ಕೇವಲ 110 ಸ್ಥಾನ ಮಾತ್ರ.

ಇದು ಗೆಲುವೂ ಅಲ್ಲ, ಸೋಲೂ ಅಲ್ಲಾ ಎಂಬಂತ ತ್ರಿಶಂಕು ಸ್ವರ್ಗ. ರಾಜ್ಯದ ಮತದಾರ ಬಿಜೆಪಿಗೆ ಸಂಪೂರ್ಣ ಬಹುಮತ ನೀಡಲು ಯಾಕೊ ಹಿಂಜರಿದಿದ್ದಾನೆ. ವಿಜಯದ ಹೆಬ್ಬಾಗಿಲವರೆಗೂ ಧಾವಿಸಿ ನುಗ್ಗಿ ಬಂದ ಬಿಜೆಪಿ ಹಠಾತ್ತಾನೆ 110 ರಲ್ಲಿ ನಿಂತುಬಿಟ್ಟದ್ದು ಮುಂದಿನ ದಿನಗಳಲ್ಲಿ ಅಭದ್ರ ಸರ್ಕಾರಕ್ಕೆ ದಾರಿ ಮಾಡಿಕೊಡಬಹುದಷ್ಟೇ.

ಕಾಂಗ್ರೆಸ್ 80, ದಳದ 28 ಹೊರತುಪಡಿಸಿದರೆ ಸ್ವತಂತ್ರರು ಆರು ಜನ ಗೆದ್ದಿದ್ದಾರೆ. ಇವರಲ್ಲಿ ಕನಕಗಿರಿಯ ಶಿವರಾಜ್ ತಂಗಡಿಗೆ ಮಾತ್ರ ಬಿಜೆಪಿ ಬಂಡಾಯ ಅಭ್ಯರ್ಥಿ. ಉಳಿದ ಐವರು ಕಾಂಗ್ರೆಸ್ ಬಂಡಾಯದವರು. ಬಿಜೆಪಿ ಈಗ ಅತೀ ದೊಡ್ಡ ಪಕ್ಷವಾಗಿರುವುದರಿಂದ ರಾಜ್ಯಪಾಲರು ಸಹಜವಾಗೇ ಸರ್ಕಾರ ರಚಿಸುವಂತೆ ಬಿಜೆಪಿಗೇ ಆಹ್ವಾನ ನೀಡಬೇಕು. ಆದರೆ ಯಡಿಯೂರಪ್ಪ ನಾಳೆ ಸದನದಲ್ಲಿ ಬಹುಮತ ಸಾಬೀತು ಪಡಿಸಬೇಕೆಂದರೆ ಸ್ವತಂತ್ರ ಅಭ್ಯರ್ಥಿಗಳ ಪೈಕಿ ಕನಿಷ್ಠ ಇಬ್ಬರ ಬೆಂಬಲ ಗಿಟ್ಟಿಸಲೇಬೇಕು.

ಮೇಲ್ನೋಟಕ್ಕೆ ಇದು ಸಾಧ್ಯ ಅನ್ನಿಸಬಹುದು.

ಆದರೆ

ಕಾಂಗ್ರೆಸ್ ಹಾಗೂ ದೇವೇಗೌಡರು ಅಧಿಕಾರವಿರದೆ ಸುಮ್ಮನಿರುತ್ತಾರಾ? ಒಂದು ವೇಳೆ ಬಿಜೆಪಿ ಬಹುಮತ ಸಾಬೀತು ಮಾಡಿ ಐದು ವರ್ಷ ಅಧಿಕಾರದಲ್ಲಿ ಇದ್ದೇ ಬಿಟ್ಟರೆ ಅಷ್ಟರಲ್ಲಿ ಜೆಡಿಎಸ್ ಕರಗಿ ಹೋಗಿರುತ್ತದೆ.

ದೇವೇಗೌಡರಿಗೆ ಈ ಸತ್ಯ ಗೊತ್ತಿಲ್ಲದೆ ಏನಿಲ್ಲ. ಕೇವಲ ಎರಡನೇ ವಿರೋಧ ಪಕ್ಷವಾಗಿ ಕುಳಿತು ಕಾಲ ಹಾಕುವ ಮನೋಸ್ಥಿತಿ ಮತ್ತು ಸಹನೆ ಗೌಡರಿಗಾಗಲೀ ಅಥವಾ ಕುಮಾರಸ್ವಾಮಿಗಾಗಲಿ ಖಂಡಿತಾ ಇಲ್ಲ. ಕಾಂಗ್ರೆಸ್ ಕೂಡ ಇದಕ್ಕೆ ಹೊರತಲ್ಲ, ಅಂತ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಗೌಡರಿಗುಳಿಯುವ ಆಯ್ಕೆ ಎರಡೇ.

ಒಂದು ಸದನದಲ್ಲಿ ಯಡ್ಡಿ ವಿಶ್ವಾಸ ಮತ ಕೋರುವಾಗ ಬಿಜೆಪಿಗೆ ಅದು ಸಿಗದಂತೆ ನೋಡಿಕೊಂಡು ಅಂದರೆ ಬಂಡಾಯ ಬಿಜೆಪಿಯನ್ನು ಹೊರತುಪಡಿಸಿ ಉಳಿದ ಐವರು ಸ್ವತಂತ್ರರನ್ನು ತಮ್ಮೊಂದಿಗೆ ಹಿಡಿದಿಟ್ಟುಕೊಳ್ಳುವುದು. ಅಕಸ್ಮಾತ್ ಯಡ್ಡಿಗೆ ವಿಶ್ವಾಸಮತ ಯಾಚನೆಯಲ್ಲಿ ಸೋಲುಂಟಾದರೆ ನಂತರ ಎರಡನೇ ಅತಿದೊಡ್ಡ ಪಕ್ಷವಾದ ಕಾಂಗ್ರೆಸ್‌ಗೆ ಸರ್ಕಾರ ರಚಿಸುವ ಅವಕಾಶ ಸಿಗಬಹುದು. ಅಷ್ಟರಲ್ಲಿ ಕಾಂಗ್ರೆಸ್ (80), ಜೆಡಿಎಸ್ (28) ಹಾಗೂ ಸ್ವತಂತ್ರರು (5) ಒಟ್ಟಿಗೆ 113 ಜನ ಸೇರಿ ಈ ಕಾರ್ಯತಂತ್ರ ರೂಪಿಸಿದರೆ ಬಿಜೆಪಿಗೆ ತನ್ನ ಹೊಸ ಸರ್ಕಾರ ಉಳಿಸಿಕೊಳ್ಳುವುದು ನಿಜಕ್ಕೂ ಕಷ್ಟವಾಗಬಹುದು.

ಈ ಸಾಧ್ಯತೆಗಳ ಬಗ್ಗೆ ಈಗಾಗಲೇ ಮಾತುಗಳು ಕೇಳಿಬರುತ್ತಿವೆ. ಆದರೆ ಇದರಲ್ಲಿ ಯಾವುದೇ ಆಗಲಿ ಸಂಭವಿಸಲು ಕಾಂಗ್ರೆಸ್-ಜೆಡಿಎಸ್ ನಡುವೆ ಮೊದಲಿಗೆ ಹೊಂದಾಣಿಗೆ ಬರಬೇಕಾಗುತ್ತದೆ.

ಈ ಕಾಂಗ್ರೆಸ್‌ನವರ ಚರಿತ್ರೆ ನೋಡಿದರೆ ಅವರಿಗೆ ಕಡಿಮೆ ಸೀಟುಗಳು ಬಂದಿದ್ದಾಗಲಷ್ಟೇ ಸುಮ್ಮನೆ ಕೂತಿದ್ದು ಬಿಟ್ಟರೆ ಉಳಿದಂತೆ ಅನ್ಯರೊಂದಿಗೆ ಸೇರಿಕೊಂಡು ತನ್ನ ವಿರೋಧಿ ಸರ್ಕಾರ ಬೀಳಿಸಿ ತಾನೇ ಅಧಿಕಾರಕ್ಕೆ ಬಂದಿರುವ ಹತ್ತಾರು ಉದಾಹರಣೆಗಳಿವೆ. ತೀರಾ ಇತ್ತೀಚೆಗೆ ಗೋವಾ ರಾಜ್ಯದಲ್ಲಿ ನಡೆದದ್ದೂ ಇಂತದ್ದೇ ನಾಟಕೀಯ ರಾಜಕಾರಣ. ಅಲ್ಲಿ 40 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕತ್ವದ ಎರಡೂ ಮೈತ್ರಿ ಕೂಟಕ್ಕೆ ತಲಾ 20 ಸದಸ್ಯ ಬೆಂಬಲವಿತ್ತು. ಅವರಲ್ಲಿ ಒಬ್ಬ ಸದಸ್ಯ ಪಕ್ಷಾಂತರ ಮಾಡಿದರೂ ಸರ್ಕಾರ ಉರುಳುತ್ತಿತ್ತು. 2005 ರಿಂದ ಇದುವರೆಗೂ ಗೋವಾದಲ್ಲಿ ಇದೇ ತರಹದ ರಾಜಕೀಯ ನಾಟಕಗಳು ನಡೆಯುತ್ತಲೇ ಬಂದಿದೆ. ಸಾರಾಂಶದಲ್ಲಿ ಹೇಳಬೇಕೆಂದರೆ ಅಧಿಕಾರ ಸಿಗುವ ಅವಕಾಶ ಬಂದರೆ ಕಾಂಗ್ರೆಸ್ ಸುಮ್ಮನಿರಲಾರದು.



ಸದ್ಯಕ್ಕಂತೂ ಬಿಜೆಪಿಗೆ ತೀರಾ ಆತಂಕ ಪಡುವ ದುಃಸ್ಥಿತಿಯಂತೂ ಇಲ್ಲ, ಆದರೆ ಬಿಜೆಪಿ ಸರ್ಕಾರದ ಅಳಿವು-ಉಳಿವುಗಳೆಲ್ಲಾ ಬಹುತೇಕ ಸ್ವತಂತ್ರರ ಕೈಲಿರುತ್ತವೆ. ಅವರು ಬಿಜೆಪಿಗೆ ಬೆಂಬಲಿಸಲು ಒಪ್ಪಿಕೊಂಡರೆ, ಒಪ್ಪಿಕೊಂಡಂತೆ ಬದ್ಧವಾಗಿದ್ದರೆ ಬಿಜೆಪಿಗೆ ಯಾವುದೇ ಆತಂಕ ಎದುರಾಗುವುದಿಲ್ಲ, ಆದರೆ ಇದು ಎಷ್ಟು ದಿನ?

ಇನ್ನು ಆರೆಂಟು ತಿಂಗಳಲ್ಲಿ ಸಂಸತ್ ಚುನಾವಣೆಗಳು ಬರಲಿವೆ. ಅಲ್ಲಿ ಅಖಾಡಕ್ಕಿಳಿಯುವ ಯಾವುದೇ ಪಕ್ಷಕ್ಕೆ ರಾಜ್ಯದಲ್ಲಿ ತಮ್ಮದೇ ಪಾರ್ಟಿ ಅಧಿಕಾರದಲ್ಲಿದ್ದರೆ ಒಳ್ಳೆಯದೆಂದು ಕಾತರ ಇದ್ದೇ ಇರುತ್ತದೆ.

ಬಿಜೆಪಿ-ಕಾಂಗ್ರೆಸ್-ಜೆಡಿಎಸ್ ಎಲ್ಲರಿಗೂ ಅನ್ವಯಿಸುವ ಮಾತಿದು. ಹಾಗಾಗಿ ಈ ಅಭಿಪ್ರಾಯ ಬಲಗೊಂಡಷ್ಟೂ ಬಿಜೆಪಿಗೆ ಸಮಸ್ಯೆಗಳು ಜಾಸ್ತಿಯಾಗುತ್ತಾ ಹೋಗಲಿವೆ.


ಮೇ 25 ರ ಭಾನುವಾರ ಮಧ್ಯಾಹ್ನದ ವೇಳೆಗೆ ಎಲ್ಲಾ 224 ಕ್ಷೇತ್ರಗಳ ಫಲಿತಾಂಶ ಪ್ರಕಟವಾಗಿ ಬಿಜೆಪಿ 110 ಸ್ಥಾನ ಗೆದ್ದ ಮೇಲೂ ಯಡಿಯೂರಪ್ಪ ಮುಖದಲ್ಲಿ ಅಂತ ಸಂಭ್ರಮ ಕಾಣಿಸಲಿಲ್ಲ ಎಂಬುದನ್ನು ನೀವೂ ಗಮನಿಸಿದಿರಾ?

ಯಡ್ಡಿಗೆ ತಾನು ಸಿಎಂ ಆಗುತ್ತಿರುವ ಬಗ್ಗೆ ಸಂತೋಷವಿದೆಯಾದರೂ ಸದಾ ಅನ್ಯರ ಹಂಗಿನಲ್ಲಿ ಅತಂತ್ರ ಪರಿಸ್ಥಿತಿಯಲ್ಲೇ ಮುಂದುವರೆಯಬೇಕಾಗಿ ಬಂತಲ್ಲಾ ಎಂಬ ದುಗುಡ ಆವರಿಸಿಕೊಂಡಿದೆ. ■

ತಲೆ ಕೆಳಗಾದ ಚುನಾವಣಾ ಸಮೀಕ್ಷೆಗಳು

ಈ ಬಾರಿಯ ರಾಜ್ಯದ ಚುನಾವಣಾ ಜನಾದೇಶ ಹೆಚ್ಚೂ ಕಡಿಮೆ ಎಲ್ಲಾ ಸಮೀಕ್ಷೆಗಳನ್ನೂ ತಲೆಕೆಳಗೆ ಮಾಡಿಟ್ಟಿದೆ.

ಸಿಎನ್‌ಎನ್-ಐಬಿಎನ್ ನಡೆಸಿದ ಸಮೀಕ್ಷೆ ಕಾಂಗ್ರೆಸ್‌ಗೆ 86, ಬಿಜೆಪಿಗೆ 79 ಹಾಗೂ ಜೆಡಿಎಸ್‌ಗೆ 45 ಸ್ಥಾನಗಳು ಬರುತ್ತವೆ ಎಂದು ಹೇಳಿತ್ತು. ಕನ್ನಡದ ಸುವರ್ಣ ಟಿ.ವಿ. ಚಾನೆಲ್ ನಡೆಸಿದ ಸಮೀಕ್ಷೆ ಕಾಂಗ್ರೆಸ್ 69 ರಿಂದ 76 ಸ್ಥಾನಗಳನ್ನು, ಬಿಜೆಪಿ 104 ರಿಂದ 114 ಸ್ಥಾನಗಳನ್ನು ಹಾಗೂ ಜೆಡಿಎಸ್ 35 ರಿಂದ 40 ಸ್ಥಾನಗಳನ್ನು ಪಡೆಯುತ್ತವೆ ಎಂದು ಹೇಳಿತ್ತು. ಇನ್ನು 'ದಿ ವೀಕ್' ನಡೆಸಿದ ಸಮೀಕ್ಷೆಯಲ್ಲಿ ಕಾಂಗ್ರೆಸ್ 89 ರಿಂದ 75 ಸ್ಥಾನಗಳನ್ನು, ಬಿಜೆಪಿ 83 ರಿಂದ 91 ಸ್ಥಾನಗಳನ್ನು ಹಾಗೂ ಜೇಡಿಎಸ್ 13 ರಿಂದ 21 ಸ್ಥಾನಗಳನ್ನು ಪಡೆಯಲಿದೆ ಎಂದು ಹೇಳಿತ್ತು. ಐಎನ್‌ಎಕ್ಸ್ ನ್ಯೂಸ್ ಸುದ್ದಿವಾಹಿನಿ ನಡೆಸಿದ ಸಮೀಕ್ಷೆ ಕಾಂಗ್ರೆಸ್ 49, ಬಿಜೆಪಿ 120 ಹಾಗೂ ಜೆಡಿಎಸ್ 42 ಸ್ಥಾನಗಳನ್ನು ಪಡೆಯುವುದಾಗಿ ಹೇಳಿತ್ತು. ನಮ್ಮದೇ ಪತ್ರಿಕೆ ಕೂಡ ಕಾಂಗ್ರೆಸ್ ಏಕಮಾತ್ರ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದ್ದು ಬಿಜೆಪಿ ಮತ್ತು ಜೆಡಿಎಸ್‌ಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳನ್ನು ಪಡೆಯಲಿವೆ ಎಂದು ಹೇಳಿತ್ತು.



ಆದರೆ, ಈ ಚುನಾವಣೆ ಬಹುತೇಕ ಈ ಎಲ್ಲಾ ಸಮೀಕ್ಷೆಗಳನ್ನು ತಲೆಕೆಳಗು ಮಾಡಿ ಅವೆಲ್ಲಕ್ಕಿಂತ ಭಿನ್ನವಾದ ಫಲಿತಾಂಶವನ್ನು ತಂದಿಟ್ಟಿದೆ. ಇದ್ದುದರಲ್ಲಿ ಎನ್‌ಡಿಟಿವಿ ನಡೆಸಿದ ಸಮೀಕ್ಷೆಯೇ ವಾಸ್ತವಕ್ಕೆ ಹತ್ತಿರವಾಗಿದೆ. ಉಳಿದೆಲ್ಲ ಸಮೀಕ್ಷೆಗಳು ಜನರ ನಾಡಿಮಿಡಿತವನ್ನು ಹಿಡಿಯುವಲ್ಲಿ ಬಹಳಷ್ಟು ವಿಫಲವಾಗಿವೆ.

ವಾಸ್ತವದಲ್ಲಿ ಈ ಸಮೀಕ್ಷೆಗಳನ್ನು ಕಂಡೇ ಕೆಲವು ಸ್ವಾಮೀಜಿಗಳೂ ತಾವು ನುಡಿದಿದ್ದ ಭವಿಷ್ಯವನ್ನು ತಾವು ಹಾಗೇ ಹೇಳೇ ಇಲ್ಲ ಎಂದುಬಿಟ್ಟರು. ಉದಾಹರಣೆಗೆ ಸೋಮಯಾಜಿ ಸ್ವಾಮಿ ಮೊದಲು ಯಡಿಯೂರಪ್ಪನವರೇ ಮುಖ್ಯಮಂತ್ರಿಯಾಗ್ತಾರೆ ಎಂದು ಭವಿಷ್ಯ ನುಡಿದಿದ್ದರು. ಆದರೆ, ಬಹುತೇಕ ಸಮೀಕ್ಷೆಗಳು ಬಿಜೆಪಿಗೆ ಸ್ಪಷ್ಟ ಬಹುಮತ ಸಿಗುವುದಿಲ್ಲ ಎಂದು ಹೇಳಿದ ಮೇಲೆ ಹಾಗೂ ಶಿಕಾರಿಪುರದಲ್ಲಿ ಯಡ್ಡಿಯ ವಿರುದ್ಧ ಮತ್ತೊಬ್ಬ ಪ್ರಬಲ ಅಭ್ಯರ್ಥಿ ಎಸ್.ಬಂಗಾರಪ್ಪ ಕಣಕ್ಕಿಳಿದ ಮೇಲೆ ಈ ಸ್ವಾಮಿಗೆ ತಾನು ಹೇಳಿದ ಭವಿಷ್ಯದ ಮೇಲೆಯೇ ನಂಬಿಕೆ ಹೊರಟು ಹೋಗಿ ತಾವು ಹಾಗೆ ಹೇಳೇ ಇಲ್ಲ ಎಂದು ತಮ್ಮ ಮಾತನ್ನೇ ಬದಲಿಸಿಬಿಟ್ಟರು.

ಒಂದಂತೂ ಸ್ಪಷ್ಟವಾಯಿತು. ಈ ಸ್ವಾಮಿಗಳಿಗೆ ತಮ್ಮ ಜೋತಿಷ್ಯಾಸ್ತ್ರದಲ್ಲಿ ಇದ್ದ ನಂಬಿಕೆಗಿಂತ ಚುನಾವಣಾ ಸಮೀಕ್ಷೆಗಳ ಮೇಲೆಯೇ ಜಾಸ್ತಿ ವಿಶ್ವಾಸವಿದೆ ಎಂದಾಯಿತು. ■

ಕಾನ್ ಚಿತ್ರೋತ್ಸವ: ಭಾರತ ಚಿತ್ರರಂಗದ ಬಡತನ!

ಕಳೆದ ಕೆಲ ವರ್ಷಗಳಂತೆ ಈ ವರ್ಷವೂ ಐಶ್ವರ್ಯ ರೈ ಎಂಬ ತ್ರಿಲೋಕ ಸುಂದರಿ ಅಂದಚಂದದ ಉಡುಗೆಗಳನ್ನು ತೊಟ್ಟು ಪ್ರತಿಷ್ಠಿತ ಕಾನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಕಂಗೊಳಿಸುತ್ತಿರುವ ಫೋಟೋಗಳನ್ನು ನಮ್ಮ ಹಲವು ದಿನಪತ್ರಿಕೆಗಳು ಪ್ರಕಟಿಸಿರುವುದನ್ನು ನೋಡಿರುತ್ತೀರಿ. ಆದರೆ ಆ ಪತ್ರಿಕೆಗಳು ವರದಿ ಮಾಡದೇ ಇರುವ ಅಂಶ ಯಾವುದೆಂದರೆ ಈ ವರ್ಷವೂ ಆ ಚಿತ್ರೋತ್ಸವದಲ್ಲಿ ಒಂದೇ ಒಂದು ಭಾರತೀಯ ಚಿತ್ರ ಸ್ಪರ್ಧೆಯಲ್ಲಿ ಇರದಿರುವುದು.

ಇವತ್ತು ಇತರೆ ಎಲ್ಲಾ ಚಿತ್ರೋದ್ಯಮಗಳಿಗಿಂತ ಭಾರತದ ಚಿತ್ರೋದ್ಯಮ ಅತ್ಯಂತ ದೊಡ್ಡದು ಎಂದು ಹಲವರು ಹೆಮ್ಮೆ ಪಡುತ್ತಿರುವಾಗಲೇ ಭಾರತದ ಯಾವ ಸಿನಿಮಾವೂ ಈ ಚಿತ್ರೋತ್ಸವಕ್ಕೆ ಆಯ್ಕೆಯಾಗಿಲ್ಲ, ಆದರೆ ವಿಚಿತ್ರವೆಂದರೆ ಭಾರತದ ಕತೆಯಾಧಾರಿತ, ತಮಿಳು ಭಾಷಾಧಾರಿತ, ಚೆನ್ನೈನಲ್ಲೇ ಹತ್ತು ದಿನಗಳಲ್ಲಿ ಚಿತ್ರೀಕರಣಗೊಂಡಿದ್ದ, ಸಿಂಗಾಪೂರ್‌ನ ನಿರ್ದೇಶಕ ಎರಿಕ್ ಖೂ ಎಂಬುವವರು ನಿರ್ಮಿಸಿರುವ 'ಮೈ ಮ್ಯಾಜಿಕ್' ಎಂಬ ತಮಿಳು ಚಿತ್ರ ಇದೇ ಕಾನ್ ಚಿತ್ರೋತ್ಸವದಲ್ಲಿ ಪ್ರಶಸ್ತಿಗಾಗಿ ಪೈಪೋಟಿ ನಡೆಸುತ್ತಿದೆ! ಇನ್ನೂ ಆಶ್ಚರ್ಯ ಎಂದರೆ ಈ ತಮಿಳು ಚಿತ್ರದ ಸಿಂಗಾಪೂರ್ ನಿರ್ದೇಶಕನಿಗೆ ತಮಿಳಿನ ಒಂದಕ್ಷರವೂ ಬಾರದಿರುವುದು!

ಭಾರತದ ಕಥೆ, ಭಾರತದ ಭಾಷೆಯನ್ನಿಟ್ಟುಕೊಂಡು ಆ ಭಾಷೆ ಗೊತ್ತಿರದ ವಿದೇಶಿ ನಿರ್ದೇಶಕನೊಬ್ಬ ಕಾನ್ ಚಿತ್ರೋತ್ಸವದಲ್ಲಿ ಪೈಪೋಟಿ ನಡೆಸಬಲ್ಲ ಚಿತ್ರವೊಂದನ್ನು ತಯಾರಿಸುತ್ತಾನೆಂದರೆ, ನಮ್ಮ ದೇಶದವರೇ ಇಂತಹ ಒಂದು ಚಿತ್ರವನ್ನು ಮಾಡಲಿಕ್ಕಾಗಲಿಲ್ಲ ಎಂದರೆ ಏನರ್ಥ?

ಹಾಗೆ ನೋಡಿದರೆ ಕಾನ್ ಚಿತ್ರೋತ್ಸವಕ್ಕೂ ಭಾರತದ ಚಿತ್ರೋಧ್ಯಮಕ್ಕೂ ಸಂಬಂಧ ಕಡಿದು ಹತ್ತಾರು ವರ್ಷಗಳೇ ಉರುಳಿ ಹೋಗಿವೆ. ಭಾರತದ ಚಿತ್ರೋದ್ಯಮ ಕೊನೆಯ ಬಾರಿಗೆ ಕಾನ್ ಪ್ರಶಸ್ತಿ ಪಡೆದದ್ದು 1994ರಲ್ಲಿ, ಶಾಜಿ ಎನ್ ಕರೂನ್ ಅವರ 'ಸ್ವಾಹಂ' ಚಿತ್ರಕ್ಕೆ. ಅದನ್ನು ಬಿಟ್ಟರೆ ಭಾರತದ ಯಾವ ಚಿತ್ರವೂ ಕಾನ್ ಚಿತ್ರೋತ್ಸವದಲ್ಲಿ ಮಹತ್ತರ ಮುನ್ನಡೆಯನ್ನು ಸಾಧಿಸಿಲ್ಲ ಎಂದರೆ ಭಾರತದ ಚಿತ್ರೋದ್ಯಮ ಯಾವ ಮಟ್ಟಿಗೆ ಸೊರಗಿದೆ ಎಂಬುದು ಅರ್ಥವಾಗುತ್ತದೆ.

ಭಾರತದ ಚಿತ್ರರಂಗ ಯಾವಾಗಲೂ ಇಷ್ಟೇ ಕೆಟ್ಟದಾಗಿತ್ತು ಎಂದೇನೂ ಅಲ್ಲ, ಕಾನ್ ಚಿತ್ರೋತ್ಸವ 1946ರಲ್ಲಿ ಪ್ರಾರಂಭವಾದ ಮೊದಲ ವರ್ಷದಲ್ಲಿಯೇ ಚೇತನ್ ಆನಂದ್ ಅವರ 'ನೀಚಾ ನಗರ್' ಚಿತ್ರ 'ಗ್ರ್ಯಾಂಡ್ ಪ್ರಿ'ಯನ್ನು ಗೆದ್ದುಕೊಂಡಿತು. ಇದನ್ನು ರಷ್ಯಾದ ಸುಪ್ರಸಿದ್ಧ ಕಾದಂಬರಿಕಾರ ಮ್ಯಾಕ್ಸಿಮ್ ಗೋರ್ಕಿಯವರ 'ದಿ ಲೋಯರ್ ಡೆಪ್ತ್' ಎಂಬ ಕಾದಂಬರಿಯನ್ನಾಧರಿಸಿ ನಿರ್ಮಿಸಲಾಗಿತ್ತು. ಮತ್ತೆ 1954ರಲ್ಲಿ ಬಿಮಲ್ ರಾಯ್ ಅವರ 'ದೋ ಭೀಘಾ ಜಮೀನ್' ಚಿತ್ರಕ್ಕೂ ಹಾಗೂ 1956ರಲ್ಲಿ ಸತ್ಯಜಿತ್ ರೆ ಅವರ 'ಪಾಥರ್ ಪಾಂಚಾಲಿ' ಚಿತ್ರಕ್ಕೂ ಇದೇ ಗೌರವ ದೊರಕಿತ್ತು. ಹೀಗೆ, ಕಾನ್ ಚಿತ್ರೋತ್ಸವ ಆರಂಭವಾದ ಮೊದಲೆರಡು ದಶಕಗಳಲ್ಲಿ 17 ಭಾರತೀಯ ಚಿತ್ರಗಳು ಚಿತ್ರೋತ್ಸವದಲ್ಲಿ ಪೈಪೋಟಿ ನಡೆಸಿದ್ದವು. 1970 ಮತ್ತು 1980ರ ದಶಕದಲ್ಲೂ ಮ್ರಿನಲ್ ಸೇನ್‌ರವರ 'ಏಕ್ ದಿನ್ ಪ್ರತಿದಿನ್', 'ಜೆನಿಸಿಸ್' ನಂತಹ ಚಿತ್ರಗಳು, ಎಂ.ಎಸ್.ಸತ್ಯು ಅವರ 'ಗರಮ್ ಹವಾ', ಶ್ಯಾಮ್ ಬೆನೆಗಲ್‌ರವರ 'ನಿಶಾಂತ್', ಬಿಮಲ್ ರಾಯ್ ಅವರ 'ಘಾರೆ ಬೈರೆ' ಈ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿದ್ದವು. ಇದಾದನಂತರ ಕಳೆದ ಇಪ್ಪತ್ತು ವರ್ಷಗಳಲ್ಲಿ ಭಾರತೀಯ ಚಿತ್ರರಂಗ ಕಾನ್ ಚಿತ್ರೋತ್ಸವದಲ್ಲಿ ಅತ್ಯಂತ ಕಳಪೆ ಪ್ರದರ್ಶನ ತೋರುತ್ತಿದೆ.

ದುರಂತವೆಂದರೆ ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಚಿತ್ರರಂಗ, ಕಾನ್‌ನಲ್ಲಿ ಐಶ್ವರ್ಯ ರೈಳ ಸೌಂದರ್ಯದ ಬಗ್ಗೆ ಮತ್ತು ಭಾರತದ ಸರ್ಕಾರ ಅಲ್ಲಿ ಸ್ಥಾಪಿಸುವ ಸ್ಟಾಲ್ ಮೂಲಕ ಭಾರತದ ಸಿನಿಮಾಗಳ ಮಾರಾಟದ ಬಗ್ಗೆಯೇ ಹೆಚ್ಚು ಗಮನಕೊಡುತ್ತಿದೆ.



ಇವತ್ತು ಜಾಗತೀಕರಣಗೊಂಡಿರುವ ಜಗತ್ತಿನಲ್ಲಿ ಕಲಾತ್ಮಕತೆ, ಬೌದ್ಧಿಕತೆ ಮತ್ತು ನೈಜ ಪ್ರತಿಭೆಗಿಂತ ಆಂಗಿಕ ಸೌಂದರ್ಯ ಮತ್ತು ಮಾರಕಟ್ಟೆಯೇ ಮುಖ್ಯ ಎಂಬುದನ್ನು ಕಾನ್ ಚಿತ್ರೋತ್ಸವದ ಮೂಲಕ ಭಾರತ ಚಿತ್ರರಂದ ವ್ಯಕ್ತವಾಗುತ್ತಿರುವುದು ಕೈ ಹುಣ್ಣಿಗೆ ಹಿಡಿದ ಕನ್ನಡಿಯಂತಿದೆ. ■

ಬಿಜೆಪಿಯ ಗೆಲುವು:
ಕೆಳಜಾತಿಗಳ ವಿರುದ್ಧ ಮೇಲ್ಜಾತಿಗಳ ಪ್ರತೀಕಾರ

2008ರ ಚುನಾವಣಾ ಫಲಿತಾಂಶಗಳು ಬಂದಿವೆ. ಬಿಜೆಪಿ ಸರಳ ಬಹುಮತ ಪಡೆಯುವ ಹೊಸ್ತಿಲಲ್ಲಿ ಮುಗ್ಗರಿಸಿದೆ. ಆದು ಸೀಟುಗಳ ಲೆಕ್ಕದಲ್ಲಿ. ಆದರೆ ಓಟು ಶೇರಿನ ಪ್ರಮಾಣದಲ್ಲೂ ಸಹ ಬಿಜೆಪಿ 2004ಕ್ಕಿಂತ ಹೆಚ್ಚು ಸುಧಾರಿಸಿಕೊಂಡಿದೆ. ಹಳೇ ಮೈಸೂರಿನ ಗ್ರಾಮಾಂತರ ಜಿಲ್ಲೆಗಳನ್ನು ಹೊರತು ಪಡಿಸಿದರೆ ಬೆಂಗಳೂರು ನಗರ ಮತ್ತು ಹೊರ ಪ್ರದೇಶಗಳನ್ನು ಒಳಗೊಂಡಂತೆ ಮಧ್ಯ ಕರ್ನಾಟಕ, ಬಾಂಬೆ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕಗಳಲ್ಲಿ ಬಿಜೆಪಿಗೆ ಓಟು ಹಾಕಿದವರ ಸಂಖ್ಯೆ ಹೆಚ್ಚಾಗಿದೆ ಮತ್ತು ಆದ್ದರಿಂದಲೇ ಅವರು ಪಡೆದ ಸೀಟುಗಳು ಹೆಚ್ಚಾಗಿವೆ.

ಮೇಲ್ನೋಟಕ್ಕೆ ಒಂದು ಪ್ರಜಾತಂತ್ರದಲ್ಲಿ ಇದು ಬಿಜೆಪಿಗೆ ಜನರು ನೀಡಿದ ಮನ್ನಣೆ ಎಂದೇ ಎನಿಸಿದರೂ ಭಾರತದಂತ ಶ್ರೇಣೀಕೃತ ಸಮಾಜದಲ್ಲಿ ಈ "ಜನ" ಎಂದರೆ ಎಲ್ಲಾ ಜನರು ಎಂದೇನೂ ಅರ್ಥವಲ್ಲ.

ಭಾರತೀಯ ಸಮಾಜದಂತೆಯೇ ಕರ್ನಾಟಕದ ಸಮಾಜ ಸಹ ಶ್ರೇಣೀಕೃತವಾಗಿ ವಿಭಜಿತವಾಗಿರುವುದರಿಂದ ಅವುಗಳ ಆಸಕ್ತಿಗಳು ಬೇರೆ ಬೇರೆಯಾಗಿರುತ್ತವೆ. ಹಾಗೆಯೇ ಸಾಕಷ್ಟು ಸಂದರ್ಭದಲ್ಲಿ ಅವು ಪರಸ್ಪರ ವಿರುದ್ಧದ ಹಿತಾಸಕ್ತಿಯನ್ನು ಹೊಂದಿರುತ್ತವೆ. ಆದ್ದರಿಂದಲೇ ಬಿಜೆಪಿಯ ಮುಖಂಡರುಗಳು ಬಿಜೆಪಿ ಪರವಾದ ಅಲೆಯಿದೆಯೆಂದು ಘೋಷಿಸುತ್ತಿದ್ದಾಗ ಈ ಅಲೆಯ ವರ್ಗ ಮತ್ತು ಜಾತಿ ಸ್ವಭಾವ ಏನು ಎಂಬುದನ್ನು ಅರ್ಥ ಮಾಡಿಕೊಳ್ಳದೇ ಅದು ಪ್ರಜಾತಂತ್ರದ ಪರವೋ ಅಥವಾ ವಿರುದ್ಧವೋ ಎಂದು ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ.

ಬಿಜೆಪಿಯು ಮೊದಲಿಂದಲೂ ಪ್ರತಿಪಾದಿಸಿಕೊಂಡು ಬಂದಿದ್ದು ಮೇಲ್ಜಾತಿ ಮತ್ತು ಮೇಲ್ವರ್ಗದ ಹಿತಾಸಕ್ತಿಗಳನ್ನೇ. ಈ ಬಾರಿಯೂ ಅವರು ಒಟ್ಟಾರೆ ತಮ್ಮ ಪಕ್ಷದಿಂದ ಸ್ಪರ್ಧಿಸಲು ನೀಡಿರುವ ಸೀಟುಗಳಲ್ಲಿ ಬಹುಪಾಲು ಮೇಲ್ಜಾತಿಗಳೇ, ಅದರಲ್ಲೂ ಲಿಂಗಾಯತರೇ ಆಗಿದ್ದಾರೆ. ಅಷ್ಟು ಮಾತ್ರವಲ್ಲದೆ ಯಡಿಯೂರಪ್ಪನವರೇ ಮುಖ್ಯಮಂತ್ರಿ ಎಂದು ಬಿಂಬಿಸಿದ್ದು ಸಹ ಲಿಂಗಾಯತರ ಓಟುಗಳನ್ನು ಪಡೆದುಕೊಳ್ಳಲೆಂದೇ ಆಗಿತ್ತು. ಅಷ್ಟು ಮಾತ್ರವಲ್ಲ, ಧೈರ್ಯವಿದ್ದರೆ ಕಾಂಗ್ರೆಸ್‌ನವರು ಖರ್ಗೆಯನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ ಎಂದು ಯಡಿಯೂರಪ್ಪನವರು ನೀಡಿದ ಪಂಥಾಹ್ವಾನದ ಹಿಂದೆಯೂ ವಾಸ್ತವವಾಗಿ ಇದ್ದದ್ದು ಕೆಳಜಾತಿಗಳ ವಿರುದ್ಧ ಮೇಲ್ಜಾತಿಗಳ ಸಂಘಟಿತ ಯುದ್ಧ ಘೋಷಣೆಯೇ!

ಹೀಗಾಗಿ ಈ ಬಾರಿ ಬಿಜೆಪಿ ನಡೆಸಿದ ಚುನಾವಣಾ ಸಮರ ವಾಸ್ತವವಾಗಿ ಕೆಳಜಾತಿಗಳ ಹೆಚ್ಚುತ್ತಿದ್ದ ಪ್ರಜ್ಞೆಯ ವಿರುದ್ಧವೇ ಆಗಿತ್ತು. ಆದರೆ ದುರಂತವೆಂದರೆ ಮೇಲ್ಜಾತಿ ಪ್ರಬಲರೆಲ್ಲರೂ ಬಿಜೆಪಿಯ ಹಿಂದೆ ಒಟ್ಟುಗೂಡುತ್ತಿರುವುದನ್ನು ಮನಗಂಡು ಮೇಲ್ಜಾತಿಯ ದುರ್ಬಲರನ್ನು ಮತ್ತು ಕೆಳಜಾತಿಯ ಎಲ್ಲಾ ಬಡವರನ್ನು ಒಂದೆಡೆ ಸೇರಿಸಬಲ್ಲಂತ ಯಾವ ಪಕ್ಷಗಳು ಅಥವಾ ಸಂಘಟನೆಗಳೂ ಕರ್ನಾಟಕದಲ್ಲಿ ಈ ಬಾರಿ ಪ್ರಬಲವಾಗಿರಲಿಲ್ಲ. ಕಾಂಗ್ರೆಸ್ ಪಕ್ಷವಂತೂ ಬಿಜೆಪಿಯಿಂದ ಆಕ್ರಮಣ ಮತ್ತು ಶೋಷಣೆಗೊಳಗಾದ ಶೂದ್ರ, ಅಲ್ಪಸಂಖ್ಯಾತ ಮತ್ತು ದಲಿತರಲ್ಲಿ ವಿಶ್ವಾಸ ತುಂಬುವ ಯಾವ ಕೆಲಸವನ್ನೂ ಮಾಡಲಿಲ್ಲ. ಕಾಂಗ್ರೆಸ್‌ನ ಪಾರಂಪರಿಕವಾದ ಜನವಿರೋಧಿ ಯೋಜನೆಗಳ ಬಲಿಪಶುಗಳಾಗಿರುವ ಜನರಲ್ಲಿ ಅವರ ಬಗ್ಗೆ ವಿಶ್ವಾಸ ಇಟ್ಟುಕೊಳ್ಳುವ ಯಾವ ಕಾರಣವೂ ಇರಲಿಲ್ಲ ಎಂಬುದು ಮತ್ತೊಂದು ವಿಷಯ!

> ಈ ಬಾರಿ ಬಿಜೆಪಿ ನಡೆಸಿದ ಚುನಾವಣಾ ಸಮರ ವಾಸ್ತವವಾಗಿ ಕೆಳಜಾತಿಗಳ ಹೆಚ್ಚುತ್ತಿದ್ದ ಪ್ರಜ್ಞೆಯ ವಿರುದ್ಧವೇ ಆಗಿತ್ತು. ಆದರೆ ದುರಂತವೆಂದರೆ ಮೇಲ್ಜಾತಿ ಪ್ರಬಲರೆಲ್ಲರೂ ಬಿಜೆಪಿಯ ಹಿಂದೆ ಒಟ್ಟುಗೂಡುತ್ತಿರುವುದನ್ನು ಮನಗಂಡು ಮೇಲ್ಜಾತಿಯ ದುರ್ಬಲರನ್ನು ಮತ್ತು ಕೆಳಜಾತಿಯ ಎಲ್ಲಾ ಬಡವರನ್ನು ಒಂದೆಡೆ ಸೇರಿಸಬಲ್ಲಂತ ಯಾವ ಪಕ್ಷಗಳು ಅಥವಾ ಸಂಘಟನೆಗಳೂ ಕರ್ನಾಟಕದಲ್ಲಿ ಈ ಬಾರಿ ಪ್ರಬಲವಾಗಿರಲಿಲ್ಲ.

ಇನ್ನು ಜೆಡಿಎಸ್ ಪಕ್ಷ ಅಪ್ಪ ಮಕ್ಕಳ ಪಕ್ಷವಾಗಿರುವುದು ಮಾತ್ರವಲ್ಲದೆ ಅಧಿಕಾರ ಲಾಲಸೆಗೆ ಯಾವ ಬಗೆಯ ಅವಕಾಶವಾದಕ್ಕೂ ಸಿದ್ಧ ಎಂಬುದನ್ನು ಸಾಬೀತುಪಡಿಸಿದೆ. ಇನ್ನು ಈ ಬಾರಿ ಬಿಎಸ್‌ಪಿ ತಾನು 2004ರಲ್ಲಿ ಪಡೆದ ಓಟುಗಳಲ್ಲಿ ಶೇ.25ರಷ್ಟು ಪಡೆಯುವುದರಲ್ಲೂ ವಿಫಲವಾಗಿರುವುದು ಬಿಜೆಪಿಯ ವಿರುದ್ಧ ಒಂದು ಪ್ರಬಲ ಪ್ರತಿಪಕ್ಷದ ಕೊರತೆಯನ್ನು ಎತ್ತಿ ತೋರಿಸುತ್ತದೆ. ಯಾವುದೇ ಬಿಜೆಪಿ ವಿರೋಧಿ ಪಕ್ಷವೂ ಸಹ ಪ್ರಬಲ ಅಭ್ಯರ್ಥಿಗಳ ವಿರುದ್ಧ ಗೆಲ್ಲಬಲ್ಲ ದುರ್ಬಲ ಸಮುದಾಯದ ಅಭ್ಯರ್ಥಿಯನ್ನು ಹಾಕುವುದರಲ್ಲಾಗಲಿ ಅದರ ಬಗ್ಗೆ ಗಮನ ಕೊಟ್ಟು ಪ್ರಚಾರ ಮಾಡುವುದರಲ್ಲಾಗಲೀ ಯಾವುದೇ ಬಗೆಯ ಗಂಭೀರತೆಯನ್ನು ತೋರಲಿಲ್ಲ. ಬದಲಿಗೆ ಮಿಕ್ಕೆಲ್ಲಾ ಪಕ್ಷಗಳಿಗಿಂತ ಸಾಕಷ್ಟು ಮುಂಚೆಯೇ ಚುನಾವಣೆ ಸಿದ್ಧತೆ ಮಾಡಿಕೊಂಡಿದ್ದ ಬಿಜೆಪಿ ಮೇಲ್ಜಾತಿಗಳ ಓಟುಗಳನ್ನು ಸದೃಢೀಕರಿಸಿಕೊಂಡು ಕಣಕ್ಕಿಳಿಯಿತು. ಕಳೆದ ಬಾರಿ ಬಿಜೆಪಿ ಶೇ.30ರಷ್ಟು ಓಟು ಶೇರುಗಳನ್ನು ಮತ್ತು ಕಾಂಗ್ರೆಸ್ ಶೇ.35ರಷ್ಟು ಓಟು ಶೇರುಗಳನ್ನು ಪಡೆದುಕೊಂಡಿದ್ದವು. ಈ ಬಾರಿ ಕಾಂಗ್ರೆಸ್‌ನ ಓಟು ಶೇರು ಒಂದೆರಡು ಶೇಕಡಾ ಹಾಗೆ ಹೀಗೆ ಆಗಬಹುದಾದರೂ ಬಿಜೆಪಿಯ ಓಟು ಶೇರು ಕನಿಷ್ಠ ಶೇ.4-5ರಷ್ಟು ಹೆಚ್ಚಾಗಿರುವ ಸೂಚನೆಗಳಿವೆ. ಮೇಲ್ನೋಟಕ್ಕೆ ಕಾಣುವಂತೆ ಇವೆಲ್ಲವೂ ಕಾಂಗ್ರೆಸ್, ಜೆಡಿಎಸ್ ನಡುವೆ ಹರಿದು ಹಂಚಿ ಹೋಗುತ್ತಿದ್ದ ಮೇಲ್ಜಾತಿ ಮತಗಳನ್ನು ಬಿಜೆಪಿ ಗಟ್ಟಿಯಾಗಿ ತನ್ನೆಡೆಗೆ ಸದೃಢೀಕರಿಸಿಕೊಂಡಿದ್ದು ಎದ್ದು ಕಾಣುತ್ತಿದೆ.

ಇದಕ್ಕೆ ಪ್ರತಿಯಾಗಿ ಬಿಜೆಪಿಯೇತರ ಆಯ್ಕೆಯಾಗಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ದುರ್ಬಲರ, ಅಲ್ಪಸಂಖ್ಯಾತರ ಮತ್ತು ಶೂದ್ರರ ವಿಶ್ವಾಸವನ್ನು ಗಳಿಸಿ, ಅದನ್ನು ಮತಗಳನ್ನಾಗಿ ಪರಿವರ್ತಿಸಿಕೊಳ್ಳುವ ಯಾವ ಗಂಭೀರ ಪ್ರಯತ್ನವನ್ನೂ ಮಾಡಲಿಲ್ಲ. ಮೂಲಭೂತವಾಗಿ ಮೇಲ್ವರ್ಗ ಮತ್ತು ಮೇಲ್ಜಾತಿಗಳ ಹಿತಾಸಕ್ತಿಗೆ ಬದ್ಧವಾಗಿದ್ದ ಈ ಪಕ್ಷಗಳು ಅದನ್ನು ಮಾಡಲು ಸಾಧ್ಯವೂ ಇರಲಿಲ್ಲ. ಕೋಮುವಾದದ ಬಲಿಪಶುಗಳಾಗಿರುವ ಅಲ್ಪಸಂಖ್ಯಾತರು ಮತ್ತು ಸಾಂಪ್ರದಾಯಿಕವಾಗಿ ಕಾಂಗ್ರೆಸ್‌ಗೆ ಓಟು ಹಾಕುತ್ತಿದ್ದ ಹಲವು ಕ್ಷೇತ್ರಗಳ ದಲಿತರನ್ನು ಬಿಟ್ಟರೆ ಮಿಕ್ಕ ಯಾವ ಸಮುದಾಯವು ಇಡಿಯಾಗಿ ಯಾವುದೇ ಬಿಜೆಪಿಯೇತರ ಪಕ್ಷಗಳನ್ನು ನೆಚ್ಚಿಕೊಂಡಂತೆ ಕಾಣುತ್ತಿಲ್ಲ. ಅದಕ್ಕೆ ಪ್ರತಿಯಾಗಿ ಬಳ್ಳಾರಿ, ರಾಯಚೂರು, ಇನ್ನಿತ್ಯಾದಿ ಕಡೆಗಳಲ್ಲಿ ಬಿಜೆಪಿಯು ಪರಿಶಿಷ್ಟ ಸಮುದಾಯವನ್ನೂ ಮತ್ತು ಕೆಲವು ಕಡೆ ಆದಿವಾಸಿ ಸಮುದಾಯವನ್ನೂ ತನ್ನೆಡೆ ಸೆಳೆಯುವಲ್ಲಿ ಸಫಲವಾಗಿರುವುದು ಈ ಚುನಾವಣೆ ಎತ್ತಿ ತೋರಿಸುತ್ತಿದೆ. ಈ ಎಲ್ಲಾ ಮತಗಳು ಈ ಬಾರಿ ಬಿಜೆಪಿಯ ಪಾಲಾಗಿರುವುದಕ್ಕೆ ಗಣಿ ಹಣ, ಜಾತಿ ವೈಷಮ್ಯದ ಉದ್ದೀಪನದಂತ ಹಲವಾರು ನಿರ್ದಿಷ್ಟ ಕಾರಣಗಳಿದ್ದರೂ ಅದೇ ಅವಕಾಶವನ್ನು ಬಿಜೆಪಿಯೇತರ ಪಕ್ಷಗಳು ಪಡೆಯಲಾಗಲಿಲ್ಲ ಎಂಬುದೇ ಇತರ ಪಕ್ಷಗಳಲ್ಲಿರುವ ಜಡತೆ ಮತ್ತು ಬಿಜೆಪಿಯಂತ ಫ್ಯಾಸಿಸ್ಟ್ ಪಕ್ಷಗಳ ಬೆಳವಣಿಗೆಗೆ ಅನುವು ಮಾಡಿ ಕೊಡುತ್ತದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡುತ್ತದೆ.

ಹೀಗೆ ಒಟ್ಟಾರೆಯಾಗಿ ಈ ಬಾರಿ ಚುನಾವಣೆಯಲ್ಲಿ ಮೇಲ್ಜಾತಿಗಳು ತಮ್ಮ ರಾಜಕೀಯ ಪ್ರಾಬಲ್ಯವನ್ನು ಬಿಜೆಪಿಯ ಮೂಲಕ ಸದೃಢೀಕರಿಸಿಕೊಂಡರೆ ದುರ್ಬಲ ಜಾತಿ ಮತ್ತು ವರ್ಗಗಳ ಜನತೆಗೆ ಬಿಜೆಪಿ ಪ್ರತಿನಿಧಿಸುವ ಹಿತಾಸಕ್ತಿಗಳ ಬಗ್ಗೆ ಸಾಕಷ್ಟು ಸಂದೇಹವಿದ್ದರೂ ಅದರ ವಿರುದ್ಧ ನಿರ್ಣಾಯಕ ಮತದಾನ ಮಾಡುವ ಅವಕಾಶವೇ ಇಲ್ಲವಾಗಿತ್ತು. ಹೀಗೆ ಈ ಬಾರಿ ನಮ್ಮ ಸಂಸದೀಯ ಪ್ರಜಾತಂತ್ರ ಏಕಪಕ್ಷೀಯವಾಗಿ ಸಮಾಜದ ಪ್ರಬಲರಿಗೆ ಅವಕಾಶ ಮಾಡಿಕೊಟ್ಟಿತ್ತೇ ವಿನಃ ದುರ್ಬಲರಿಗಲ್ಲ. ಈ ಅವಕಾಶವನ್ನು ಬಿಜೆಪಿ ಬಹಳ ಚೆನ್ನಾಗಿಯೇ ಬಳಸಿಕೊಂಡಿತು.

ಇಂದು ಬಿಜೆಪಿಗೆ ಅತ್ಯಧಿಕವಾಗಿ ಓಟು ಶೇರು ನೀಡಿರುವ ಸಮಾಜದ ವರ್ಗಗಳು ಮತ್ತು ಪ್ರದೇಶಗಳು ಯಾವುದೆಂದು ನೋಡಿದರೂ ಇದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಮೊದಲನೆಯದಾಗಿ ಬಿಜೆಪಿ ಹೆಚ್ಚು ಸೀಟುಗಳನ್ನು ಪಡೆದುಕೊಂಡಿರುವ ಪ್ರದೇಶಗಳನ್ನು ನೋಡಿ. ಬೆಂಗಳೂರು ನಗರ ಮತ್ತು ಹೊರಭಾಗದ ಪ್ರಾಂತ್ಯಗಳು. ಇಲ್ಲಿ ಎಲ್ಲಾ ಪಕ್ಷಗಳಿಂದ ಅಭ್ಯರ್ಥಿಗಳಾಗಿ ನಿಂತವರೆಲ್ಲಾ ರಿಯಲ್ ಎಸ್ಟೇಟ್ ಕುಳಗಳೇ. ಎಲ್ಲರೂ ಹೆಚ್ಚೂ ಕಡಿಮೆ ಭ್ರಷ್ಟರೆಂದು ಹೆಸರು ಪಡೆದುಕೊಂಡವರೇ. ಮತ್ತು ಅಂತಹವರಲ್ಲಿ ಕುಖ್ಯಾತರೆಲ್ಲಾ ಬಿಜೆಪಿಯ ಅಭ್ಯರ್ಥಿಗಳಾಗಿದ್ದರು. ಬೆಂಗಳೂರಿನ 28 ಸೀಟುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಬಿಜೆಪಿಯೇ ಪಡೆದಿದೆ. ಹಾಗೆ ನೋಡಿದಲ್ಲಿ ಬೆಂಗಳೂರಿನ "ಸುಶಿಕ್ಷಿತ" ಕ್ಷೇತ್ರಗಳಲ್ಲೆಲ್ಲಾ ಬಿಜೆಪಿಯ ಅಭ್ಯರ್ಥಿಗಳೆ ಗೆದ್ದಿದ್ದಾರೆ. ಇಲ್ಲಿ ನಡೆದ ಮತದಾನದ ಪ್ರಮಾಣ ಇಡೀ ಕರ್ನಾಟಕದಲ್ಲೇ ಅತ್ಯಂತ ಕಡಿಮೆಯಾಗಿದ್ದರೂ ಮತ್ತು ಬಿಜೆಪಿ ಅಭ್ಯರ್ಥಿಗಳು ಇತರ ಅಭ್ಯರ್ಥಿಗಳಷ್ಟೇ ಕುಲಗೆಟ್ಟವರೆಂದು ತಿಳಿದಿದ್ದರೂ ಕೋಮುವಾದದಿಂದ ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುತ್ತಾರೆ ಎಂದು ತಿಳಿದಿದ್ದರೂ ಬಿಜೆಪಿಗೆ ಓಟು ಹಾಕಿರುವುದರ ಹಿಂದೆ ಯಾವ ಮನಸ್ಥಿತಿ ಕೆಲಸ ಮಾಡಿರುತ್ತದೆ? ಅದರ ಹಿಂದೆ ಕಾಂಗ್ರೆಸ್ ಮತ್ತು ಜೆಡಿಎಸ್ ದುರ್ಬಲರ ಅರ್ಥಾತ್ ಕೊಳಕರ ಪಕ್ಷವೆಂಬ ಸುಶಿಕ್ಷಿತ ಅಹಮ್ಮಿನ ಭಾವನೆಯಲ್ಲವೇ?

ಅದೇರೀತಿ ಬಿಜೆಪಿಗೆ ಅತ್ಯಧಿಕವಾಗಿ ಸೀಟುಗಳನ್ನು ಗಳಿಸಿಕೊಟ್ಟಿರುವ ಪ್ರದೇಶವೆಂದರೆ ಗದಗ, ಹಾವೇರಿ, ರಾಯಚೂರು, ದಾವಣಗೆರೆ, ಬಾಗಲಕೋಟೆ ಮತ್ತು ಸ್ವಲ್ಪಮಟ್ಟಿಗೆ ಬೆಳಗಾಂ. ಇಲ್ಲೆಲ್ಲಾ ಮೀಸಲಾತಿ ಕ್ಷೇತ್ರಗಳನ್ನು ಬಿಟ್ಟರೆ ಬಿಜೆಪಿ ಅತಿ ಹೆಚ್ಚು ಸೀಟುಗಳನ್ನು ನೀಡಿದ್ದು ಲಿಂಗಾಯತರಿಗೇ. ಇಲ್ಲಿ ಲಿಂಗಾಯತ ಸಮುದಾಯದ ಪ್ರಬಲರು ಈ ಹಿಂದಿನಿಂದಲೂ ಹಳ್ಳಿಯ ಭೂಮಿಯನ್ನೂ ಮತ್ತು ರಾಜಕೀಯ ಅಧಿಕಾರವನ್ನು ಅನುಭವಿಸಿಕೊಂಡು ಬಂದಿರುವವರು. ಹೀಗಾಗಿ 1977ರಲ್ಲಿ ದೇವರಾಜ್ ಅರಸ್ ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತಂದಾಗ, ಶೂದ್ರರಿಗೆ ರಾಜಕೀಯ ಅಧಿಕಾರದಲ್ಲಿ ಪಾಲು ನೀಡಲು ಪ್ರಾರಂಭಿಸಿದಾಗ ಅತಿ ಹೆಚ್ಚು ಕ್ರುದ್ಧರಾದವರು ಈ ಮೇಲ್ವರ್ಗಗಳೇ. ನಂತರ ಕಾಂಗ್ರೆಸ್ ವಿರೋಧದ ಹೆಸರಲ್ಲಿ ಮತ್ತು ಪ್ರಜಾತಂತ್ರದ ಹೆಸರಲ್ಲಿ ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯ ನೇತೃತ್ವದಲ್ಲಿ ಜನತಾ ಪಕ್ಷ ರಚನೆಯಾದಾಗ ಅದನ್ನು ಸೇರಿಕೊಂಡವರು ಈ ಭೂ ಮಾಲೀಕ ವರ್ಗಗಳೇ. ಹಾಗೆ ನೋಡಿದಲ್ಲಿ ಅಲ್ಲಿ ಕಾಂಗ್ರೆಸ್ ಜನತೆಯ ಹೆಸರಲ್ಲಿದ್ದ ಭೂ ಮಾಲೀಕ ಪಕ್ಷವಾಗಿದ್ದರೆ ಜನತಾ ಪಕ್ಷ ಕಿಂಚಿತ್ತೂ ಎಗ್ಗು ಸಿಗ್ಗಿಲ್ಲದೆ ಭೂ ಮಾಲೀಕರ ಪಕ್ಷವಾಯಿತು.

ರಾಮಕೃಷ್ಣ ಹೆಗಡೆಯ ನಂತರ ಕರ್ನಾಟಕದ ರಾಜಕಾರಣದಲ್ಲಿ ಜನತಾ ಪರಿವಾರದ ತಳಹದಿಯೇ ಸಂಘಪರಿವಾರದ ತಳಹದಿಯೂ ಆಯಿತು. ಹೀಗಾಗಿ ಬಿಜೆಪಿಯ ಪ್ರಧಾನ ತಳಹದಿ ಮತ್ತು ಅವರ ಬೆಳವಣಿಗೆಗೆ ಈ ಭಾಗಗಳಲ್ಲಿ ಸಂಪೂರ್ಣವಾಗಿ ಈ ಭೂಮಾಲೀಕ ವರ್ಗಗಳನ್ನೂ ಮತ್ತು ಜಾತಿಯನ್ನೇ ಆಧರಿಸಿತ್ತು, ಈ ಬಾರಿಯಂತೂ ಅದಕ್ಕೆ ಗಣಿಧಣಿಗಳ ದುಡ್ಡೂ ಸೇರಿಕೊಂಡು ದುರ್ಬಲ ಜಾತಿಗಳನ್ನು ಮತ್ತಷ್ಟು ದುರ್ಬಲರನ್ನಾಗಿಸಿತು.

ಈ ಭಾಗಗಳಲ್ಲಿ ಬಿಜೆಪಿಗೆ ಅತಿಹೆಚ್ಚು ಸೀಟುಗಳು ಮಾತ್ರವಲ್ಲದೆ ಅತಿ ಹೆಚ್ಚು ಮತಗಳೂ ಸಿಕ್ಕಿವೆ. ಅದಕ್ಕೆ ಪ್ರಧಾನ ಕಾರಣ ಬಿಜೆಪಿ ಪಕ್ಷವೇ ಒಪ್ಪಿಕೊಳ್ಳುವಂತೆ ಸಮಾಜದ ಪ್ರಬಲ ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಲಿಂಗಾಯತ ಸಮುದಾಯ ಶೇ. 70ಕ್ಕಿಂತ ಹೆಚ್ಚು ಬಿಜೆಪಿಯನ್ನು ಬೆಂಬಲಿಸಿದ್ದೇ ಆಗಿದೆ. ಲಿಂಗಾಯತರು ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಬೇಕೆಂದು ಮಾಡಿದ ನಿರ್ಧಾರದ ಹಿಂದೆ ಅವರಿಗೆ ದ್ರೋಹವಾಯಿತು ಎಂಬ ಮನಸ್ಥಿತಿ ಮಾತ್ರ ಕೆಲಸ ಮಾಡಿರುತ್ತದೆಯೇ? ಯಡಿಯೂರಪ್ಪನಲ್ಲದೆ ಇತರ ಸಮುದಾಯದವರು ಅಧಿಕಾರಕ್ಕೆ ಬಂದರೆ ತಮ್ಮ ಸಮುದಾಯಕ್ಕೆ ಒಳಿತಾಗುವುದಿಲ್ಲ ಎಂಬ ತಿಳಿವಳಿಕೆಯನ್ನು ಬಹಳ ಪ್ರಜ್ಞಾಪೂರ್ವಕವಾಗಿಯೇ ಬಿಜೆಪಿ ಮುಗ್ಧ ಲಿಂಗಾಯತರ ತಲೆಯೊಳಗೆ ತೂರಿಸಿತು. ಇದು ಜಾತಿ ಮತ್ತು ಮತಗಳನ್ನು ಮೀರಿದ ನೆಲೆಯಲ್ಲಿ ಈ ದೇಶದ ಪ್ರಜ್ಞಾಪ್ರಭುತ್ವ ನೆಲೆಯೂರಿಯೇ ಇಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ಮೇಲ್ಜಾತಿ ರಾಜಕಾರಣ ಸಂವಿಧಾನದ ಎದುರು ಎಲ್ಲರೂ ಸಮಾನ ನಾಗರಿಕರು ಎಂಬ ಪ್ರಜಾತಂತ್ರದ ಮೂಲ ಸೂತ್ರವೇ ಇನ್ನೂ ನಮ್ಮ ಚುನಾವಣಾ ಪ್ರಜಾತಂತ್ರದಲ್ಲಿ ಸರಿಯಾಗಿ ಬೇರೂರಿಲ್ಲ ಎಂಬುದನ್ನು ಎತ್ತಿ ತೋರಿಸುತ್ತಿದೆ.

ಆದ್ದರಿಂದಲೇ ಚುನಾವಣೆ ಎಂಬುದು ಪ್ರಜಾತಂತ್ರದ ಏಕೈಕ ತಂತ್ರವಾಗಲು ಸಾಧ್ಯವಿಲ್ಲ. ಇಂದಿಗೂ ಜಾತಿ, ವರ್ಗ, ಮತಗಳ ಆಧಾರದಲ್ಲಿ ಅಸಮಾನತೆ ತಾಂಡವವಾಡುತ್ತಿರುವಾಗ ಚುನಾವಣೆ ಎಂಬುದು ಸಮಾಜದ ದುರ್ಬಲರನ್ನು ಆಳಲು ಸಬಲರ ಸಾಧನವೂ ಆಗಿಬಿಡಬಹುದೆಂಬುದಕ್ಕೆ ಕರ್ನಾಟಕದ ಈ ಚುನಾವಣೆಯೂ ಒಂದು ಉದಾಹರಣೆಯಾಗುತ್ತದೆ.

ಚುನಾವಣಾ ಪ್ರಚಾರದಲ್ಲಿ ತಾನು ಅಧಿಕಾರಕ್ಕೆ ಬಂದಾಗ ಬಲಭಾಗದಲ್ಲಿ ಒಬ್ಬ ದಲಿತ ಮತ್ತು ಎಡಭಾಗದಲ್ಲಿ ಒಬ್ಬ ಮುಸ್ಲಿಮರಿರುತ್ತಾರೆ ಎಂದು ಯಡಿಯೂರಪ್ಪ ಘೋಷಿಸಿದ್ದರು. ಈಗ ಆ ಅಗತ್ಯ ಯಡಿಯೂರಪ್ಪನವರಿಗಿಲ್ಲ, ಅದು ಸಾಧ್ಯವೂ ಇಲ್ಲ. ಏಕೆಂದರೆ ಬಿಜೆಪಿ ಯಾವ ಗೆಲ್ಲಬಲ್ಲ ಮುಸ್ಲಿಮನಿಗೂ ಸೀಟನ್ನೇ ಕೊಟ್ಟಿರಲಿಲ್ಲ. ಆದ್ದರಿಂದ ಈಗ ಬಿಜೆಪಿಯಲ್ಲಿ ಯಾವುದೇ ಮುಸ್ಲಿಂ ಶಾಸಕನಿಲ್ಲ. ಇದು ಕೇವಲ ಸಾಂಕೇತಿಕ. ಈಗ ಬಿಜೆಪಿಗೆ 224 ಸೀಟುಗಳಲ್ಲಿ 110 ಸೀಟುಗಳು ಬಂದಿವೆ. ಅಗತ್ಯವಿರುವ ಇನ್ನೂ ಮೂರು ಸೀಟುಗಳನ್ನು ಗಣಿ ದುಡ್ಡನ್ನು ಕೊಟ್ಟು ಕೊಂಡುಕೊಳ್ಳುತ್ತಾರೆ. ಅಧಿಕಾರ ಸವಿಯುತ್ತಾರೆ.

ಕಾಂಗ್ರೆಸ್ಸಿನ ಇತಿಹಾಸವನ್ನು ನೋಡಿದರೆ ಈ ರೀತಿಯ ಅತಂತ್ರ ಪರಿಸ್ಥಿತಿಯನ್ನು ಬಳಸಿಕೊಂಡು ಶತಾಯಗತಾಯ ಸರ್ಕಾರ ಮಾಡದೇ ಹೋದ ಉದಾಹರಣೆಯಿಲ್ಲ. ಹೀಗಾಗಿ ಈಗ ಬಿಜೆಪಿ ಅಧಿಕಾರ ಪಡೆದರೂ ಐದು ವರ್ಷವನ್ನು ಸಂಪೂರ್ಣವಾಗಿ ಮುಗಿಸುತ್ತದೆಯೇ ಎಂಬುದು ಈಗಲೂ ಪ್ರಶ್ನಾರ್ಹವೇ!

ಅದೇನೇ ಇರಲಿ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಅಂದರೆ ಈ ಸಮಾಜದ ದುರ್ಬಲರ ವಿರುದ್ಧ ಪ್ರಬಲರು ಚುನಾವಣಾ ಪ್ರತೀಕಾರವನ್ನು ತೀರಿಸಿಕೊಂಡಿದ್ದಾರೆ. ಇದು ಈ ಸಮಾಜದ ದುರ್ಬಲರಿಗೆ, ಅಲ್ಪಸಂಖ್ಯಾತರಿಗೆ, ದಲಿತರಿಗೆ, ರೈತರಿಗೆ, ಎಲ್ಲಾ ವರ್ಗದ ಬಡವರಿಗೆ, ಮಹಿಳೆಯರಿಗೆ ಅನಾನುಕೂಲಕರ ಸಂದರ್ಭ. ಆದರೆ ಮೇಲ್ವರ್ಗಗಳ ಈ "ಪ್ರಜಾತಾಂತ್ರಿಕ" ಅಧಿಪತ್ಯದ ವಿರುದ್ಧ ಎಲ್ಲಾ ಶೋಷಿತ ವರ್ಗಗಳೂ ಒಂದಾಗಲು ಇದು ಸುಸಂದರ್ಭವೂ ಆಗಿದೆ. ಈ ಅವಕಾಶವನ್ನು ಕಾಂಗ್ರೆಸ್, ಜನತಾ ದಳ ಬಳಸಿಕೊಳ್ಳುತ್ತವೆಯೋ ಇಲ್ಲವೋ ಆದರೆ ಈ ನಾಡನ್ನು ಸೌಹಾರ್ದ ಕರ್ನಾಟಕವನ್ನಾಗಿಯೇ ಉಳಿಸಿಕೊಳ್ಳಬೇಕೆಂದು ಬಯಸುವ ಎಲ್ಲಾ ಜನರು ಬಳಸಿಕೊಂಡು ನಿಜವಾದ ಪ್ರಜಾತಂತ್ರ ಕಟ್ಟುವ ಹೊಣೆಗಾರಿಕೆ ಇದೆ. ■



ಬಿಜೆಪಿಯನ್ನು ಗೆಲ್ಲಿಸಿದ್ದು ಕಾಂಗ್ರೆಸ್, ದಳ

ಕರ್ನಾಟಕದಲ್ಲಿ ಇಷ್ಟು ವರ್ಷ ಮುದುಡಿದ್ದ ತಾವರೆ ಅರಳಿದೆ. ಈಗ ಕರ್ನಾಟಕ ರಾಜ್ಯ ಅರ್ಧಕ್ಕರ್ಧ ಕೇಸರಿಮಯವಾಗಿದೆ. ಮುಖ್ಯಮಂತ್ರಿ ಗದ್ದುಗೆ ಏರುವ ಯಡಿಯೂರಪ್ಪನವರ ಕನಸು ಈಗ ನನಸಾಗುವ ಕಾಲ ಸನ್ನಿಹಿತವಾಗಿದೆ.

ಇದಕ್ಕೆಲ್ಲಾ 'ಯಡ್ಡಿ ಮತ್ತು ಗ್ಯಾಂಗ್' ಮುಖ್ಯವಾಗಿ ಋಣಿಯಾಗಬೇಕಿರುವುದು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗೆ. ಈ ಬಾರಿ ಮತದಾರರು






ಬಜೆಪಿ ಪರ ಒಲವು ತೋರಿಸಲು ಮುಖ್ಯ ಕಾರಣ ಈ ಎರಡು ಪಕ್ಷಗಳು ಸೇರಿ ಬಜೆಪಿ ಪರ ಕಾಲಕಾಲಕ್ಕೆ ಅನುಕಂಪದ ಅಲೆ ಎದ್ದು ಬರುವಂತೆ ಮಾಡಿದ್ದು. ಈ ಅನುಕಂಪದ ಅಲೆಯ ಆಧಾರದ ಮೇಲೆಯೇ ಈಗ ಬಜೆಪಿ ಅಧಿಕಾರದ ಗದ್ದುಗೆ ಹಿಡಿಯುತ್ತಿದೆಯೇ ವಿನಹ ಬಜೆಪಿಯ ಸಿದ್ಧಾಂತಕ್ಕೆ ಜನ ಅಂಟಿಕೊಂಡಿದ್ದಾರೆ ಎಂಬ ಕಾರಣಕ್ಕಲ್ಲ.

ಉದಾಹರಣೆಗೆ, ಕಳೆದ ಬಾರಿ ಬಜೆಪಿ ಅಧಿಕಾರಕ್ಕೆ ಬರಬಾರದೆಂಬ ಏಕೈಕ ಕಾರಣಕ್ಕೆ ಕಾಂಗ್ರೆ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಾಗಲೇ ಜನ ಕಮಲದ ಪರ ಸಿಂಪಥಿ ವ್ಯಕ್ತಪಡಿಸಿದ್ದರು.

ಆನಂತರ ಯಾವಾಗ ರಾಜಕೀಯವಾಗಿ ಜೂನಿಯರ್ ಆದ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿ ಅವರಿಗಿಂತ ಹಿರಿಯರಾದ ಯಡ್ಡಿ ಉಪಮುಖ್ಯಮಂತ್ರಿಯಾದರೋ ಅವರಿಗೆ 'ತ್ಯಾಗರಾಜ'ನ ಪಟ್ಟ ಬಂದು ಇನ್ನಷ್ಟು ಸಿಂಪಥಿ ದೊರೆಯಿತು. ಇಪ್ಪತ್ತು ತಿಂಗಳ ನಂತರ ಯಾವಾಗ ಯಡ್ಡಿಗೆ ಅಧಿಕಾರ ಹಸ್ತಾಂತರ ಮಾಡದೆ ಉಳಿದರೋ ಆಗ ಯಡ್ಡಿ ಗ್ಯಾಂಗ್ ರಾಜ್ಯದೆಲ್ಲೆಡೆ 'ವಚನ ಭ್ರಷ್ಟರು' ಎಂದು ಕಣ್ಣೀರಿಡುತ್ತ ಮತ್ತೊಂದಿಷ್ಟು ಸಿಂಪಥಿ ಗಿಟ್ಟಿಸಿತು. ಕೊನೆಗೆ ಯಡ್ಡಿಯನ್ನು ಗದ್ದುಗೆಗೆ ಏರಿಸಿ ಒಂದೇ ವಾರದಲ್ಲಿ ಮತ್ತೆ ಸ್ಥಾನ ಪಲ್ಲಟ ಮಾಡಿದಾಗ, ಜನಪ್ರಿಯತೆಯ ತುತ್ತ ತುದಿಯಲ್ಲಿದ್ದ ಕುಮಾರಸ್ವಾಮಿಯ ಪಾಪ್ಯುಲಾರಿಟಿ ದಿಢೀರನೆ ಪಾತಾಳಕ್ಕೆ ಕುಸಿಯಿತು. ಅದು ಸಹಜವಾಗಿ ಯಡ್ಡಿಗೆ ಅನುಕೂಲವಾಯ್ತು. ಅಂದರೆ ಇಂತಹ ಅನುಕಂಪದ ಅಲೆ ಬಜೆಪಿಗೆ ಸಿಗುವಂತೆ ಮಾಡಿದ್ದೇ ಕಾಂಗ್ರೆ ಮತ್ತು ದಳ. ಇವೆರಡು ಪಕ್ಷದ ನಾಯಕರುಗಳ ಎಡಬಿಡಂಗಿತನವೇ ಬಜೆಪಿಯ ಪಾಲಿಗೆ ವರವಾಯಿತು.

ಹಾಗೆ ನೋಡಿದರೆ, ಒಂದು ಹಂತದಲ್ಲಿ ಬಜೆಪಿಯಲ್ಲಿ ರಾಷ್ಟ್ರೀಯ ನಾಯಕರಾಗಿ ಬೆಳೆದು ನಿಂತಿದ್ದ ಅನಂತ್‌ಕುಮಾರ್ ಕಾಟವನ್ನು ತಾಳಲಾರದೆ, ಇನ್ನು ಬಜೆಪಿಗೆ ಭವಿಷ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದ ಯಡ್ಡಿ ಕಾಂಗ್ರೆ ಅಥವಾ ದಳ ಸೇರಲು ಹುನ್ನಾರ ನಡೆಸಿದ್ದರು. ಹೀಗೆ ಬಜೆಪಿಯಿಂದ ಗುಳೇ ಹೊರಡಲು ತಯಾರಾಗಿದ್ದ ಯಡ್ಡಿಗೆ ಬೇಕಿದ್ದುದು ಅಧಿಕಾರವೇ ಹೊರತು ಯಾವ ಸಿದ್ಧಾಂತವೂ ಅಲ್ಲ, ಪಕ್ಷನಿಷ್ಠೆಯಂತೂ ಅಲ್ಲವೇ ಅಲ್ಲ ಎಂಬುದು ಸ್ಪಷ್ಟವಾಗಿತ್ತು.

ಆ ಸಂದರ್ಭದಲ್ಲಿ ಯಡ್ಡಿ ಬಜೆಪಿಯ ಚೆಡ್ಡಿಗಳ ಆಕ್ರೋಶಕ್ಕೆ ಒಳಗಾಗಿ ಯಾರಿಗೂ ಬೇಡವಾಗಿದ್ದರು. ಅಂತಹ ಸಂದರ್ಭದಲ್ಲಿ ಯಡ್ಡಿಗೆ ಪಕ್ಷದಲ್ಲಿ ವರ್ಚಸ್ಸು ಮತ್ತು ರಾಜಕೀಯ ಪುನರ್‌ಜನ್ಮ ನೀಡಿದ್ದು ಕುಮಾರಸ್ವಾಮಿ. ಕುಮಾರಸ್ವಾಮಿ ತಾನು ಮುಖ್ಯಮಂತ್ರಿಯಾಗಲು ಬಜೆಪಿಯ ಬೆಂಬಲ ಪಡೆದ ದಿನದಂದೇ ಬಜೆಪಿಯ ಭಾಗ್ಯದ ಬಾಗಿಲು ತೆರೆಯಿತು.



ಬಜೆಪಿಯಂತಹ ಕೋಮುವಾದಿ ಪಕ್ಷವನ್ನು ಅಧಿಕಾರದ ಗದ್ದುಗೆಯಲ್ಲಿ ಕೂರಿಸಿ ಅವರು ತಮ್ಮ ದ್ವೇಷದ ಬೀಜವನ್ನು ಎಲ್ಲೆಡೆ ಬಿತ್ತಲು ಜೆಡಿಎಸ್‌ನ ಕುಮಾರಸ್ವಾಮಿ ಸಹಾಯ ಮಾಡಿದ್ದರಿಂದಲೇ ಬಜೆಪಿ ದಿನದಿಂದ ದಿನಕ್ಕೆ ಪ್ರವರ್ಧಮಾನಕ್ಕೆ ಬರಲು ಶುರುವಾಯಿತು.

ಇಂತಹ ಸಂದರ್ಭದಲ್ಲಿ ಚುನಾವಣೆ ಘೋಷಣೆಯಾದಾಗ, ಬಜೆಪಿಗೆ ಸೆಡ್ಡು ಹೊಡೆಯಬೇಕಿದ್ದ ಕಾಂಗ್ರೆನಲ್ಲಿನ ಒಳಜಗಳಗಳು ಬಜೆಪಿಗೆ ಇನ್ನಷ್ಟು ಲಾಭವಾಯಿತು. ಕಾಂಗ್ರೆ ಪಕ್ಷಕ್ಕೆ ನೂರು ವರ್ಷಕ್ಕಿಂತಲೂ ಹೆಚ್ಚಿನ ಭವ್ಯವಾದ ಇತಿಹಾಸವಿದ್ದರೂ ಪಕ್ಷದ ಹೈಕಮಾಂಡ್ ಭಾವೀ ಮುಖ್ಯಮಂತ್ರಿ ಎಂದು ಯಾರನ್ನೂ ಬಿಂಬಿಸದೇ 'ಸಮೂಹ ನಾಯಕತ್ವ' ಎಂಬ ಮಂತ್ರ ಜಪಿಸಿದ್ದು ಅದರ ಹಿನ್ನಡೆಗೆ ಕಾರಣವಾಯ್ತು. ಈ ಹಿಂದೆ ಒಮ್ಮೆ ವೀರೇಂದ್ರ ಪಾಟೀಲ್ ಮತ್ತೊಮ್ಮೆ ಎಸ್.ಎಂ. ಕೃಷ್ಣ ಅವರ ನಾಯಕತ್ವದಲ್ಲಿ ಪಕ್ಷ ಅಧಿಕಾರಕ್ಕೆ ಬಂದ ಉದಾಹರಣೆಯಿದ್ದರೂ ಕಾಂಗ್ರೆ ನಾಯಕರು ಈ ಬಾರಿ ತಮ್ಮ ತಂಡಕ್ಕೆ ಯಾರನ್ನೂ ಕ್ಯಾಪ್ಟನ್ ಮಾಡಲು ಹಿಂಜರಿದರು. ಹೀಗಾಗಿ ಕಾಂಗ್ರೆ ಪಕ್ಷ ನಾವಿಕನಿಲ್ಲದ ದೋಣಿಯಂತಾಗಿದ್ದು ಅದರ ಸೋಲಿಗೆ ಕಾರಣವಾಯ್ತು.

ಮುಗ್ಗರಿಸಿದ ಆನೆ!

ಹೌದು, ಈ ಬಾರಿಯ ಚುನಾವಣೆ ಹತ್ತು ಹಲವು ಕಾರಣಗಳಿಗಾಗಿ ವಿಶೇಷವಾಗಿದೆ. ಅದರಲ್ಲಿ ಒಂದು ಬಿಎಸ್ಪಿಗೆ ಅದು ತಂದ ಆಘಾತ. ಕಳೆದ 2004ರ ವಿಧಾನಸಭಾ ಚುನಾವಣೆ ಚುನಾವಣೆಯಲ್ಲಿ ಬಿಎಸ್ಪಿ ಬಹಳ ಉತ್ತಮವಾದ ಪ್ರದರ್ಶನವನ್ನು ತೋರಿತ್ತು. ಅಷ್ಟರ ಮಟ್ಟಿಗೆ ಅದು ಕಾಂಗ್ರೆಸ್‌ಗೂ ಹಾನಿಯನ್ನುಂಟು ಮಾಡಿತ್ತು. ಅದು ಅಭ್ಯರ್ಥಿಗಳನ್ನು ನಿಲ್ಲಿಸಿದ 98 ಕ್ಷೇತ್ರಗಳಲ್ಲಿ ಬಹುತೇಕ ಕಡೆಗಳಲ್ಲಿ ಕಾಂಗ್ರೆಸ್‌ನ ಓಟ್ ಬುಟ್ಟಿಗೆ ಕೈಹಾಕಿ ಪರಿಗಣಿಸಬಹುದಾದ ಮಟ್ಟದ ಪೈಪೋಟಿಯನ್ನೊಡ್ಡಿ ಸುಮಾರು 30 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸೋಲಲು ಕಾರಣವಾಗಿತ್ತು.

ಈ ಬಾರಿಯ ಚುನಾವಣೆಯಲ್ಲೂ ಅದು ಹಿಂದಿನ ಚುನಾವಣೆಗಿಂತ ಉತ್ತಮ ಪ್ರದರ್ಶನ ತೋರುವ ಹುಮ್ಮಸ್ಸು ಮತ್ತು ವಿಶ್ವಾಸದಿಂದ ಕಣಕ್ಕಿಳಿದಿತ್ತು. ತಾನೊಂದು ಸ್ವತಂತ್ರ ಶಕ್ತಿ ಎಂಬುದನ್ನು ಸಾಬೀತು ಪಡಿಸಲು ಕಾಂಗ್ರೆಸ್‌ನೊಂದಿಗೂ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳಲು ಅದು ಸಿದ್ಧವಿರಲಿಲ್ಲ. ಆ ಕಾರಣಕ್ಕಾಗಿಯೇ ಅದು ಸ್ವತಂತ್ರವಾಗಿ ಸ್ಪರ್ಧಿಸಿತು. ಆದರೆ, ಅದರ ಹುಮ್ಮಸ್ಸು, ಹುರುಪುಗಳೆಲ್ಲವೂ ಮಣ್ಣಾಗಿ ಹೋಗಿವೆ. ಕಳೆದ ಬಾರಿಗಿಂತ ಉತ್ತಮ ಫಲಿತಾಂಶ ಪಡೆಯುವುದು ಒತ್ತಟ್ಟಿಗಿರಲಿ, ಕಳೆದ ಬಾರಿ ಗಳಿಸಿದ್ದ ಮತಗಳನ್ನೂ ಈ ಬಾರಿ ಅದಕ್ಕೆ ಗಳಿಸಿಕೊಳ್ಳಲು ಆಗಿಲ್ಲ. ಕಳೆದ ಬಾರಿ ಮತ್ತು ಈ ಬಾರಿ ಕೆಲವು ಕ್ಷೇತ್ರಗಳಲ್ಲಿ ಅದು ಗಳಿಸಿದ ಮತಗಳನ್ನು ನೋಡಿದರೆ ಸಾಕು ರಾಜ್ಯದಲ್ಲಿ ಬಿಎಸ್ಪಿಯ ಆನೆ ಹೇಗೆ ಮುಗ್ಗರಿಸಿದೆ ಎಂಬುದು ಅರ್ಥವಾಗುತ್ತದೆ.

ಕಳೆದ ಚುನಾವಣೆಯಲ್ಲಿ ಆನೆಕಲ್ ಕ್ಷೇತ್ರದಲ್ಲಿ ಬಿಎಸ್ಪಿಗೆ 24 ಸಾವಿರ ಮತಗಳು ಲಭಿಸಿದ್ದವು. ಈ ಬಾರಿ ಆಕ್ಷೇತ್ರದಲ್ಲಿ ಅದಕ್ಕೆ ಕೇವಲ 2004 ಮತಗಳು ಲಭಿಸಿವೆ. ಬಿಎಸ್ಪಿಯಲ್ಲಿದ್ದ ಜನಪ್ರಿಯ ನಾಯಕ ಗೋಪಾಲ್ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದು ಅದಕ್ಕೆ ಹೊಡೆತ ಕೊಟ್ಟಿದೆಯಾದರೂ ಒಟ್ಟಾರೆ ಒಂದು ಪಕ್ಷವಾಗಿ ಬಿಎಸ್ಪಿ ಹೀನಾಯ ಹಿನ್ನಡೆ ಅನುಭವಿಸಿದೆ.

ಸೇಡಮ್ ಕ್ಷೇತ್ರದಲ್ಲಿ ಬಿಎಸ್ಪಿಗೆ ಕಳೆದ ಬಾರಿ 19 ಸಾವಿರ ಮತಗಳು ಲಭಿಸಿದ್ದವು. ಈ ಬಾರಿ ಅದಕ್ಕೆ ಸಿಕ್ಕಿರುವುದು ಕೇವಲ 2300 ಓಟುಗಳು! ಚಳಲೇಕಪುರದಲ್ಲಿ ಕಳೆದ ಬಾರಿ 17000 ಮತಗಳು ದೊರಕಿದ್ದರೆ ಈ ಬಾರಿ ಕೇವಲ 9 ಸಾವಿರ ಮತಗಳ ಗಡಿಯನ್ನು ದಾಟುವುದಕ್ಕೆ ಸಾಧ್ಯವಾಗಿಲ್ಲ. ಮೊಳಕಾಲ್ಮೂರು ಕ್ಷೇತ್ರದಲ್ಲಿ ಕಳೆದ ಬಾರಿ 16 ಸಾವಿರ ಮತಗಳನ್ನು ಪಡೆದ ಅದಕ್ಕೆ ಈ ಬಾರಿ 2 ಸಾವಿರ ಮತಗಳನ್ನು ಪಡೆಯುವುದಕ್ಕೆ ಹೆಣಗಾಡಬೇಕಾಯಿತು. ಪಿರಿಯಾಪಟ್ಟಣದಲ್ಲಿ 12 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದ ಅದು ಈ ಬಾರಿ 4 ಸಾವಿರಕ್ಕೂ ಹೆಚ್ಚು ಮತಗಳನ್ನು ಕಳೆದುಕೊಂಡಿದೆ. ಚಿಕ್ಕಬಳ್ಳಾಪುರದಲ್ಲಿ ಕಳೆದ ಬಾರಿ ಅದಕ್ಕೆ 7500 ಮತಗಳನ್ನು ಪಡೆದಿತ್ತು, ಆದರೆ ಈ ಬಾರಿ 2766 ಮತಗಳಿಗೇ ತೃಪ್ತಿಪಟ್ಟುಕೊಂಡಿದೆ. ನಂಜನಗೂಡು ಮತ್ತು ಅರಕಲಗೂಡುಗಳಲ್ಲಿ ತಲಾ 7300 ಮತ್ತು 6220 ಮತಗಳನ್ನು ಪಡೆದಿದ್ದು ಈ ಬಾರಿ 3521 ಮತ್ತು 4513 ಮತಗಳನ್ನು ಪಡೆಯಲು ಹೆಣಗಾಡಿದೆ. ಕೃಷ್ಣರಾಜನಗರದಲ್ಲಿ 6000 ಮತಗಳನ್ನು ಪಡೆದಿತ್ತು ಈ ಬಾರಿ 3170 ಮತಗಳು ಮಾತ್ರ ಅದಕ್ಕೆ ಸಿಕ್ಕಿವೆ.



ಹೀಗೆ ಬಿಎಸ್ಪಿಯ ಅಧಃಪತನದ ಉದಾಹರಣೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇನ್ನೊಂದು ವಿಶೇಷ ಎಂದರೆ ಕಳೆದ ಬಾರಿ ಬಿಎಸ್ಪಿ ಸುಮಾರು ಮೂವತ್ತು ಕ್ಷೇತ್ರದಲ್ಲಿ ಐದು ಸಾವಿರಕ್ಕೂ ಹೆಚ್ಚು ಮತಗಳಿಸುವ ಮೂಲಕ ರಾಜ್ಯ ರಾಜಕಾರಣದಲ್ಲಿ ತಾನೂ ಕೂಡ ಒಂದು ಕಡೆಗಣಿಸಲಾಗದ ಶಕ್ತಿಯಾಗಿ ಬೆಳೆಯುತ್ತಿರುವ ಮುನ್ಸೂಚನೆ ನಿದಿ ರಾಜ್ಯದ ಗಮನ ಸೆಳೆದಿತ್ತು. ಆದರೆ ಈ ಬಾರಿ ಅದನ್ನು ಉಳಿಸಿಕೊಳ್ಳುವುದೂ ಅದರಿಂದ ಸಾಧ್ಯವಾಗಿಲ್ಲ.

ಕಳೆದ ಬಾರಿ ಚುನಾವಣೆಯಲ್ಲಿ ಬಿಎಸ್ಪಿಯು ಸುಮಾರು 30 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಓಟಿನ ಬುಟ್ಟಿಗೆ ಕೈಹಾಕಿ ಗಣನೀಯ ಮತಗಳನ್ನು ಗೆಬರಿಕೊಂಡಿದ್ದರಿಂದ ಕಾಂಗ್ರೆಸ್ ಆ ಕ್ಷೇತ್ರಗಳಲ್ಲಿ ಸೋತಿತ್ತು. ಉದಾಹರಣೆಗೆ ಹೇಳುವುದಾದರೆ, ಆನೆಕಲ್ ಕ್ಷೇತ್ರದಲ್ಲಿ ಕಳೆದ ಬಾರಿ ಬಿಎಸ್ಪಿಗೆ 24 ಸಾವಿರ ಮತಗಳು ಸಿಕ್ಕಿದ್ದವು. ಅಲ್ಲಿ ಕಾಂಗ್ರೆಸ್ ಕೇವಲ 2004 ಮತಗಳಿಂದ ಸೋತಿತ್ತು. ಬಸವಕಲ್ಯಾಣ ಕ್ಷೇತ್ರದಲ್ಲಿ ಬಿಎಸ್ಪಿಗೆ 11862 ಮತಗಳು ಸಿಕ್ಕಿದ್ದವು. ಅಲ್ಲಿ ಕಾಂಗ್ರೆಸ್ ಕೇವಲ 7000 ಮತಗಳಿಂದ ಸೋತಿತು. ಪಿರಿಯಾಪಟ್ಟಣದಲ್ಲಿ ಬಿಎಸ್ಪಿ ಪಡೆದ 12 ಸಾವಿರ ಮತಗಳೇ ಕಾಂಗ್ರೆಸ್‌ನ ಸೋಲಿಗೆ ಕಾರಣವಾಗಿತ್ತು. ಇಲ್ಲಿ ಕಾಂಗ್ರೆಸ್ 9 ಸಾವಿರ ಮತಗಳಿಂದ ಸೋತಿತು. ಕೃಷ್ಣರಾಜನಗರದಲ್ಲಿ ಬಿಎಸ್ಪಿಯು ಕಾಂಗ್ರೆಸ್‌ನ 6 ಸಾವಿರ ಮತಗಳನ್ನು ಕಿತ್ತಿದ್ದರಿಂದ ಕಾಂಗ್ರೆಸ್ ಕೇವಲ 200 ಮತಗಳಿಂದ ಸೋಲನ್ನನುಭವಿಸಿತ್ತು. ಬೇಲೂರಿನಲ್ಲಿ ಬಿಎಸ್ಪಿ 6 ಸಾವಿರ ಮತಗಳನ್ನು ಕಿತ್ತು ಕಾಂಗ್ರೆಸ್ ನಾಲ್ಕೂವರೆ ಸಾವಿರ ಮತಗಳ ಅಂತರದಿಂದ ಸೋಲಲು ಕಾರಣವಾಗಿತ್ತು. ಹೀಗೆಯೇ ಬನ್ನೂರು, ಕಾಗವಾಡ, ಕಮಲಾಪುರ, ಪಾಂಡವಪುರ, ಶಹಾಬಾದ್, ಕಲ್ಮಲ ಮುಂತಾದ ಕ್ಷೇತ್ರಗಳಲ್ಲೂ ಕೂಡ ಬಿಎಸ್ಪಿ ಕಾಂಗ್ರೆಸ್‌ನ ಓಟುಗಳನ್ನು ಕಿತ್ತುಕೊಂಡು ಅಲ್ಲಿ ಕಾಂಗ್ರೆಸ್‌ನ ಸೋಲಿಗೆ ಕಾರಣವಾಗಿತ್ತು.

ಕಳೆದ ಚುನಾವಣೆಯಲ್ಲಿ ಬಿಎಸ್ಪಿ ನೀಡಿದ ಹೊಡೆತದಿಂದ ಭಯಗೊಂಡು ಕಾಂಗ್ರೆಸ್ ಈ ಬಾರಿ ಬಿಎಸ್ಪಿಯೊಂದಿಗೆ ಚುನಾವಣಾ ಪೂರ್ವ ಮೈತ್ರಿಗೆ ಸಿದ್ಧವಿತ್ತು. ಆದರೆ, ಕಳೆದ ಬಾರಿಗಿಂತ ಈ ಬಾರಿ ಇನ್ನೂ ಉತ್ತಮ ಮತಗಳನ್ನು ಪಡೆಯುವ ವಿಶ್ವಾಸ ಬಿಎಸ್ಪಿಗಿದ್ದುದರಿಂದ ಅದು ಚುನಾವಣಾ ಪೂರ್ವ ಹೊಂದಾಣಿಕೆಗೆ ಸುತಾರಾಮ್ ಒಪ್ಪಲಿಲ್ಲ. ಬಿಎಸ್ಪಿ ಹಾಗೆ ಮಾಡುವುದಕ್ಕೆ ಎರಡು ಕಾರಣಗಳಿದ್ದವು. ಮೊದಲನೇಯದು ಅದು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ನೊಂದಿಗೆ ಅಷ್ಟಾಗಿ ಚೆನ್ನಾಗಿಲ್ಲದಿರುವುದು. ಎರಡನೇಯದು ಈ ಚುನಾವಣೆಗೆ ಮುಂಚೆ ಉತ್ತರ ಪ್ರದೇಶದ ಚುನಾವಣೆಯಲ್ಲಿ ಬಿಎಸ್ಪಿ ಭಾರೀ ಬಹುಮತದಿಂದ ಗೆದ್ದ ಕಾರಣ ರಾಜ್ಯ ಮಟ್ಟದಲ್ಲಿ ಬೇರೆ ಬೇರೆ ಪಕ್ಷಗಳನ್ನು ತೊರೆದು ಕೆಲವು ನಾಯಕರು ಬಿಎಸ್‌ಪಿ ಸೇರಿದರು. ಇದರಿಂದ ಆ ಪಕ್ಷದ ವಿಶ್ವಾಸವೂ ಇಮ್ಮಡಿಯಾಗಿತ್ತು. ಆದರೆ, ಈಗ ಅದರ ಲೆಕ್ಕಾಚಾರಗಳೆಲ್ಲಾ ತಲೆಕೆಳಗಾಗಿ ನಿಂತಿವೆ.

ಈ ಚುನಾವಣೆಯಲ್ಲಿ ಬಿಎಸ್ಪಿ ತನ್ನ ಹಿಂದಿದ್ದ ವರ್ಚಸ್ಸನ್ನು ಕಳೆದುಕೊಳ್ಳಲು ಇನ್ನೂ ಒಂದು ಕಾರಣವಿದೆ. ಅದೆಂದರೆ ಉತ್ತರ ಪ್ರದೇಶದಲ್ಲಿ ಯಶಸ್ವಿಯಾದ ಅವರ 'ಸೋಷಿಯಲ್ ಇಂಜಿನಿಯರಿಂಗ್' ಅನ್ನು ಯಥಾವತ್ತಾಗಿ ಕಾಪಿ ಮಾಡಿ ಕರ್ನಾಟಕದಲ್ಲೂ ಪ್ರಯೋಗಿಸಲು ಮುಂದಾಗಿದ್ದು. ಅಂದರೆ, ದಲಿತ ಮತ್ತು ಹಿಂದುಳಿದ ಜಾತಿಗಳ ಹಿತರಕ್ಷಣೆಯ ಹೆಸರಿನಲ್ಲೇ ಹುಟ್ಟಿಕೊಂಡ ಹಾಗೂ ಅದೇ ಉದ್ದೇಶವನ್ನಿಟ್ಟುಕೊಂಡು ಹಲವಾರು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ ಬಿಎಸ್ಪಿ ಕಳೆದ ಉತ್ತರ ಪ್ರದೇಶ ಚುನಾವಣಾ ಸಂದರ್ಭದಲ್ಲಿ ತನ್ನ ಆಶಯಗಳಿಗೆ ತಿಲಾಂಜಲಿ ಇಟ್ಟು ದಲಿತ ಮತ್ತು ಹಿಂದುಳಿದ ಜಾತಿಗಳ ಮೇಲೆ ದರ್ಪ-ದೌರ್ಜನ್ಯ ತೋರುವ, ತುಳಿಯುವ ಬ್ರಾಹ್ಮಣ ಮತ್ತಿತರ ಮೇಲ್ಜಾತಿಗಳಿಗೂ

ಾಂಗ್ರೆ ಪಕ್ಷವಂತೂ ಈ ಬಾರಿ ಟಿಕೆಟ್ ಹಂಚಿಕೆಯ ಸಂದರ್ಭದಲ್ಲಿ ಷ್ಟು ಎಡವಿತು. ಕೊನೆ ಕ್ಷಣದವರೆಗೂ ಟಿಕೆಟ್ ಹಂಚಿಕೆ ಬಗ್ಗೆ ಸ್‌ನಲ್ಲಿ ಗೊಂದಲವೋ ಗೊಂದಲ ಒಂದು ಕಡೆ ಪಕ್ಷಕ್ಕೆ ಬಂದ ರಿಗೆ ಮಣೆ ಹಾಕಿ ಕಾರ್ಯಕರ್ತರ ಆಕ್ರೋಶಕ್ಕೆ ಒಳಗಾದರೆ, ಂದೆಡೆ ಮುದಿ ನಾಯಕರಿಗೆ ಟಿಕೆಟ್ ಕೊಟ್ಟು ಅಲ್ಲೂ ಮತದಾರರ ಹಿಗೆ ಒಳಗಾಯಿತು. ಅಂಬರೀಶ್ ಮತ್ತು ಜಗ್ಗೇಶ್‌ಗೆ ಮೊದಲ ಲ್ಲಿ ಟಿಕೆಟ್ ನಿರಾಕರಿಸಲಾಗಿತ್ತು. ಕೊನೆ ಗಳಿಗೆಯಲ್ಲಿ ಅವರ ಗಳು ಸೇರ್ಪಡೆಗೊಂಡವು. ಶ್ಯಾಮನೂರು ಶಿವಶಂಕರಪ್ಪ ಅವರ ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ನೀಡುವ ಗೊಂದಲ, ಇವೆಲ್ಲವೂ ಸ್‌ಗೆ ಭಾರೀ ಹೊಡೆತ ನೀಡಿತು. ಹೀಗಾಗಿ ಕಾಂಗ್ರೆ ಪಕ್ಷದ ನೆಯ ಸಾಲಿನ ನಾಯಕರಾದ ದೇಶಪಾಂಡೆ, ಅಂಬರೀಶ್, ಎಚ್.ಕೆ. ೀಲ್, ಡಿ.ಬಿ. ಚಂದ್ರೇಗೌಡ, ರೇವಣ್ಣ, ಕಾಗೋಡು ತಿಮ್ಮಪ್ಪ, ೀಶ್ ಕುಮಾರ್, ಬಸವರಾಜ ರಾಯರೆಡ್ಡಿ, ಧರ್ಮಸಿಂಗ್ ಲಾದವರ ಪರಾಭವ ಬಿಜೆಪಿಯ ಪಾಲಿಗೆ ಬೋನಸ್ ಆಯ್ತು. ಹೀಗೆ ಟಿಕೆಟ್ ಹಂಚುವಿಕೆಯಲ್ಲಿ ಮಾಡಿದ ತಪ್ಪಿನಿಂದಾಗಿ ಂದರೂ 20 ಸ್ಥಾನಗಳನ್ನಾದರೂ ಕಳೆದುಕೊಂಡಿದೆ. ಈ ಇಪ್ಪತ್ತು ಗಳೇ ಇಂದು ಬಿಜೆಪಿ ಅಧಿಕಾರಕ್ಕೆ ಬರಲು ಬಹಳ ಮುಖ್ಯ ವಾಗಿದೆ. ಅರ್ಥಾತ್ ಕಾಂಗ್ರೆ ಹೈಕಮಾಂಡ್ ಪರೋಕ್ಷವಾಗಿ ಯ ಬಲವರ್ಧನೆಗೆ ಕಾರಣವಾಗಿದೆ.

ಜೆಪಿ ತನ್ನಲ್ಲಿನ ಒಳಜಗಳಗಳನ್ನು ಬದಿಗೊತ್ತಿ ಯಡಿಯೂರಪ್ಪನವ ಭಾವೀ ಮುಖ್ಯಮಂತ್ರಿ ಎಂದು ಘೋಷಿಸಿದ್ದರಿಂದ ರಾಜಕೀಯವಾಗಿ ತ ಪ್ರಬಲವಾಗಿರುವ ಲಿಂಗಾಯತ ಕೋಮಿನವರೆಲ್ಲಾ ಹೋಲ್‌ಸೇಲ್ ಬಿಜೆಪಿಗೆ ಮತ ಹಾಕಿದರು. ಲಿಂಗಾಯತರು ಹೆಚ್ಚು ಸಂಖ್ಯೆಯಲ್ಲಿರುವ ಕರ್ನಾಟಕದೆಲ್ಲೆಡೆ ಬಿಜೆಪಿ ಜಯಭೇರಿ ಬಾರಿಸಿರುವುದು ಇದಕ್ಕೆ

ಾಂಗ್ರೆ ಪಕ್ಷದ ಒಳಜಗಳ, ದಳದ ಅಧಿಕಾರದಾಹ ರಾಜಕಾರಣ, ಗೆ ಬಿಜೆಪಿ ಪರವಿದ್ದ ಅನುಕಂಪದ ಅಲೆ ಈ ಬಾರಿ ಬಿಜೆಪಿ ರಕ್ಕೆ ಬರಲು ಸಹಾಯವಾಗಿದೆ. ಹೀಗಾಗಿ ಬಿಜೆಪಿ ತನ್ನ ಸ್ವಂತ ಂದಲೇ ಅಧಿಕಾರಕ್ಕೆ ಬಂದಿದೆ ಎನ್ನುವುದಕ್ಕಿಂತಲೂ ಕಾಂಗ್ರೆಸ್ ನಿರ್ಲಕ್ಷತನ , ದಳದ ಮೊಂಡುತನದಿಂದಾಗಿ ಜಯಭೇರಿ ಬಾರಿಸಿದೆ ಅನ್ನಬಹುದು.

■ ಶೆಣೈ

ಹಾಕಿ ಟಿಕೆಟ್ ನೀಡಿತು. ಹೀಗಾಗಿ ಮೇಲ್ಜಾತಿಗೆ ಸೇರಿದ ರು ಬಿಎಸ್ಪಿಯಿಂದ ಗೆದ್ದುಬರುವುದರೊಂದಿಗೆ ಬಿಎಸ್ಪಿಗೂ ಸ್ಪಷ್ಟ ಮತ ಸಿಕ್ಕು ಆ ರಾಜ್ಯದಲ್ಲಿ ಅಧಿಕಾರಕ್ಕೂ ಏರಿತು. ಆ ಲಕ ಅಲ್ಲಿ ಹದಿನಾಲ್ಕು ವರ್ಷಗಳ ನಂತರ ಒಂದು ಪಕ್ಷ ಸ್ಪಷ್ಟ ಮತ ಪಡೆದು ಅಧಿಕಾರಕ್ಕೇರಿ ದಾಖಲೆ ನಿರ್ಮಿಸಿತು.

ಈ ಸೋಶಿಯಲ್ ಇಂಜಿನಿಯರಿಂಗ್ ಅನ್ನು ಕರ್ನಾಟಕದಲ್ಲೂ ಾವತ್ತಾಗಿ ಕಾಪಿ ಮಾಡಲು ಹೋಗಿ ಮುಗ್ಗರಿಸಿಬಿದ್ದಿದೆ. ಯೂ ಕೂಡ ಅನೇಕ ದಲಿತೇತರರಿಗೆ, ಮೇಲ್ಜಾತಿಗಳ ಜನರಿಗೆ ನೀಡಿ ಠೇವಣಿ ಕಳೆದುಕೊಂಡಿದೆ. ಉದಾಹರಣೆಗೆ ವುದಾದರೆ, ಕಳೆದ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ ಳಿದ ಜಾತಿಗೆ ಸೇರಿದವರನ್ನು ಕಣಕ್ಕಿಳಿಸಿ 6134 ಮತಗಳನ್ನು ದ್ದರೆ ಈ ಬಾರಿ ಬ್ರಾಹ್ಮಣ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಂತಲೂ ಕಡಿಮೆ (4758) ಮತಗಳನ್ನು ಗಳಿಸಿದೆ. ಇದೇ ತಿಯನ್ನು ಇನ್ನೂ ಹಲವಾರು ಕ್ಷೇತ್ರಗಳಲ್ಲಿ ನಾವು ಬಹುದು. ಅದೇ ರೀತಿಯಲ್ಲಿ ಬಸವನಗುಡಿ, ಚಿಕ್ಕಪೇಟೆ, ್ಗ, ಸಿರ್ಸಿ ಮುಂತಾದ ಕ್ಷೇತ್ರಗಳಲ್ಲಿ ಬಿಎಸ್ಪಿ ಮೇಲ್ಜಾತಿಯ ಯತ, ಬ್ರಾಹ್ಮಣ, ಗೌಡ ಸಮುದಾಯದ ಜನರನ್ನೇ ಳಿಸಿತ್ತಾದರೂ ಅವರ್ಯಾರೂ ಒಂದು ಸಾವಿರ ಮತಗಳ ಗಡಿ ಲ್ಲ.


ಬಿಎಸ್ಪಿಯ ಅಧಃಪತನವನ್ನು ಪುಷ್ಟೀಕರಿಸುವ ಇನ್ನೊಂದು ಣೆಗೆಯನ್ನು ನಾವು ಈ ಚುನಾವಣೆಯಲ್ಲಿ ನೋಡಬಹುದು. ಚುನಾವಣೆಯಲ್ಲಿ ಅದು ಒಟ್ಟು 102 ಸ್ಥಾನಗಳಲ್ಲಿ ಸ್ಪರ್ಧಿಸಿ ಹೆಚ್ಚೂ ಕಡಿಮೆ ನಾಲ್ಕೂವರೆ ಲಕ್ಷದಷ್ಟು ಮತಗಳನ್ನು ತ್ತು. ಆದರೆ, ಈ ಬಾರಿ ಎಲ್ಲಾ 224 ಕ್ಷೇತ್ರಗಳಿಗೆ ಯೂ, ಪಿಜಿಆರ್ ಸಿಂಧಿಯಾ, ಪರಿಮಳ ನಾಗಪ್ಪ, ಡಿ.ಟಿ. ಕುಮಾರ್ ನಂತಹ ದೊಡ್ಡ ದೊಡ್ಡ ಲೀಡರುಗಳನ್ನು ಕೊಂಡಿದ್ದರೂ ಎಲ್ಲಾ ಕ್ಷೇತ್ರಗಳನ್ನು ಒಟ್ಟು ಹಾಕಿದರೆ ಅದು ಮತಗಳ ಸಂಖ್ಯೆ ಕಳೆದ ಬಾರಿ ಅದು ಪಡೆದ ಒಟ್ಟು ಳ ಸಂಖ್ಯೆಯನ್ನು ದಾಟುವುದಿಲ್ಲ. ಹಾಗಾದರೆ ಏನಿದರ ?

ಈ ಮೇಲಿನ ಎಲ್ಲಾ ಅಂಕಿ ಅಂಶಗಳನ್ನು ನೋಡಿದರೆ ತೂ ಸ್ಪಷ್ಟವಾಗುತ್ತದೆ. ಉತ್ತರ ಪ್ರದೇಶದ ಸೋಶಿಯಲ್ ನಿಯರಿಂಗ್‌ನ ಪ್ರಯೋಗ ಕರ್ನಾಟಕದಲ್ಲಿ ಬಿಎಸ್ಪಿಗೆ ಒಳಿತು ುವುದಕ್ಕಿಂತ ಹಾನಿ ಮಾಡಿದ್ದೇ ಜಾಸ್ತಿ. ಇದರಿಂದಾಗಿ ಬಿಎಸ್ಪಿ ತೆ ತನ್ನ ಮೇಲೆ ದಲಿತ ಮತ್ತು ಹಿಂದುಳಿದ ದಾಯಗಳಿಗಿದ್ದ ವಿಶ್ವಾಸವನ್ನೂ ಉಳಿಸಿಕೊಳ್ಳಲೂ ಗಾಗಿಲ್ಲ, ಇನ್ನೊಂದೆಡೆ ಮೇಲ್ಜಾತಿ ಸಮುದಾಯಗಳನ್ನು ಲೂ ಸಾಧ್ಯವಾಗಿಲ್ಲ.

ಟ್ಟಿನಲ್ಲಿ ತಾನು ತುಳಿದಿದ್ದೇ ದಾರಿ ಎಂದುಕೊಂಡು ಬೀಗುತ್ತಿದ್ದ ಯು ಈಗ ಮುಗ್ಗರಿಸಿರುವುದಂತೂ ಸತ್ಯ.

■ ಕುಮಾರ್ ಬುರಡಿಕಟ್ಟಿ

ರಿಯಲ್ ಎಸ್ಟೇಟ್ ಎಮ್ಮೆಲ್ಲೆಗಳು






ಇನ್ನು ಮುಂದೆ ಬೆಂಗಳೂರನ್ನು ನೆಲಗಳ್ಳರು ಆಳುತ್ತಾರೆ. ವಿಧಾನಸೌಧವೇ ರಿಯಲ್ ಎಸ್ಟೇಟ್ ಏಜೆನ್ಸಿಯಾಗಿ ಪರಿವರ್ತನೆಯಾಗುವುದು ಶತಸ್ಸಿದ್ಧ. ಸರಿಸುಮಾರು ಒಂದು ಡಜನ್ ಭೂಕಂಟಕರನ್ನು ಎಮ್ಮೆಲ್ಲೇಗಳಾಗಿ ವಿಧಾನಸೌಧಕ್ಕೆ ಕರೆತಂದ ಕೀರ್ತಿ ಬಿಜೆಪಿಗಲ್ಲದೇ ಇನ್ಯಾರಿಗೆ ಸಲ್ಲಬೇಕು?

ಎ. ಕೃಷ್ಣಪ್ಪನವರನ್ನು ಸೋಲಿಸಿ ಕೆ.ಆರ್.ಪುರದಿಂದ ಗೆದ್ದ ನಂದೀಶ್ ರೆಡ್ಡಿ, ಬೊಮ್ಮನಹಳ್ಳಿಯಿಂದ ಕುಪೇಂದ್ರ ರೆಡ್ಡಿಯನ್ನು ಮಣಿಸಿದ ಸತೀಶ್ ರೆಡ್ಡಿ, ಯಲಹಂಕದಿಂದ ಆಯ್ಕೆಯಾದ ವಿಶ್ವನಾಥ್ ರೆಡ್ಡಿ, ಬೆಂಗಳೂರು ದಕ್ಷಿಣದಲ್ಲಿ ಗೆದ್ದ ಕೃಷ್ಣಪ್ಪ, ದಾಸರಹಳ್ಳಿಯಿಂದ ಗೆದ್ದುಬಂದ ಶೆಟ್ಟಿಹಳ್ಳಿ ಮುನಿರಾಜು, ರಾಜರಾಜೇಶ್ವರಿ ನಗರಕ್ಕೆ ಎಮ್ಮೆಲ್ಲೇಯಾದ ಶ್ರೀನಿವಾಸ್, ಹೆಬ್ಬಾಳದ ಕಟ್ಟಾ, ಪದ್ಮನಾಭನಗರದ ಆಶೋಕ್; ಹೀಗೆ ಭೂಕೊಳ್ಳೆಯನ್ನೇ ಕಾಯಕ ಮಾಡಿಕೊಂಡು, ದೋಚಿದ ದುಡ್ಡನ್ನೇ ಚುನಾವಣೆಗೆ ಸುರಿದು ಗೆದ್ದು ಬಂದ ಇಂಥ ಒಂದು ಡಜನ್ 'ರಿಯಲ್ ಎಸ್ಟೇಟ್ ಎಮ್ಮೆಲ್ಲೆ'ಗಳೇ ತಾನೇ ಬೆಂಗಳೂರಿನ ಭವಿಷ್ಯ ನಿರ್ಧಾರಕರು?

ಇಂಥ ಭೂಡಕಾಯಿತರೆಲ್ಲರನ್ನೂ ಒಂದು ತಕ್ಕಡಿಗೆ ಹಾಕಿದರೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಒಬ್ಬನೇ ಅವರೆಲ್ಲರ ಸಮಕ್ಕೆ ತೂಗಬಲ್ಲ. ಹಿಂದೆ ಸಮ್ಮಿಶ್ರ ಸರ್ಕಾರವಿದ್ದಾಗಲೇ ಕೆಐಎಡಿಬಿಯನ್ನು ಆಯುಧ ಮಾಡಿಕೊಂಡು ಸಾವಿರದೈನೂರು ಎಕರೆ ದೋಚಿದವನು ಕಟ್ಟಾ ನಾಯ್ಡು. ಮಗ ಕಟ್ಟಾ ಜಗ್ಗ ಸರ್ಜಾಪುರದ ಚಿಕ್ಕನಾಗಮಂಗಲ ಕೆರೆಯನ್ನೇ ನುಂಗಿ ಕಂದಾಯ ಇಲಾಖೆಯ ಅಧಿಕಾರಿಯ ಮೇಲೆ ಗೂಂಡಾಗಿರಿ ನಡೆಸಿದ್ದ. ಕಟ್ಟಾ ಮಗನ ಮೇಲೆ ಪೊಲೀಸ್ ಕೇಸೂ ದಾಖಲಾಯಿತು.

ಭಾರಿ ಕೈಗಾರಿಕಾ ಮಂತ್ರಿಯಾಗಿ ಕಟ್ಟಾ ನಕಲಿ ಕಂಪೆನಿಗಳ ಹೆಸರಲ್ಲಿ ತನ್ನ ಛೇಲಾಗಳು, ಆಂಧ್ರದ ಖದೀಮರಿಗೆ ಬಡ್ರೈತರ ಭೂಮಿ ಕಿತ್ತು ಕೊಟ್ಟದ್ದೇ ದೊಡ್ಡ ಕರ್ಮಕಾಂಡವಾಗುತ್ತದೆ. ಇಂಥವನನ್ನು ಗೆಲ್ಲಿಸಿದ ಹೆಬ್ಬಾಳದ ಮತದಾರರಿಗೆ ಇನ್ನೆಂಥ ಕೇಡು ಕಾದಿದೆಯೋ? ಕೆರೆ-ಪಾರ್ಕುಗಳ ಕತೆ ಹಾಳಾಗಲಿ, ಕನಿಷ್ಠ ಸಾರ್ವಜನಿಕರು ನಡೆದಾಡಲು, ಫುಟ್‌ಪಾತಿಗಾದರೂ ಕಟ್ಟಾ ಜಾಗ ಉಳಿಸಿದರೆ ಅದೇ ಹೆಬ್ಬಾಳದ ಪುಣ್ಯ.




ವಿಶ್ವನಾಥ್

ಹೆಬ್ಬಾಳದ ಪಕ್ಕದ್ದೇ ಯಲಹಂಕ. ಇಲ್ಲಿಂದ ಗೆದ್ದ ವಿಶ್ವನಾಥ್ ರೆಡ್ಡಿ ಕೂಡ ಬೆಂಗಳೂರು ಕಂಡ ಭಯಂಕರ ಭೂಡಕಾಯಿತರಲ್ಲೊಬ್ಬ. ಎಚ್.ಎ.ಎಲ್. ನೌಕರರ ಗೃಹ ನಿರ್ಮಾಣ ಸಂಘಕ್ಕೆ ನಿರ್ದೇಶಕನಾಗಿ ಗೆದ್ದ ವಿಶ್ವನಾಥ್ ರೆಡ್ಡಿ ಕೆರೆ ಭೂಮಿ, ಪಾರ್ಕ್ ಭೂಮಿ ಯಾವುದನ್ನೂ ಬಿಡದೇ ನುಂಗಿ ಹಾಕಿದ್ದಾನೆ. ಎ.ಟಿ. ರಾಮಸ್ವಾಮಿ ಸಮಿತಿ ವರದಿಯ ಪ್ರಕಾರ ಈ ವಿಶ್ವನಾಥ್ ಒಬ್ಬನೇ ನೂರೆಪ್ಪತ್ತು ಎಕರೆ ಸರ್ಕಾರಿ ಭೂಮಿ ದೋಚಿದ್ದಾನೆ. ಇನ್ನು ಎಮ್ಮೆಲ್ಲೇಯಾಗಿ ಕನಿಷ್ಠ ಚುನಾವಣೆಗೆಂದು ತಾನು ಸುರಿದ ಹತ್ತು ಕೋಟಿಯನ್ನಾದರೂ ಸಂಪಾದಿಸಲೇಬೇಕಲ್ಲವೇ?

ಅದಕ್ಕೆಂದು ಯಲಹಂಕದ ಯಾವ ಪಾರ್ಕು ಯಾವ ಆಟದ ಮೈದಾನವನ್ನು ಮುಕ್ಕುತ್ತಾನೋ?

ಕೆ.ಆರ್. ಪುರದ ನಂದೀಶ್ ರೆಡ್ಡಿ ಹುಟ್ಟಾ ಭೂಡಕಾಯಿತನೆಂಬ ಬಗ್ಗೆ ಯಾರಿಗೂ ಆಕ್ಷೇಪಣೆಗಳಿಲ್ಲ. ಹಾಗೇ ಬೆಂಗಳೂರು ದಕ್ಷಿಣದಿಂದ ಗೆದ್ದ ಕೃಷ್ಣಪ್ಪ ಕೂಡ ಸರ್ಕಾರಿ ಗೋಮಾಳ, ಕೆರೆ ಭೂಮಿ ಕದ್ದೇ ಕುಬೇರನಾದವನು. ಈತನ ಅಣ್ಣ ಎಂ. ಶ್ರೀನಿವಾಸ್ ಕೂಡ ಪಕ್ಕದ ರಾಜರಾಜೇಶ್ವರಿ ನಗರದಿಂದ ಗೆದ್ದಿರುವುದು ಮತ್ತೊಂದು ದುರಂತ. ಅಣ್ಣತಮ್ಮಂದಿರಿಬ್ಬರೂ ಭೂಕೊಳ್ಳೆಯಲ್ಲೇ ಪಳಗಿದ ನಿಷ್ಣಾತರು. ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ ಮಹಾನ್ ಭೂಗಳ್ಳ ಕುಪೇಂದ್ರ ರೆಡ್ಡಿಯನ್ನು ಸೋಲಿಸಿದ್ದೇನೋ ಸರಿ. ಹಾಗಂಥ ಸತೀಶ್ ರೆಡ್ಡಿಯನ್ನು ನಂಬುವಂತಿಲ್ಲ, ಈತ ಕೂಡ ನೆಲ ಹಿಡುಕನೇ.



ನಂದೀಶ್ ರೆಡ್ಡಿ

ಇಂಥ ಭೂಕಂಟಕರ ದೊರೆಯಂತೆ ಕಾಣುವ ಆರ್. ಅಶೋಕ್ ಈ ಹಿಂದೆಯೇ ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆಯ ರೂವಾರಿ. ಈತನ ಶಿಷ್ಯ ಶೆಟ್ಟಿಹಳ್ಳಿ ಮುನಿರಾಜು ಎಂಬ ಮತ್ತೊಬ್ಬ ಲ್ಯಾಂಡ್ ಬ್ರೋಕರ್ ದಾಸರಹಳ್ಳಿಯಿಂದ ಗೆದ್ದಿದ್ದಾನೆ. ಇವರೆಲ್ಲ ಗೆದ್ದಿದ್ದು ಅವರವರ ಸ್ವಂತ ರೊಕ್ಕದಿಂದೇನಲ್ಲ, ಭೂಮಿ ದೋಚಿದ ದುಡ್ಡು ಸುರಿದೇ ಗೆದ್ದಿದ್ದಾರೆ. ಈಗ ಗೆದ್ದ ನಂತರ ಮತ್ತಷ್ಟು ನೆಲ ದೋಚುತ್ತಾರೆ. ಏಕೆಂದರೆ ಅದು ಬಿಟ್ಟರೆ ಇವರ್‍ಯಾರಿಗೂ ಬೇರೆ ಕಸುಬು ಗೊತ್ತಿಲ್ಲ. ಹಾಕಿದ ಬಂಡವಾಳವನ್ನು ದುಡಿಯಬೇಕೆಂದರೆ ಮತ್ತೆ ನೆಲದೋಚಬೇಕು. ಮುಂದಿನ ಚುನಾವಣೆಯ ಖರ್ಚಿಗೂ ಭೂಡಕಾಯಿತಿ ಮಾಡಬೇಕು. ನೆಲ ಹಿಡುಕನೇ ಎಮ್ಮೆಲ್ಲೇಯಾದರೆ ಏನೆಲ್ಲ ಅನಾಹುತವಾಗುತ್ತೋ ಅದೆಲ್ಲವೂ ಖಂಡಿತ ನೆರವೇರಲಿದೆ. ಪಾರ್ಕಿಂಗ್ ಜಾಗ, ಆಟದ ಮೈದಾನ, ಕೆರೆ ಭೂಮಿ ಕೊನೆಕೊನೆಗೆ ನಡೆದಾಡಲು ಫುಟ್‌ಪಾತಿಗೂ ಭೂಮಿ ಸಿಗಲಿಕ್ಕಿಲ್ಲ.

ಯಾವುದಕ್ಕೂ ಬೆಂಗಳೂರಿನ ಜನ ಹುಷಾರಾಗಿರಬೇಕು. ಯಾಮಾರಿದರೆ ವಿಧಾನಸೌಧವನ್ನೂ ಆಂಧ್ರದ ರೆಡ್ಡಿಗಳಿಗೆ ಮಾರಲು ಈ ಮಂದಿ ಹೇಸುವವರಲ್ಲ.

■ ರಾ. ಸೋಮನಾಥ್

ಸ್ವತಂತ್ರ ಅಭ್ಯರ್ಥಿಗಳಿಗೆ ಡಿಮ್ಯಾಂಡ್



ವರ್ತೂರು ಪ್ರಕಾಶ್

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದರೂ ಸರಳ ಬಹುಮತಕ್ಕೆ ಬೇಕಾದ 113 ಸ್ಥಾನಗಳು ಅದರ ಬಳಿ ಇಲ್ಲ. ಬಿಜೆಪಿ ಈಗ ಗೆದ್ದಿರುವ 110 ಸ್ಥಾನಗಳ ಜೊತೆಗೆ ಅದಕ್ಕೆ ಇನ್ನೂ ಮೂರು ಸದಸ್ಯರ ಬೆಂಬಲ ಬೇಕೇಬೇಕು.

ಸ್ವತಂತ್ರ ಅಭ್ಯರ್ಥಿಗಳ ಪಾತ್ರ ಇರುವುದು ಇಲ್ಲೇ.

ಈಗ ಒಟ್ಟು ಐವರು ಸ್ವತಂತ್ರರು ಗೆದ್ದಿದ್ದಾರೆ. ಈ ಐವರು ಸ್ವತಂತ್ರರ ಪೈಕಿ ಕಾಂಗ್ರೆಸ್‌ನ ನಾಲ್ವರು ಬಂಡಾಯ ಅಭ್ಯರ್ಥಿಗಳಿದ್ದರೆ ಬಿಜೆಪಿಯಿಂದ ಕನಕಗಿರಿಯಲ್ಲಿ ಶಿವರಾಜ್ ಪಂಗಡಗಿ ಗೆದ್ದು ಬಂದಿದ್ದಾರೆ. ಈ ಶಿವರಾಜ್ ಈಗ ಬಿಜೆಪಿ ಜೊತೆ ಗುರುತಿಸಿಕೊಂಡರೂ ಬಿಜೆಪಿಗೆ ಇನ್ನೂ ಇಬ್ಬರ ಬೆಂಬಲ ಬೇಕಾಗುತ್ತದೆ.

ಆಗ ಡಿಮ್ಯಾಂಡ್ ಬರುವುದು ಬಂಡಾಯ ಕಾಂಗ್ರೆಸ್ ವಿಜೇತರಿಗೆ.

ಈ ಖರ್ಗೆ-ಧರಂಸಿಂಗ್ ಜೋಡಿ ಕಾಂಗ್ರೆಸ್ ಅನ್ನು ಹೇಗೆ ನಾಶ ಮಾಡಿದೆಯೆಂದರೆ ಅವರು ಟಿಕೆಟ್ ತಪ್ಪಿಸಿದ ಎಲ್ಲಾ ಐದು ಜನ ಬಂಡಾಯ ಕಾಂಗ್ರೆಸ್ ಆಗಿ ಸ್ಪರ್ಧಿಸಿ ಗೆದ್ದು ಬಂದಿದ್ದಾರೆ.

ಕೋಲಾರದ ಉದಾಹರಣೆಯನ್ನೇ ನೋಡಿ. ಅಲ್ಲಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಕೆ. ಶ್ರೀನಿವಾಸಗೌಡ 45,417 ಓಟ್ ಪಡೆದರೆ ಬಂಡಾಯ ಕಾಂಗ್ರೆಸ್‌ನ ವರ್ತೂರು ಪ್ರಕಾಶ್ 66,446 ಓಟ್ ಪಡೆದು ಗೆದ್ದು ಬಂದಿದ್ದಾರೆ.

ಪಾವಗಡದಲ್ಲಿ ಬಂಡಾಯ ಕಾಂಗ್ರೆಸ್‌ನ ವೆಂಕಟರಾಮಪ್ಪ 43,607 ಓಟ್ ಗಳಿಸಿ ಗೆದ್ದರೆ ಕಾಂಗ್ರೆಸ್‌ನ ಡಾ. ಗಾಯಿತ್ರಿ ದೇವಿಗೆ ಜುಜುಬಿ 21,397 ಓಟು ಬಂದಿದೆ.

ಹಿರಿಯೂರಿನದ್ದೂ ಇದೇ ಕತೆ. ಅಲ್ಲಿ ಕಾಂಗ್ರೆಸ್ ಟಿಕೆಟ್ ವಂಚಿತ ಸುಧಾಕರ್‌ಗೆ 43,229 ಓಟು ಬಂದರೆ ಕಾಂಗ್ರೆಸ್‌ನ ಗೀತಾ ನಂದಿನಿ ಗೌಡ ಜುಜುಬಿ 6251 ಓಟು ಗಳಿಸಿ ಅಡ್ರೆಸ್ ಇಲ್ಲದಂತಾಗಿದ್ದಾರೆ. ಮಳವಳ್ಳಿಯಲ್ಲಿ ಬಂಡಾಯ ಕಾಂಗ್ರೆಸ್‌ನ ನರೇಂದ್ರ ಸ್ವಾಮಿಗೆ 45,827 ಓಟ್ ಬಂದರೆ ಅಧಿಕೃತ ಕಾಂಗ್ರೆಸ್‌ನವರಿಗೆ ಬಂದಿದ್ದು 7044 ಓಟು ಮಾತ್ರ.

ಕೊನೆಯದಾಗಿ ಹೊಸದುರ್ಗದ್ದೂ ಇದೇ ಕತೆ. ಅಲ್ಲಿ ಕಾಂಗ್ರೆಸ್ ಬಂಡಾಯದ ಶೇಖರ್ ಕಾಂಗ್ರೆಸ್‌ನವರಿಗಿಂತ ಸಾವಿದರನೂರು ಓಟ್‌ಗಳ ಲೀಡ್ ಪಡೆದು ಗೆದ್ದಿದ್ದಾರೆ.

ಇಲ್ಲಿ ಇಷ್ಟೆಲ್ಲಾ ವಿವರ ನೀಡಲು ಕಾರಣವಿದೆ.

ಈ ಬಂಡಾಯ ಕಾಂಗ್ರೆಸ್‌ನವರ ಪೈಕಿ ಯಾರಾದರೂ ಇಬ್ಬರು ಬಿಜೆಪಿಯತ್ತ ಹೋದರೂ ಸಾಕು ಸರಳ ಬಹುಮತ ಸರ್ಕಾರ ಅಸ್ತಿತ್ವಕ್ಕೆ ಬರುತ್ತದೆ. 'ಬಿಜೆಪಿ ಕೋಮುವಾದಿ, ಅವರಿಗೆ ಬೆಂಬಲ ನೀಡಬೇಡಿ" ಎಂದು ಕಾಂಗ್ರೆಸ್ ಅಂದರೆ ಅವರು ಈ ಹಂತದಲ್ಲಿ ನಿಂತು ಕೇಳಿಸಿಕೊಳ್ಳುತ್ತಾರಾ? ಬಹಳ ಮುಖ್ಯವಾಗಿ ಹೀಗೆ ಗ್ಯಾರಂಟಿ ಗೆಲ್ಲಬಲ್ಲ ಟಿಕೆಟ್ ಆಕಾಂಕ್ಷಿಗಳಿಗೇ ಖರ್ಗೆ-ಧರಂಸಿಂಗ್ ಜೋಡಿ ಟಿಕೆಟ್ ಕೊಡಿಸಲಿಲ್ಲ ಏಕೆ?

ಬಂಡಾಯ ಕಾಂಗ್ರೆಸ್‌ನಿಂದ ಗೆದ್ದವರು ಒಂದೆಡೆಯಾದರೆ ಧರಂಸಿಂಗ್ ನಡೆಸಿದ ಪಿತೂರಿಯಿಂದಾಗಿ ಕಾಂಗ್ರೆಸ್ ಕನಿಷ್ಠ ಇನ್ನು 15-20 ಕ್ಷೇತ್ರಗಳಲ್ಲಿ ಗೆಲ್ಲುವ ಸಾಧ್ಯತೆಯಿದ್ದರೂ ಕಳಪೆ ಜನರಿಗೆ ಟಿಕೆಟ್ ಕೊಡಿಸಿ ಬಿಜೆಪಿ ಗೆಲುವಿಗೆ ಸಹಕರಿಸಿದ್ದಾರೆ. ಕಾಂಗ್ರೆಸ್ ಉದ್ಧಾರವಾಗಬೇಕೆಂದರೆ ಹೇಗೆ ಸಾಧ್ಯ ಹೇಳಿ. ■





ಹೆಚ್.ಪಿ. ಈರಪ್ಪ


ಖದೀಮ ಭರತೇಶ್ ಗೌಡ


ಎಸ್ಐ ರಾಮಚಂದ್ರ


ಗಾರ್ಡ್ ವಾಸು



ಕಳ್ಳಭಟ್ಟಿಗೆ ಯಡ್ಡಿ ಕುಮ್ಮಕ್ಕು

ಕಳ್ಳಭಟ್ಟಿ ಕುಡಿದು ಸತ್ತವರ ಬಗ್ಗೆ ಬೇರೆಲ್ಲ ನಾಯಕರ ಸಂತಾಪಕ್ಕೂ, ಬಿಜೆಪಿ ನಾಯಕ ಯಡಿಯೂರಪ್ಪ ಇಟ್ಟ ಕಣ್ಣೀರಿಗೂ ವ್ಯತ್ಯಾಸವಿದೆ. ಸರಿಸುಮಾರು ಇನ್ನೂರೈವತ್ತು ಜೀವಿಗಳನ್ನು ಬಲಿಪಡೆದ ಕಳ್ಳಭಟ್ಟಿ ದುರಂತಕ್ಕೂ ಬಿಜೆಪಿ ನಾಯಕ ಯಡಿಯೂರಪ್ಪನವರಿಗೂ ನೇರಾನೇರ ಸಂಬಂಧ ಎದೆ. ಯಾರು ಕಳ್ಳಭಟ್ಟಿಯನ್ನು ತಡೆಯಬೇಕಿತ್ತೋ, ಕಳ್ಳಭಟ್ಟಿ ಖದೀಮರ ವಿರುದ್ಧ ಕಣ್ಣಿಡಬೇಕಿತ್ತೋ ಅಂಥ ಆಯಕಟ್ಟಿನ ಜಾಗಗಳಿಗೆಲ್ಲ ತನ್ನದೇ ಜಾತಿಯವರನ್ನು ತನ್ನ ಆಪ್ತೇಷ್ಟರನ್ನು ತಂದು ಕೂರಿಸಿದ ಮಾಜಿ ಉಪಮುಖ್ಯಮಂತ್ರಿ ಅರ್ಥಾತ್ ಅಬಕಾರಿ ಮಂತ್ರಿ ಯಡಿಯೂರಪ್ಪನವರಿಗೆ ಇಷ್ಟೆಲ್ಲಕ್ಕೂ ತನ್ನ ಹೊಣೆಯೇ ದೊಡ್ಡದೆಂಬುದು ಮಾತ್ರ ಏಕೆ ಅರ್ಥವಾಗುತ್ತಿಲ್ಲ?

ಅಬಕಾರಿಯಂಥ ಮಹತ್ವದ ಮತ್ತು ಅತೀಸೂಕ್ಷ್ಮ ಖಾತೆಯೊಂದನ್ನು ಬಡಜನರ ಪ್ರಾಣದ ಮೇಲಿನ ಕಾಳಜಿಯಿಂದೇನಾದರೂ ಯಡ್ಡಿ ನಿಭಾಯಿಸಿದ್ದೇ ಆಗಿದ್ದರೆ ಇವತ್ತಿನ ದುರಂತ ಸಂಭವಿಸುತ್ತಿರಲಿಲ್ಲ!

ಅಧಿಕಾರ ದಕ್ಕಿದ್ದೇ ತಲೆ ತಿರುಗಿದ ಯಡ್ಡಿ ಅಬಕಾರಿ ಕುರಿತಂತೆ ಮೊದಲು ಮಾಡಿದ ತಪ್ಪೆಂದರೆ ಅಬಕಾರಿ ಆಯುಕ್ತನ ಹುದ್ದೆಗೆ ತನ್ನದೇ ಜಾತಿಯ ತನಗೆ ನಿಷ್ಠನಾಗಿದ್ದ ಸಿ.ಆರ್. ಚಿಕ್ಕಮಠ್ ಎಂಬ ನಿಷ್ಪ್ರಯೋಜಕನನ್ನು ತಂದದ್ದು. ಒಂದು ಮೂಲದ ಪ್ರಕಾರ ಅದು ಐದು ಕೋಟಿಯ ಡೀಲು. ಅದನ್ನು ಕುದಿರಿಸಿದ್ದು ಮತ್ತೊಬ್ಬ ಅಬಕಾರಿ ಖದೀಮ ಎಚ್.ಪಿ. ಈರಪ್ಪ!

ಆ ಕಾಲದಿಂದಲೂ ಅಬಕಾರಿ ಇಲಾಖೆಯನ್ನು ಮೇಯುತ್ತಲೇ ಬಂದ ಎಚ್.ಪಿ. ಈರಪ್ಪ ಕೂಡ ಜಾತಿಯಲ್ಲಿ ಲಿಂಗವತನೇ. ಹಿಂದೊಮ್ಮೆ ಈತನ ವಿರುದ್ಧ ಲೋಕಾಯುಕ್ತ ದಾಳಿಯಾಗಿ ದೊಡ್ಡಮಟ್ಟದ ಅಕ್ರಮ ಸಂಪತ್ತು ಜಪ್ತಿಯಾಗಿತ್ತು. ಯಡ್ಡಿ ಉಪಮುಖ್ಯ ಮಂತ್ರಿಯಾಗುವ ಹೊತ್ತಿಗೆ ಅಬಕಾರಿ ವಿಚಕ್ಷಣ ದಳದ





(Excise Intelligence Bureau) ಜಂಟಿ ಆಯುಕ್ತರಾಗಿದ್ದ ಗುರುಶಾಂತಪ್ಪ ಹೇಳಿಕೇಳಿ ನಿಷ್ಠಾವಂತ ಮತ್ತು ಪ್ರಾಮಾಣಿಕ. ರಾಜ್ಯಾದ್ಯಂತ ಕಳ್ಳಭಟ್ಟಿಯನ್ನು ತಡೆಯುವ ಜವಾಬ್ದಾರಿಯಿರುವುದು ಈ ಅಬಕಾರಿ ವಿಚಕ್ಷಣ ದಳಕ್ಕೇ.

ಜೊತೆಗೆ ಜಾರಿ ಮತ್ತು ತನಿಖಾ ದಳವೇ (Enforcement and Investigation) ಪ್ರತ್ಯೇಕವಾಗಿದೆ. ವಿಚಕ್ಷಣದಳ ಮತ್ತು ಜಾರಿ ಮತ್ತು ತನಿಖಾ ದಳಗಳ ಮುಖ್ಯ ಕರ್ತವ್ಯವೇ ಸೆಕೆಂಡ್ಸ್ ತಡೆಗಟ್ಟುವುದು, ಥರ್ಡ್ಸ್ ವಶಪಡಿಸಿಕೊಳ್ಳುವುದು ಮತ್ತು ಕಳ್ಳಭಟ್ಟಿಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸುವುದು. ಯಾವ ವೀರಾವೇಶದಿಂದ ಸಾರಾಯಿ ನಿಷೇಧಕ್ಕೆ ಯಡಿಯೂರಪ್ಪ ಮುಂದಾದರೋ ಅಷ್ಟೇ ಪ್ರಾಮಾಣಿಕವಾಗಿ ಕಳ್ಳಭಟ್ಟಿಯ ವಿರುದ್ಧವೂ ಕ್ರಮ ಕೈಗೊಳ್ಳಬೇಕಿತ್ತಲ್ಲವೆ?

ದುರಂತವೆಂದರೆ ಸಾರಾಯಿ ನಿಷೇಧದಲ್ಲಿದ್ದ ಯಡ್ಡಿಯ ಆಸಕ್ತಿ ಕಳ್ಳಭಟ್ಟಿಯ ವಿಷಯದಲ್ಲಿ ಇರಲೇ ಇಲ್ಲ. ಇದ್ದಿದ್ದರೆ ವಿಚಕ್ಷಣದ ಮುಖ್ಯಸ್ಥನ ಹುದ್ದೆಗೆ ಎಚ್.ಪಿ. ಈರಪ್ಪನಂಥ ಕಡುಭ್ರಷ್ಟನನ್ನು ತಂದು ಗುರುಶಾಂತಪ್ಪನವರಂಥ ಪ್ರಾಮಾಣಿಕ ಅಧಿಕಾರಿಯನ್ನು ಎತ್ತಂಗಡಿ ಮಾಡುತ್ತಿರಲಿಲ್ಲ.


ಸಜ್ಜನ್ ಶೆಟ್ಟರ್ ನಂತರ ಅಬಕಾರಿ ಇಲಾಖೆ ಕಂಡ ನಿಷ್ಠಾವಂತ ಮತ್ತು ಪ್ರಾಮಾಣಿಕ ಅಧಿಕಾರಿಗಳ ಪೈಕಿ ಗುರುಶಾಂತಪ್ಪ ಮೊದಲಿಗರು. ಇಂಥ ಅಧಿಕಾರಿಯನ್ನು ಕಿತ್ತೆಸೆದು ಈರಪ್ಪನಂಥ ಬಕಾಸುರನನ್ನು ಅಬಕಾರಿ ವಿಚಕ್ಷಣ ದಳಕ್ಕೆ ತಂದ ಯಡಿಯೂರಪ್ಪ ಸುಮ್ಮನೇನೂ ತಂದಿರಲಿಲ್ಲ. ಇದೂ ಕೂಡ ಕೋಟಿ ಲೆಕ್ಕದ ಡೀಲೇ. ಇದೇ ಈರಪ್ಪನೇ ನಿಂತು ತನಗೆ ಅನುಕೂಲನಾದ ಚಿಕ್ಕಮಠ್‌ನನ್ನು ಅಬಕಾರಿ ಆಯುಕ್ತನ ಹುದ್ದೆಗೆ ಹಾಕಿಸಿಕೊಂಡ. ತನಿಖೆ ಮತ್ತು ಜಾರಿ ದಳಕ್ಕೂ ಯಡ್ಡಿ ತನ್ನದೇ ಜಾತಿವಂತ ಮತ್ತು ಅಷ್ಟೇ ಭ್ರಷ್ಟನಾದ ನಾಗೇಂದ್ರಪ್ಪನನ್ನು ತಂದುಕೊಂಡಿದ್ದು ಇಡೀ ಕಳ್ಳ ಭಟ್ಟಿ ದುರಂತಕ್ಕೊಂದು ಮುನ್ನುಡಿ ಬರೆದಂತಿತ್ತು.

ದುರಂತದ ಸುತ್ತ ಯಡ್ಡಿ ನೆರಳು

ವಿಚಕ್ಷಣ ದಳದ ಅಧಿಪತಿಯಾದ ಈರಪ್ಪ ತನಗೆ ಅನುಕೂಲವಾಗಲೆಂದೇ ಮಂಜುನಾಥ್ ಎಂಬ ಜಾರಕಿಹೊಳಿ ಸಂಬಂಧಿಯನ್ನು ತಂದು ವಿಚಕ್ಷಣ ದಳದ ಸೂಪರಿಂಟೆಂಡೆಂಟ್ ಮಾಡಿಕೊಂಡಿದ್ದ. ಅಲ್ಲಿಗೆ ಇಡೀ ಅಬಕಾರಿ ಇಲಾಖೆ ಸರ್ವಂ ಯಡ್ಡಿ ಮಯಂ ಆಗಿಹೋಯಿತು. ಶಾಸ್ತ್ರಕ್ಕಷ್ಟೇ ಚಿಕ್ಕಮಠ್ ಅಬಕಾರಿ ಆಯುಕ್ತರಾದರೂ ಇಡೀ ಅಬಕಾರಿ ಇಲಾಖೆಯನ್ನು ನಿಯಂತ್ರಿಸಿದ್ದು ಎಚ್.ಪಿ. ಈರಪ್ಪ, ಈತನನ್ನು ಆ ಹುದ್ದೆಗೆ ತರುವಲ್ಲಿ ಯಡ್ಡಿಗಿಂತಲೂ ಶೋಭಾ ಕರಂದ್ಲಾಜೆಯ ಆಸಕ್ತಿಯ ಪಾಲೇ ದೊಡ್ಡದಿತ್ತು. ಏಕೆಂದರೆ ಕರಂದ್ಲಾಜೆಯ ರಿಯಲ್ ಎಸ್ಟೇಟ್ ಪಾರ್ಟನರ್ ಆದರ್ಶ ಡೆವಲಪರ್ಸ್ ಧಣಿ ಜೈಶಂಕರ್ ಮತ್ತು ಈರಪ್ಪ ಮಧ್ಯೆ ಆ ಕಾಲದಿಂದಲೂ ಲ್ಯಾಂಡ್ ಡೀಲಿತ್ತು.

ಇದೇ ನಂಟನ್ನು ಬಳಸಿಕೊಂಡು ಇಡೀ ಅಬಕಾರಿ ಇಲಾಖೆಯನ್ನು ಆಳಲಾರಂಭಿಸಿದ್ದ ಈರಪ್ಪ ಪ್ರತಿನಿತ್ಯ ಲೆಕ್ಕ ಒಪ್ಪಿಸುತ್ತಿದ್ದದ್ದು ಶೋಭಾ ಕರಂದ್ಲಾಜೆಗೆ. ಈ ಥರದ ಡೀಲಿಗೆಂದೇ ಲೀ ಮೆರಿಡಿಯನ್ ರೂಂ ಹಿಡಿದು ಕೂತಿದ್ದ ಕರಂದ್ಲಾಜೆಯ ಉಡಿ ತುಂಬಿಸಬೇಕಾದರೆ ದೊಡ್ಡಮಟ್ಟದ ಸೆಕೆಂಡ್ಸ್‌ನಿಂದಷ್ಟೇ ಹಣ ಹುಟ್ಟಬೇಕಿತ್ತು. ಏಕೆಂದರೆ ಸಾರಾಯಿ ನಿಂತುಹೋಗಿತ್ತು. ಜೊತೆಗೆ ಕಳ್ಳಭಟ್ಟಿ ಖದೀಮರಿಂದಲೂ ಅಷ್ಟಿಷ್ಟು ಕಾಸು ಕೀಳುವ ಮಟ್ಟಕ್ಕೂ ಈರಪ್ಪನ ಅಬಕಾರಿ ಶಿಷ್ಯರು ಇಳಿಯಬೇಕಾಯಿತು.

ಕರಂದ್ಲಾಜೆಯ ಮೂಲಕ ಯಡ್ಡಿಯ ಖಜಾನೆ ತುಂಬಿಸುವ ಹಂಗಿಗೆ ಬಿದ್ದ ಅಬಕಾರಿ ಇಲಾಖೆಯಲ್ಲಿ ಆ ಕಾಲದಿಂದಲೂ ನಿಷ್ಠಾವಂತ ಗಾರ್ಡ್‌ಗಳು, ಇನ್ಸ್‌ಪೆಕ್ಟರ್‌ಗಳ ಹಿಂಡೇ ಇತ್ತು. ಈ ಪೈಕಿ ಬಹುತೇಕರು ಕೆಳಜಾತಿಯವರು. ಬಂದುಬಂದದ್ದೇ ಈರಪ್ಪ ಮಾಡಿದ ಮೊದಲ ಕೆಲಸವೆಂದರೆ ಇಂಥ ನಿಷ್ಠಾವಂತ ಇನ್ಸ್‌ಪೆಕ್ಟರ್‌ಗಳು ಮತ್ತು ಗಾರ್ಡ್‌ಗಳನ್ನು ನೀರು ನೆರಳಿಲ್ಲದ ಜಾಗಕ್ಕೆ ಎತ್ತಂಗಡಿ ಮಾಡಿ ಅಂಥ ಕಡೆಗಳಿಗೆಲ್ಲ ತನ್ನದೇ ಜಾತಿಯ ಭ್ರಷ್ಟರನ್ನು ಪ್ರತಿಷ್ಠಾಪಿಸಿದ್ದು. ಈ ಪೈಕಿ ಭರತೇಶ್‌ಗೌಡ ಎಂಬ ಇನ್ಸ್‌ಪೆಕ್ಟರ್ ಪಕ್ಕಾ ವಸೂಲಿ ಗಿರಾಕಿ. ಪ್ರಾರಂಭದಲ್ಲಿ ಸೂಪರಿಂಟೆಂಡೆಂಟ್ ಮಂಜುನಾಥ್ ಛೇಲಾಗಿರಿ ಮಾಡಿಕೊಂಡಿದ್ದ ಈತನ ಮುಖ್ಯ ಕಸುಬೇ ರಾಜ್ಯಾದ್ಯಂತದ ಡಿಸ್ಟಿಲ್ಲರಿಗಳು ಮತ್ತು ಬಾರು-ವೈನ್ ಸ್ಟೋರ್‌ಗಳಿಂದ ಮಂತ್ಲಿ ವಸೂಲಿ ಮಾಡುವುದು. ಒಂದೆಡೆ ಶೋಭಾ ಕರಂದ್ಲಾಜೆ ಲೇ ಮೆರಿಡಿಯನ್‌ನಲ್ಲಿ ಕೂತು ರೊಕ್ಕ ಎಣಿಸಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಭರತೇಶ್‌ಗೌಡನ ವಸೂಲಿ ಸವಾರಿ ಕರ್ನಾಟಕದ ಉದ್ದಗಲಕ್ಕೂ ನಿರಾತಂಕವಾಯಿತು.


ಎನ್.ಎಸ್. ನಾಗರಾಜ್

ಭರತೇಶ್‌ಗೌಡ ಒಬ್ಬನೇ ತಿಂಗಳೊಂದಕ್ಕೆ 60 ಲಕ್ಷ ರೂಪಾಯಿಯ ಮಾಮೂಲಿ ಸಂಗ್ರಹಿಸಿ ಈರಪ್ಪನ ಕೈಗಿಡುತ್ತಾನೆಂದರೆ ಇನ್ನಾವ ಮಟ್ಟದ ಸೆಕೆಂಡ್ಸ್ ಮತ್ತು ಕಳ್ಳಭಟ್ಟಿ ನಡೆಯೋಲ್ಲ?

ಈತನಂತೆ ಬೆಂಗಳೂರಿನ ಪ್ರತಿ ಬಾರು ವೈನ್‌ಸ್ಟೋರ್ಸ್ ಮತ್ತು ಕಳ್ಳಭಟ್ಟಿ ದೊರೆಗಳಿಂದ ವಸೂಲಿಗೆ ನಿಂತವನು ಅಬಕಾರಿ ಸಬ್‌ಇನ್ಸ್‌ಪೆಕ್ಟರ್ ರಾಮಚಂದ್ರ. ಈತ ಮಾಜಿ ಮೇಯರ್ ನಾರಾಯಣಸ್ವಾಮಿ ಖಾಸಾ ತಮ್ಮ. ಜೊತೆಗೆ ಎರಡು ವೈನ್‌ಸ್ಟೋರ್ ಮತ್ತು ಮೂರು ಬಾರ್‌ಗಳ ಮಾಲೀಕ. ಅಬಕಾರಿ ಇಲಾಖೆಯಲ್ಲಿದ್ದೇ ಬಾರು -ವೈನ್ ಸ್ಟೋರ್ ನಡೆಸಿ ಗಳಿಸಿದ ದುಡ್ಡಲ್ಲಿ ಚಾಮರಾಜಪೇಟೆಯಲ್ಲೊಂದು ಪೆಟ್ರೋಲ್ ಬಂಕ್ ನಡೆಸುತ್ತಾನೆ. ಈತನೂ ಈರಪ್ಪನ ಬಲಗೈ ಬಂಟನೆ. ಈತನಿಗೆ ಬೆಂಗಳೂರಿನ ನಟೋರಿಯಸ್ ಸ್ಪಿರಿಟ್ ಸ್ಮಗ್ಲರುಗಳಾದ ಹೊಸಕೋಟೆ ನಾಗರಾಜ್, ತಮಿಳುನಾಡಿನ ಇಳಂಗೋವನ್, ಕಳ್ಳಭಟ್ಟಿಗೆ ಕಲರ್ ಬೆರೆಸಿ ಮಾರುವ ಸುರೇಶ್-ದಾಮೋದರ್ ಮುಂತಾದವರ ಜೊತೆ ಆತ್ಮೀಯ ನಂಟಿದೆ.

ಇಂಥ ಖದೀಮನ ಮಾತು ಕೇಳಿ ಆತನಿಗೆ ಬೇಕುಬೇಕಾದ ಅಧಿಕಾರಿಗಳನ್ನೆಲ್ಲ ಅಬಕಾರಿ ಇಲಾಖೆಯ ಆಯಕಟ್ಟಿಗೆ ತಂದದ್ದು ಈರಪ್ಪ. ಜೊತೆಗೆ ಈರಪ್ಪನ ಮತ್ತೊಬ್ಬ ಬಂಟ ಕೆಂಗೇರಿ ರೇಂಜಿನ ಸಬ್‌ಇನ್ಸ್‌ಪೆಕ್ಟರ್ ತಿಮ್ಮಾರೆಡ್ಡಿಯೂ ಸೆಕೆಂಡ್ಸ್ ಮತ್ತು ಕಳ್ಳಭಟ್ಟಿ ದೊರೆಗಳಿಂದ ವಸೂಲಿಗೆ ನಿಂತ. ತನಿಖೆ ಮತ್ತು ಜಾರಿ ದಳದ ನಾಗೇಂದ್ರಪ್ಪ ಕೂಡ ಈರಪ್ಪನ ಹಾದಿ ಹಿಡಿದು ಭಟ್ಟಿ ದೊರೆಗಳಿಂದ ವಸೂಲಿಗೆ ನಿಂತದ್ದೇ ದುರಂತದ ಮೂಲ.

ಅಲ್ಲಿಗೆ ಇಡೀ ಅಬಕಾರಿ ಇಲಾಖೆಯೇ ಸೆಕೆಂಡ್ಸ್ ಮತ್ತು ಕಳ್ಳಭಟ್ಟಿ ದೊರೆಗಳ ಎಂಜಲು ಕಾಸಿಗೆ ಕೈಚಾಚಿ ನಿಂತಂತಾಗಿತ್ತು. ಊರಿಗೇ ಬೆಂಕಿ ಬಿದ್ದರೂ ಸರಿಯೇ ಕರಂದ್ಲಾಜೆಗೆ ದುಡ್ಡುಬೇಕು. ರೊಕ್ಕ ಬರಬೇಕೆಂದರೆ ಅದು ಸ್ಪಿರಿಟ್ ಸ್ಮಗ್ಲರುಗಳಿಂದ ತಾನೇ ಬರಬೇಕು?

ಇಂಥ ಲಕ್ಕರ್ ಧೂರ್ತರ ಪೈಕಿ ಕಳ್ಳಭಟ್ಟಿಯ ಕಿಂಗ್‌ಪಿನ್ನುಗಳೆಂದರೆ ಬೈಲು ನರಸಾಪುರದ ಗಿಡ್ಡ ಸರ್ದಾರ್ ಆಸಿಫ್ ಮೇಡಿ ಮಲ್ಲಸಂದ್ರದ ಮುಷ್ತಾಕ್ ಮತ್ತು ಅಡಿಗಾರಕಲ್ಲಳ್ಳಿಯ ಬಾಬು. ಇವರೇ ಆ ಕಾಲದಿಂದಲೂ ಕಳ್ಳಭಟ್ಟಿ ಕಾಯಿಸಿ ಬೆಂಗಳೂರಿನ ವಿವಿಧ ಸ್ಲಮ್ಮುಗಳಿಗೆ ಸಾಗಿಸುತ್ತಾ ಬಂದಿದ್ದಾರೆ. ಟ್ಯಾನರಿ ರೋಡ್‌ನ ಮಾರಿಮುತ್ತು, ದೇವರಜೀವನಹಳ್ಳಿಯ ಸೌಂದರ್, ಇಕ್ಬಾಲ್, ಭಕ್ಷಿಗಾರ್ಡನ್ನಿನ ಸಾರಾಯಿ ರಾಣಿಮಾಲಾ, ಆಂಜನಪ್ಪ ಗಾರ್ಡನ್ನಿನ ಭಟ್ಟಿ ರಾಣಿ ತಮಿಳು ಕುಡಿ, ಗೋರಿಪಾಳ್ಯದ ಮೈಕೆಲ್ ಮತ್ತು ಮುನಾವರ್ ಮುಂತಾದವರೆಲ್ಲ ಇಂಥ ಭಟ್ಟಿ ದೊರೆಗಳ ಪಾಲಿಗೆ ಬೆಂಗಳೂರಿನ ಏಜೆಂಟರಿದ್ದರಂತೆ. ತರಕಾರಿ ಮೂಟೆಗಳಲ್ಲಿ, ಟ್ಯೂಬುಗಳಲ್ಲಿ ಪ್ರತಿನಿತ್ಯ ಬೆಂಗಳೂರಿನ ಫಣಿಸಂದ್ರ, ಬಿಟಿಎಂ ಲೇಔಟಿನ ಬೋವಿ ಕಾಲೋನಿ, ಬನಶಂಕರಿಯ ಯಾರಬ್‌ನಗರ, ಕಲಾಸಿಪಾಳ್ಯದ ಮಾರ್ಕೆಟ್, ಸುಧಾಮನಗರ, ಯಲ್ಲಾರ್ ಬಂಡೆ, ಕೆ.ಆರ್. ಪುರದ ಭಟ್ಟರಹಳ್ಳಿ, ಬನ್ನೇರಘಟ್ಟ ರಸ್ತೆಯ ಅರಕೆರೆ, ಹುಳಿಮಾವು; ಬೊಮ್ಮನಹಳ್ಳಿ ಕತ್ರಿಗುಪ್ಪೆ ಸ್ಲಂ, ಉತ್ತರಹಳ್ಳಿ ರಸ್ತೆಯ ಚನ್ನಸಂದ್ರ, ಗೋರಿಪಾಳ್ಯ, ನಾಯಂಡಹಳ್ಳಿ ಸ್ಲಂ, ದೊಡ್ಡಾಲದಮರದ ಗೋಪಾಲಪುರ, ರಾಮೋಹಳ್ಳಿ ಇತ್ಯಾದಿ ಕೊಂಪೆಗಳಿಗೆ ಕಳ್ಳಭಟ್ಟಿ ಹರಿದು ಬರುತ್ತದೆ.

ಇದು ಅಬಕಾರಿ ಇಲಾಖೆಗೆ ಚೆನ್ನಾಗಿ ಗೊತ್ತಿದೆ. ಖಡಕ್ ಅಧಿಕಾರಿ ಎನ್.ಎಸ್. ನಾಗರಾಜ್ ವಿಚಕ್ಷಣ ದಳದ ಮುಖ್ಯಸ್ಥರಾಗಿದ್ದಷ್ಟೂ ಕಾಲ ಇಂಥ ಕಳ್ಳಭಟ್ಟಿ ದಂಧೆಕೋರರನ್ನು ಮಟ್ಟ ಹಾಕಿದ್ದರು. ಯಾವತ್ತು ಕರಂದ್ಲಾಜೆಯ ಬಾಲಬಡುಕ ಈರಪ್ಪ ಆ ಜಾಗಕ್ಕೆ ಬಂದನೋ ಇಂಥ ಭಟ್ಟಿ ದೊರೆಗಳೆಲ್ಲ ಸೇರಿ ದೊಡ್ಡ ಮೊತ್ತದ ಕಲೆಕ್ಷನ್ ಮಾಡಿ ಕೊಟ್ಟಿದ್ದಾರೆ.

ಹೀಗೆ ಕಳ್ಳಭಟ್ಟಿ ದೊರೆಗಳಿಗೂ ಅಬಕಾರಿ ಅಧಿಕಾರಿಗಳಿಗೂ ನಂಟಿನ ಕೊಂಡಿಯಂತಿರುವವರೇ ಸಾದಿಕ್ ಮತ್ತು ಸಲೀಂ. ಹೇಳಿಕೇಳಿ ಇವರಿಬ್ಬರೂ ಅಬಕಾರಿ ವಿಚಕ್ಷಣ ದಳದ ಡ್ರೈವರ್‌ಗಳು. ಕಳ್ಳಭಟ್ಟಿಯ ತವರೂರಾದ ಬೈಲು ನರಸಾಪುರದಲ್ಲಿ ಈ ಸಾದಿಕ್ ಮತ್ತು ಸಲೀಂಗೆ ನೆಂಟರಿದ್ದಾರೆ. ಇವರಿಗೆ ವಿಚಕ್ಷಣಾದಳದ ಹೆಡ್‌ಗಾರ್ಡು ವೇಲ್‌ಮುದಿ ನಾಗರಾಜ್ ಅಲಿಯಾಸ್ ಭಟ್ಟಿ ನಾಗರಾಜ್, ಗಾರ್ಡುಗಳಾದ ಫಿಲೋಮಿನಾ ರಾಜ್, ರಾಮಕೃಷ್ಣ ವಾಸು ಮುಂತಾದವರು ಕುಮ್ಮಕ್ಕು ಕೊಡುತ್ತಲೇ ಬಂದಿದ್ದಾರೆ.

ಇಂಥ ದಿನ ಇಂತಿಂಥವರೇ ಕಳ್ಳಭಟ್ಟಿ ರೇಡಿಗೆ ಹೊರಟಿದ್ದಾರೆಂಬ ಮಾಹಿತಿಯನ್ನು ಸಾದಿಕ್ ಮತ್ತು ಸಲೀಂ ಮೊದಲೇ ನರಸಾಪುರದ ಭಟ್ಟಿ ದೊರೆಗಳಿಗೆ ಮುಟ್ಟಿಸುತ್ತಾರೆ. ಒಂದೆಡೆ ಕಳ್ಳಭಟ್ಟಿ ನಿರಂತರ. ಮತ್ತೊಂದೆಡೆ ಭಟ್ಟಿ ದೊರೆಗಳಿಂದಲೇ ಮಾಮೂಲಿ ಪಡೆಯುವ ಅಬಕಾರಿ ಖದೀಮರ ದುರಾಚಾರ. ಇಂಥ ವ್ಯವಸ್ಥೆಯನ್ನು ಇನ್ನಷ್ಟು ಕೊಬ್ಬಿಸಿ ದುಡ್ಡು ದೋಚುವ ಯಡ್ಡಿ-ಕರಂದ್ಲಾಜೆ ಜೋಡಿಯ ಹುನ್ನಾರ.

ಇವತ್ತು ಕಳ್ಳಭಟ್ಟಿ ದುರಂತಕ್ಕೆ ಇಂಥ ವಸೂಲಿ ವ್ಯವಸ್ಥೆಯೇ ಮೂಲ ಕಾರಣ. ಕನಿಷ್ಠ ರಾಜ್ಯಪಾಲರ ಆಳ್ವಿಕೆ ಬಂದ ಮೇಲಾದರೂ ಯಡ್ಡಿ ಹೆಣೆದಿದ್ದ ಇಂಥದೊಂದು ಅಬಕಾರಿ ಜಾಲವನ್ನು ಬದಲಾಯಿಸಬೇಕಿತ್ತು. ದುರಂತವೆಂದರೆ ಕರಂದ್ಲಾಜೆಯ ಇದೇ ಅಬಕಾರಿ ಗ್ಯಾಂಗ್ ರಾಜ್ಯಪಾಲರ ಕಚೇರಿಗೂ ರೊಕ್ಕದ ರುಚಿ ಹತ್ತಿಸಿತ್ತು. ಚುನಾವಣೆಯ ಹೊತ್ತಿಗೆ ದೊಡ್ಡ ಪ್ರಮಾಣದ ಸ್ಪಿರಿಟ್ ಬಾರದೇ ಕೈಗಾರಿಕೆಗಳಿಗೆ ಬಳಸುವ ಮಿಥೇನಾಲ್ ಬಳಸಿ ಕಳ್ಳಭಟ್ಟಿ ಕಾಯಿಸಿದ ಇದೇ ದುರುಳರು ನೂರಾರು ಜನರ ಪ್ರಾಣ ಕಳೆದರೆ ಇಂಥದೊಂದು ವ್ಯವಸ್ಥೆಯನ್ನು ಪೋಷಿಸಿದ ಯಡ್ಡಿ ಮೊಸಳೆ ಕಣ್ಣೀರಿಡುತ್ತಿದ್ದಾರೆ.

ಇನ್ನು ಯಡ್ಡಿಯೇ ಮುಖ್ಯಮಂತ್ರಿಯಾದರೆ ಇದೇ ಅಧಿಕಾರಿಗಳೇ ತಾನೇ ಇನ್ನಷ್ಟು ಕೊಬ್ಬುತ್ತಾರೆ.

ಯಡ್ಡಿಯ ಕಣ್ಣೀರಿಗೆ ಏನಾದರೂ ಅರ್ಥವುಂಟೆ?

■ ರಾ. ಸೋಮನಾಥ್

ತೊಲಗಿದ ಶನಿಗಳು


ಆರ್.ವಿ.ದೇಶಪಾಂಡೆ-ಹಳಿಯಾಲ



ಖದೀಮತನ ಹಾಗೂ ಭ್ರಷ್ಟಾಚಾರದ ವಿರುದ್ಧ ಮತದಾರ ಕೊಟ್ಟಿರುವ ತೀರ್ಪು ಇದು. ದೇಶಪಾಂಡೆ ತರಹದವರಿಗೆ ಹಣ-ಅಧಿಕಾರ ಬಿಟ್ಟರೆ ಒಂದು ಪಕ್ಷ, ಸಿದ್ಧಾಂತಕ್ಕೆ ಬದ್ಧವಾಗಿರುವ ಗುಣ ಇರಲಿಲ್ಲ. ಬೆಂಗಳೂರಿನ ಲಕ್ಷಾಂತರ ರೈತರ ಬದುಕನ್ನು ಹರಾಜು ಹಾಕಿ, ರಿಯಲ್ ಎಸ್ಟೇಟ್ ಕುಳಗಳೊಂದಿಗೆ ಡೀಲ್ ಕುದುರಿಸಿಕೊಂಡು ನೂರಾರು ಕೋಟಿ ರೂಪಾಯಿಗಳನ್ನು ಈ ದೇಶಪಾಂಡೆ ಕಮಾಯಿಸಿಕೊಂಡಿದ್ದ.

ಈತನ ಮುಖ ವಿಧಾನಸೌಧದಲ್ಲಿ ಕಾಣಿಸದಂತಾಗಿರುವುದು ಕರ್ನಾಟಕಕ್ಕೆ ಒಳ್ಳೆಯದು ಮಾಡಲಿದೆ.


ಸುನೀಲ್ ಕುಮಾರ್-ಕಾರ್ಕಳ



ಈ ಹಿಂದುತ್ವ ಕೋಮು ಕ್ರಿಮಿಯ ಸೋಲು ನೆಮ್ಮದಿ ತರುವ ವಿಚಾರ. ದ್ವೇಷ-ಹಿಂಸೆಯ ದಿನಚರಿಯನ್ನು ಹೊಂದಿದ್ದ ಸುನೀಲ್‌ಕುಮಾರ್ ಕೇವಲ ಕರ್ನಾಟಕದ ಸಾಮಾಜಿಕ ನೆಮ್ಮದಿ ಕದಡುವ ಕೆಡುಕನಾಗಿದ್ದ.


ಶಾಸಕನಾದವನು ಜನರ ಕಷ್ಟಗಳನ್ನು ಬಗೆಹರಿಸಬೇಕೆ ವಿನಃ ಹೊಸ ಕಷ್ಟಗಳನ್ನು ಸೃಷ್ಟಿಸಬಾರದೆಂಬ ಪಾಠವನ್ನು ಸುನೀಲ್‌ಕುಮಾರ್ ಈ ಸೋಲಿನಿಂದಾದರೂ ಕಲಿಯಲಿ.

ಸುಭಾಷ್ ಭರಣಿ-ಟಿ. ನರಸೀಪುರ



ಭರಣಿಯ ಅವಕಾಶವಾದಿತನಕ್ಕೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ. ಭರಣಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದೇ ಇದಕ್ಕೆ ಸಾಕ್ಷಿ. ಕೋತಿ ತಾನು ಕೆಟ್ಟಿದ್ದೇ ಅಲ್ಲದೇ ವನವೆಲ್ಲಾ ಕೆಡಿಸಿತು ಎಂಬಂತೆ ಈ ಭರಣಿ ತಾನು ಕೋಮುವಾದಿ, ಪುರೋಹಿತಶಾಹಿಗಳೊಂದಿಗೆ ಸೇರಿದ್ದೇ ಅಲ್ಲದೆ ರಾಜ್ಯಾದ್ಯಂತ ಬಿಜೆಪಿ ಪರ ಓಡಾಡಿದ್ದರು.

ನಾಗರಾಜಶೆಟ್ಟಿ-ಬಂಟ್ವಾಳ




ಕರ್ನಾಟಕದ ನರೇಂದ್ರಮೋದಿ ಎಂದೇ ಕುಖ್ಯಾತನಾಗಿದ್ದ ನಾಗರಾಜಶೆಟ್ಟಿಯನ್ನು ಕಾಂಗ್ರೆಸ್‌ನ ರಮಾನಂದ ರೈ ಮಣಿಸಿದ್ದಾರೆ. ರಕ್ತಪಿಪಾಸು ಗುಣದ ಶೆಟ್ಟಿ ಆಕಸ್ಮಾತ್ ಗೆದ್ದೇ ಬಿಟ್ಟಿದ್ದರೆ ಕರಾವಳಿಯಲ್ಲಿ ಅಲ್ಪಸಂಖ್ಯಾತರ ರಕ್ತದೋಕುಳಿ ಶುರುವಾಗೇಬಿಡುತ್ತಿತ್ತು.

ಪ್ರಮೀಳ ನೇಸರ್ಗಿ-ವಿಜಯನಗರ




ಮಂತ್ರಿಸಿದ ನಿಂಬೇಹಣ್ಣನ್ನು ಎಷ್ಟೇ ಉಜ್ಜಿ ಉಜ್ಜಿ ನಾಮಪತ್ರ ಹಾಕಿದ್ದರೂ ವಿಜಯನಗರದ ಮತದಾರರು ಬಿಜೆಪಿಯ ಬಾಯಬಡುಕಿ ನೇಸರ್ಗಿಯನ್ನು ಸೋಲಿಸಿದ್ದಾರೆ. ಎಂ.ಕೃಷ್ಣಪ್ಪರನ್ನು ಗೆಲ್ಲಿಸುವ ಮೂಲಕ ಕಿತಾಪತಿ ಬುದ್ಧಿಯ ಜನ ನಮಗೆ ಬೇಡ ಎಂದು ತಿರಸ್ಕರಿಸಿದ್ದಾರೆ.


ಚೆನ್ನಿಗಪ್ಪ-ದೊಡ್ಡಬಳ್ಳಾಪುರ



ಪ್ರಜಾಪ್ರಭುತ್ವದ ಕಿಂಚಿತ್ತೂ ಮೌಲ್ಯಗಳನ್ನು ಅರ್ಥಮಾಡಿಕೊಂಡಿರದಿದ್ದ ಈ ಮಾಜಿ ಪ್ಯಾದೆ ಚನ್ನಿಗಪ್ಪ ತೊಲಗಿದ್ದು ಪ್ರಜಾಪ್ರಭುತ್ವಕ್ಕೆ ದೊರೆತ ಜಯ. ಸಾರ್ವಜನಿಕ ಜೀವನದಲ್ಲಿ ಒಬ್ಬ ಸಚಿವ ಹೇಗಿರಬೇಕು ಎಂಬುದೇ ಗೊತ್ತಿರದಿದ್ದ ಮಹಾ ಅವಿವೇಕಿಯಾಗಿದ್ದ ಚೆನ್ನಿಗಪ್ಪ ಸೋತರೂ ಅಪಾಯ ತಪ್ಪಿದ್ದಲ್ಲ. ಯಾಕೆಂದರೆ ಇವನ ಮಗ ಗೌರಿಶಂಕರ ಮಧುಗಿರಿಯಲ್ಲಿ ಗೆದ್ದಿರುವುದೂ ಅಷ್ಟೇ ಅಪಾಯಕಾರಿ. ಏಕೆಂದರೆ ಈ ಗೌರಿಶಂಕರ ಅಪ್ಪನಿಗೆ ತಕ್ಕ ಮಗ.

ಬಂಗಾರಪ್ಪ ಕುಟುಂಬಕ್ಕೆ ಪಾಠ







ಕರ್ನಾಟಕದಲ್ಲಿ ಬಂಗಾರಪ್ಪನವರ ರಾಜಕೀಯ ಜೀವನ ಬಹುತೇಕ ಕೊನೆಗೊಂಡಂತೆಯೇ ಸರಿ. ಶಿಕಾರಿಪುರದಲ್ಲಿ ಸ್ವತಃ ತಾವೇ ಸೋತಿದ್ದಲ್ಲದೇ ಸೊರಬ ಕ್ಷೇತ್ರವನ್ನು ಬಿಜೆಪಿಗೆ ಧಾರೆ ಎರೆದುಕೊಟ್ಟಿದ್ದಾರೆ. ಅಲ್ಲಿ ಎಸ್‌ಪಿಯ ಮಧುಬಂಗಾರಪ್ಪ ಹಾಗೂ ಕಾಂಗ್ರೆಸ್‌ನ ಕುಮಾರ್ ಬಂಗಾರಪ್ಪ ಇಬ್ಬರನ್ನೂ ಮನೆಗೆ ಕಳಿಸಿರುವ ಮತದಾರ ಅವಿವೇಕಿ ರಾಜಕಾರಣ ನಡೆಸಿದ 'ಬಂ'ಗೆ ಕಪಾಳಮೋಕ್ಷ ಮಾಡಿದ್ದಾರೆ.

ಬಂಗಾರಪ್ಪ ಓಟಿನ ರಾಜಕೀಯದಲ್ಲಿ ಒಬ್ಬ ಹೋರಾಟಗಾರನೇ ಆಗಿದ್ದರೂ, ವೈಯಕ್ತಿಕ ಅಹಂನ್ನು ಸಾರ್ವಜನಿಕ ಜೀವನಕ್ಕೂ ತಂದು ರಾಡಿ ಎಬ್ಬಿಸಲು ಹಿಂಜರಿಯುತ್ತಿರಲಿಲ್ಲ. ತನ್ನ ಮಗ ಕುಮಾರ್ ಬಂಗಾರಪ್ಪನ ವಿರುದ್ಧ ಬಂ ಹೇಗೆ ಸೇಡು ಸಾಧಿಸಿದರೆಂಬುದನ್ನು ನಾವೆಲ್ಲಾ ನೋಡಿದ್ದೇವೆ. ಕ್ರಾಂತಿರಂಗ, ಕಾಂಗ್ರೆಸ್, ಬಿಜೆಪಿಗಳನ್ನೆಲ್ಲಾ ಹಾದು ಬಂದ ಬಂಗಾರಪ್ಪ ಕೊನೆಗೆ ಸಮಾಜವಾದಿ ಪಾರ್ಟಿ ಸೇರಿದರೂ ಸಹ ಕರ್ನಾಟಕದಲ್ಲಿ ಆ ಪಕ್ಷಕ್ಕೆ ನೆಲೆ ಕಲ್ಪಿಸಿಕೊಡಲು ಆಗಲೇ ಇಲ್ಲ. ಇಲ್ಲಿ ಒಂದು ಪಕ್ಷ ಕಟ್ಟಲು ಬೇಕಾದ ತತ್ವ-ಸಿದ್ಧಾಂತ, ಜನಸಂಪರ್ಕ ಹಾಗೂ ಹಣ ಬಂಗಾರಪ್ಪನವರ ಬಳಿ ಇರಲೂ ಇಲ್ಲ. ಜೊತೆಗೆ ಕೈ ಕೊಡುತ್ತಿದ್ದ ಆರೋಗ್ಯವೂ 'ಬಂ'ರನ್ನು ಸಾಕಷ್ಟು ಬಳಲಿಸಿದ್ದವು.

ಶಿಕಾರಿಪುರದಲ್ಲಿ ಯಡಿಯೂರಪ್ಪ ವಿರುದ್ಧ 'ಬಂ' ಅಖಾಡಕ್ಕಿಳಿದಿದ್ದ ಹಿನ್ನೆಲೆಯಲ್ಲಿ ಈ ಎಲ್ಲಾ ಅಂಶಗಳೂ ಕೆಲಸ ಮಾಡಿವೆ.

ಪೂರ್ತಿ ಖಾಲಿ ಕೈಯಾಗಿ ಕಾಲಕಳೆಯುತ್ತಿದ್ದ ಬಂಗಾರಪ್ಪನವರಿಗೆ ಕಾಂಗ್ರೆಸ್‌ನವರು ಭಾರೀ ಮೊತ್ತದ ಹಣ ನೀಡಿ ಯಡ್ಡಿ ವಿರುದ್ಧ ಛೂ ಬಿಟ್ಟಿದ್ದಾರೆಂಬ ಗುಮಾನಿಯಿದೆ. ಸರಿಯಾಗಿ ಹೇಳಬೇಕೆಂದರೆ ಬಂಗಾರಪ್ಪ ಕೂಡಾ ಈ ಬಾರಿಯ ಚುನಾವಣೆಯನ್ನು ಅಷ್ಟೇನೂ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ.

ಈಗ 'ಬಂ' ಸೋಲಿಗಿಂತ ಕೆಟ್ಟ ಹಠದಿಂದಾಗಿ ಅವರ ಇಡೀ ಕುಟುಂಬವೇ ಕರ್ನಾಟಕ ರಾಜಕೀಯದಲ್ಲಿ ಮೂಲೆಗುಂಪಾಗುವ ದುಃಸ್ಥಿತಿ ಎದುರಾಗಿದೆ. ಇದಕೆ ಸಂಪೂರ್ಣ ಹೊಣೆ ಬಂಗಾರಪ್ಪನವರೇ.

ಅನಂತ್‌ಕುಮಾರ್ ಶರಣಾಗತಿ



ರಾಜ್ಯ ಬಿಜೆಪಿಯಲ್ಲೀಗ ಅನಂತ್‌ಕುಮಾರ್ ಬಣ ಸಂಪೂರ್ಣವಾಗಿ ಯಡ್ಡಿಗೆ ಶರಣಾಗಬೇಕಾಗಿ ಬಂದಿದೆ.

ಭಾನುವಾರ ಮಧ್ಯಾಹ್ನದ ವೇಳೆಗೆ ಬಿಜೆಪಿ 110 ಸೀಟ್‌ಗಳ ಹತ್ತಿರ ಬರುತ್ತಿದ್ದಂತೆ ಪಾರ್ಟಿ ಆಫೀಸ್‌ನಲ್ಲಿ ಒಂದು ಪತ್ರಿಕಾಗೋಷ್ಠಿ ನಡೆಯಿತು.

ಅಲ್ಲಿ ಅನಂತ್ ಮಾತನಾಡಿದ್ದು ಬಹಳ ತಮಾಷೆಯಾಗಿತ್ತು.

"ರಾಜ್ಯದ ಮುಂದಿನ ಮುಖ್ಯಮಂತ್ರಿಯಾಗಿ ಯಡಿಯೂರಪ್ಪನವರ ಹೆಸರನ್ನು ನಾವು ಪ್ರೊಪೋಸ್ ಮಾಡಲಿದ್ದೇವೆ" ಅಂದರು ಅನಂತು. ಮಜಾ ಅಂದರೆ ಬಿಜೆಪಿಗೆ ಮೆಜಾರಿಟಿ ಬಂದರೆ ಯಡ್ಡಿಯೇ ಸಿಎಂ ಎಂಬುದು ಯಾವತ್ತೋ ತೀರ್ಮಾನವಾಗಿರುವ ವಿಚಾರ. ಅದನ್ನು ಅನಂತೂ ದೈವಜ್ಞ ಸೋಮಯಾಜಿಯಂಥವರ ಹತ್ತಿರ ಕಣಿ ಕೇಳಿ ಯಾರೂ ಅನುಮೋದಿಸುವ ಅಗತ್ಯವಿರಲಿಲ್ಲ. ಆದರೂ ಅನಂತು ಹೀಗೆ ಹೇಳಿರುವುದೇಕೆಂದರೆ 'ಹೇಗೂ ಯಡ್ಡಿ ಸಿಎಂ ಆಗುವುದನ್ನು ತಪ್ಪಿಸಲು ಅಸಾಧ್ಯ, ಹೀಗಿರುವಾಗ ಹಳೇ ಜಗಳ ಮರೆತು ಯಡ್ಡಿ ಜೊತೆ ಈಗಿನಿಂದಲೇ ಚೆನ್ನಾಗಿದ್ದು ಬಿಟ್ಟರೆ ನಾಳೆ ವ್ಯವಹಾರ ಕುದುರಿಸಿಕೊಳ್ಳಲು ಸಲೀಸಾಗುತ್ತದೆ' ಎಂಬುದೇ ಅನಂತೂ ಯೋಚನೆ. ತನ್ನ ಹಿಂಬಾಲಕರಿಗೆ ಮಂತ್ರಿಗಿರಿ ಕೊಡಿಸುವುದು ಹಾಗೂ ರಾಜ್ಯ ಬಿಜೆಪಿಯೊಳಗೆ ತಾನು ಮೂಲೆಗುಂಪಾಗದಂತೆ ನೋಡಿಕೊಳ್ಳುವುದಲ್ಲಾ ಅವರ ಲೆಕ್ಕಾಚಾರದಲ್ಲಿದೆ.

ಸೋತ ಪಾರ್ಟಿಗೆ ಅಧ್ಯಕ್ಷ ಆಗಿರದು ಶರಿನಾ

ಥೂತ್ತೇರಿ

ಯಾಹೂ

"ಈ ಚುನಾವಣೆಯಲ್ಲಿ ಕನಿಷ್ಠವೆಂದರೂ 50 ಸೀಟು ಗೆಲ್ಲುತ್ತೇವೆ. ಮತ್ತೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗುತ್ತಾರೆ. ಸರ್ಕಾರದ ಆಡಳಿತ ದೇವೇಗೌಡರ ಮನೆಯಿಂದಲೇ ನಡೆಯುತ್ತದೆ" ಎಂದು ಜೆಡಿಎಸ್‌ನ ಗಡವರು ಪಿಸುದನಿಯಲ್ಲೇ ಗಟ್ಟಿಯಾಗಿ ಮಾತನಾಡಿಕೊಂಡಿದ್ದನ್ನು ಕೇಳಿಸಿಕೊಂಡು ಪಾರ್ಟಿ ಅಧ್ಯಕ್ಷಗಿರಿಯ ಜೊತೆಗೆ, ಒಂದೆರಡು ಖಾತೆಯನ್ನು ಜೋಳಿಗೆಗೆ ಹಾಕಿಕೊಂಡು ತಿರುಗುವ ಕನಸು ಕಂಡಿದ್ದ ಜೆಡಿಎಸ್‌ನ ರಾಜ್ಯಾಧ್ಯಕ್ಷರಾಗಿದ್ದ ಮಿರಾಜುದ್ದೀನ್ ಪಟೇಲರನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಆ ಕೂಡಲೇ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.

ರಿಂಗ್ ಟೋನ್: "ಇಸ್ ಬರೀ ದುನಿಯಾಮೆ ಕೋಯಿ ಹಮಾರಾನಾ ಹುವಾ, ಇಸ್ ಬರೀ ದುನಿಮಾಮೆ...."

"ಹಲೋ ಸಾರ್, ನಾನು ಯಾಹು."

"ಏನ್ ಯಾಹು ಅವ್ರೆ? ಏನ್ ಸಮಾಚಾರ?"

"ಏನ್ ಸಾರ್ ಹಿಂಗಾಯ್ತು?"

"ಅದೆ ನನ್ಗೂ ಆಶ್ಚರ್ಯ!"

"ನೀವೆ ಸೋತರಲ್ಲ, ಯಾಕ್ ಸಾರ್?"

"ಯಾಕೆ ಅಂದ್ರೆ, ನಾನು ಜೆಡಿಎಸ್‌ಗೆ ಅಧ್ಯಕ್ಷ. ಅಧ್ಯಕ್ಷಂದು ಕೆಲ್ಸ ಏನಪ್ಪಾ ಅಂದ್ರೆ, ಬೇರೆ ಕ್ಯಾಂಡೇಟದು . ಕಾನ್ಸುಟಿಯನ್ಸಿಗೆ ಹೋಗಿ, ಓಟ್‌ಗೆ ಕೇಳಬೇಕು. ಇಲ್ಲ ಅಂದ್ರೆ ಸೋಲ್ತರೆ. ಅದ್ಕೆ ನಾನು ಬೇರೆಯವರ್‍ಗೆ ಗೆಲ್ಸಕ್ಕೆ ಹೋಗಿ ನಾನು ಸೋತ್‌ಬಿಟ್ಟೆ."

"ಆದ್ರು ನೀವು ರಾಜೀನಾಮೆ ಕೊಡಬಾರದಿತ್ತು ಸಾರ್."


"ಸೋತು ಪಾರ್ಟಿಗೆ ಅಧ್ಯಕ್ಷ ಆಗಿರದು ಸರಿನಾ? ಬೇರೆಯವರು ಬಂದಿ 'ಏನ್ ಶಾರ್ ಹಿಂಗೆ ಸೋತ್‌ಬಿಟ್ರಿ?' ಅಂತ ಕೇಳಿದ್ರೆ, ನಾನು ಏನ್ ಹೇಳ್ಬೇಕು? ಅದ್ಕೆ ರಾಜೀನಾಮೆ ಕೊಟ್ಟೆ."

"ಐವತ್ತು ಸೀಟು ಗೆಲ್ತಿವಿ ಅಂದಿದ್ರಿ?"

"ಐವತ್ತು ಸೀಟು ಅಲ್ಲ, ಪೂರಾ ಮೆಜಾರಿಟಿನೆ ಬರ್ತಿದ್ವೊ. ಈ ಹಾಳು ಬಿಜೆಪಿ, ಕಾಂಗ್ರೆಸ್ ನಮ್ಗೆ ತೊಂದ್ರೆ ಮಾಡಿದ್ರು. ಅವುರು ಇಲ್ಲ ಅಂದಿದ್ರೆ ಪೂರಾ ನಾವೆ ಬರ್ತಿದ್ವಿ."

"ಅವುರಿಲ್ಲ ಅಂದ್ರೆ ಯಂಗೆ ಸಾರ್? ಅವುರು ನಿಮ್ಮಂತ ಪಾರ್ಟಿ ಅಲ್ಲವೆ?"

"ಅದು ಶರಿ. ಆದ್ರೆ ಅವುರು ನಮ್ದು ಓಟು ತಗೊಂಡ್ರು. ಅವುರು ನಮ್ದು ಓಟು ಪೂರಾ ತಗೊಂಡ್ರೆ ನಾವು ಹೇಗೆ ಗೆಲ್ತಿವಿ? ಅದ್ಕೆ ನಾವು ಸೋಲಬೇಕಾಯ್ತು."



"ಅಂತು ಬಿಜೆಪಿಗಳಿಗೆ ನೀವು ಅಧಿಕಾರ ಕೊಡದೆಯಿದ್ರು ಜನನೆ ಕೊಟ್ರು ಸಾರ್."

"ನಾನು ಹೇಳಿದ್ದು ಅದೇನೆ ಅಲ್ವಾ. ನಾವು ನಿಮ್ಗೆ ಅಧಿಕಾರ ಕೊಡಲ್ಲ, ಬೇಕಾದ್ರೆ ನೀವು ಜನಗಳ ಹತ್ರ ಹೋಗಿ ಕೇಳಿ, ಅವುರು ಕೊಟ್ರೆ ತಗೊಳಿ ಅಂದಿದ್ವಿ. ಅಂಗೆ ತಗೊಂಡ್ರು. ಇನ್ನು ಒಂದು ಚುನಾವಣೆ ಬರ್‍ತದೆ, ಆಗ ನಾವು ಬರ್ತಿವಿ."

"ಅಂಗಾದ್ರೆ ಕಾಂಗ್ರೆಸ್ ಕತೆ ಏನು ಸಾರ್?"

"ಅವುರು ಎಲ್ಲಾ ಗುಜರಿಗೆ ಹೋಗ್‌ಬೇಕು. ಅಲ್ಲಿ ರಿಪೇರಿನೆ ಆಗಲ್ಲ ಅಂತ ಗಾಡಿಗಳು ಇವೆ. ಸುಮಾರು ಗಾಡಿಗಳಿಗೆ ಬಾಡಿ ತುಂಬಾ ಡ್ಯಾಮೇಜ್ ಆಗಿದೆ. ಕೆಲವು ಗಾಡಿಗಳಿಗೆ ಟೈರ್ ಇಲ್ಲ, ಇನ್ನು ಕೆಲವು ಪಾರ್ಟಿ ಗಾಡಿಗಳಿಗೆ ಇಂಜನ್ ಸರಿಯಿಲ್ಲ. ಅದ್ರಿಂದ ಏನಪ್ಪಾ ಅಂದ್ರೆ ಆಯೆಲ್ಲಾ ಗಾಡಿಗಳು ಶೆಡ್‌ಗೆ ಹೋಗದು ಒಳ್ಳೆದು."

"ನೀವೂ ಅಂತಾ ಗಾಡಿನೆ ಅಂತಲ್ಲ ಸಾರ್?"

"ಯಾರ್ರಿ ಹೇಳಿದ್ದು? ನಂದು ಎಂಜಿನ್ನ ಈಗ್ಲು ಚೆಂದಾಗಿ ವರ್ಕ್ ಮಾಡ್ತ ಇದೆ. ಈಗ ಆಕ್ಸಿಡೆಂಟ್ ಆಗಿರಬವುದು. ಇನ್ನು ಒಂದು ಎಲೆಕ್ಷನ್‌ಗೆ ರಿಪೇರಿ ಮಾಡ್ಕಂಡು ರೆಡಿಯಾಗ್ತಿನಿ."

"ಥೂತ್ತೇರಿ!!" ■



ಮರಿಯಾ ಮೈ ಡಾರ್ಲಿಂಗ್! ಅಂದ ಒಬ್ಬ ಕೊಲೆಯಾದ ಇನ್ನೊಬ್ಬ ಜೈಲುಪಾಲಾದ

ಇಲ್ಲಿರುವ ಫೋಟೋ ಅನ್ನು ನೋಡಿ.

ಇವಳೇ ಮೈಸೂರಿನ ಮಾಯಾಂಗನೆ ಮರಿಯಾ ಮೋನಿಕಾ.

ಅರೆನಗ್ನಳಾಗಿ ಪ್ರಚೋದನಾಕಾರಿ ಭಾವ ಭಂಗಗಳೊಂದಿಗೆ ರವಷ್ಟೂ ಸಂಕೋಚವಿರದೆ ಎಲ್ಲಾ ತೋರಿಸಲು ರೆಡಿಯಾಗಿದ್ದವಳು ಈ ಮರಿಯಾ. ಆದರಿವತ್ತು ಬರೀ ಮುಖ ತೋರಿಸಲೂ ಹಿಂಜರಿಯುತ್ತಾ ದುಪ್ಪಟ್ಟಾದಲ್ಲೇ ಮುಖ ಮರೆಸಿಕೊಂಡು ಕೋರ್ಟು, ಪೊಲೀಸ್ ಸ್ಟೇಷನ್‌ಗೆ ಹೋಗಿಬರುತ್ತಿದ್ದಾಳೆ.

ಕನ್ನಡ ಸಿನಿಮಾದಲ್ಲಿ ಹೀಗೆ ಬಂದು ಹಾಗೆ ಹೋಗಿದ್ದ ನಟಿ ಮೈಸೂರಿನ ಮರಿಯಾ ಮೋನಿಕಾ ಸುಸೈರಾಜ್ ಎಂಬ ಇಪ್ಪತ್ತೇಳು ವಯಸ್ಸಿನ ತರುಣಿ ಈಗ ತನ್ನ ಲವರ್ ಗ್ರೋವರ್‌ನ ಹತ್ಯೆಗೆ ಕಾರಣಳಾಗಿ ಮುಂಬೈ ಪೊಲೀಸರ ಕಸ್ಟಡಿಯಲ್ಲಿದ್ದಾಳೆ. ಅಂದಹಾಗೆ ಈ ಗ್ರೋವರ್‌ನನ್ನು ಕೊಂದವನು ಮ್ಯಾಥ್ಯು. ಇವನು ಮೋನಿಕಾಳ ಇನ್ನೊಬ್ಬ ಪ್ರಿಯತಮ!

ಕನ್ನಡ ಸಿನಿಮಾದಲ್ಲಿ ಹೀಗೆ ಬಂದು ಹಾಗೆ ಹೋಗಿದ್ದ ನಟಿ ಮೈಸೂರಿನ ಮರಿಯಾ ಮೋನಿಕಾ ಸುಸೈರಾಜ್ ಎಂಬ ಇಪ್ಪತ್ತೇಳು ವಯಸ್ಸಿನ ತರುಣಿ ಈಗ ತನ್ನ ಲವರ್ ಗ್ರೋವರ್‌ನ ಹತ್ಯೆಗೆ ಕಾರಣಳಾಗಿ ಮುಂಬೈ ಪೊಲೀಸರ ಕಸ್ಟಡಿಯಲ್ಲಿದ್ದಾಳೆ. ಮೋನಿಕಾಳ ಬದುಕು, ಮಹತ್ವಾಕಾಂಕ್ಷೆಗಳು, ಅವಳ ಸುಳ್ಳು ಸುಳ್ಳು ಪ್ರೀತಿ, ಹುಡುಗರನ್ನು ಪ್ರೀತಿಸಿ ಮಾಡಿ ಬಿಸಾಡಿದ್ದ ಪ್ರಕರಣಗಳು ಹಾಗೂ ಈ ಲವ್ ಎಂಬ ಮಾನಸಿಕ ಸ್ಥಿತಿ ಕೊಲೆ ಮಾಡುವ ಹಂತಕ್ಕೆ ದಾಟಿಸುವ ಸನ್ನಿವೇಶಗಳು ಬರೀ ಕ್ರೈಂಸ್ಟೋರಿ ಮಾತ್ರವಲ್ಲ...

ದೂರದ ಮುಂಬೈನಲ್ಲಿ ಮೇ 7 ರಂದು ಬೆಳಗಿನ ಜಾವ ಈ ಹತ್ಯೆ ಎಷ್ಟು ಭಯಾನಕವಾಗಿ ನಡೆದಿದೆಯೆಂದರೆ ಕಳೆದೊಂದು ವಾರದಿಂದ ಇಡೀ ಇಂಡಿಯಾದ ಟಿವಿ ಚಾನೆಲ್ಲುಗಳು-ಪತ್ರಿಕೆಗಳು ಬಿಟ್ಟೂಬಿಡದೆ ಈ ಕ್ರೈಂ ಸ್ಟೋರಿಯ ಬೆನ್ನು ಹತ್ತಿವೆ. ಇದೊಂದು ಸೆನ್ಸೇಷನಲ್ ಮರ್ಡರ್ ಕೇಸ್ ಎಂಬುದಕ್ಕಾಗಿ ಮಾತ್ರ ಇದು ಭಾರಿ ಸುದ್ದಿ ಮಾಡಿಲ್ಲ. ಬದಲಾಗಿ ಮೋನಿಕಾಳ ಬದುಕು, ಮಹತ್ವಾಕಾಂಕ್ಷೆಗಳು, ಅವಳ ಸುಳ್ಳು ಸುಳ್ಳು ಪ್ರೀತಿ, ಹುಡುಗರನ್ನು ಪ್ರೀತಿಸಿ ಮಾಡಿ ಬಿಸಾಡಿದ್ದ ಪ್ರಕರಣಗಳು ಹಾಗೂ ಈ ಲವ್ ಎಂಬ ಮಾನಸಿಕ ಸ್ಥಿತಿ ಕೊಲೆ ಮಾಡುವ ಹಂತಕ್ಕೆ ದಾಟಿಸುವ ಸನ್ನಿವೇಶಗಳು ಬರೀ ಕ್ರೈಂಸ್ಟೋರಿ ಮಾತ್ರವಲ್ಲ...

ಉಳಿದವರಿಗೂ ಬದುಕಿನ ಪಾಠಗಳಾಗಬಲ್ಲವು, ಅದರಲ್ಲೂ ಸಿನಿಮಾ ಕ್ರೇಜ್ ಹತ್ತಿಸಿಕೊಂಡವರಿಗೆ.

ಗೆದ್ದರೆ ಆಕಾಶ-ಸೋತರೆ ಪಾತಾಳ

ಈ ಮರಿಯಾಳಿಗೆ ವಿದ್ಯೆ, ಬುದ್ಧಿ ನೆಟ್ಟಗೆ ಹತ್ತದೇ ಹೋದರೂ ತಾನು ಬ್ಯೂಟಿಫುಲ್ಲಾಗಿದ್ದೀನೆಂಬ ಸತ್ಯ ಗೊತ್ತಿತ್ತು, ಅದೇ ಪಿತ್ತ ನೆತ್ತಿಗೂ ಏರಿತ್ತು. ಮೈಸೂರಿನ ಶ್ರೀಮಂತ ಕಂಟ್ರಾಕ್ಟರ್ ಸೂಸೈರಾಜ್‌ನ ನಾಲ್ವರು ಮಕ್ಕಳ ಪೈಕಿ ಇಬ್ಬರು ಗಂಡುಮಕ್ಕಳಾದರೆ ಇನ್ನಿಬ್ಬರು ಹೆಣ್ಣುಮಕ್ಕಳ ಪೈಕಿ ಮರಿಯಾ ಮೋನಿಕಾ ಮೊದಲನೆಯವಳು, ವೆರೋನಿಕಾ ಇನ್ನೊಬ್ಬಳು.

ಹಿಂದಿ ಸಿನಿಮಾ-ಟಿವಿ ಸೀರಿಯಲ್‌ಗಳಲ್ಲಿ ಅವಕಾಶ ಹುಡುಕಿಕೊಂಡು ಕಳೆದ ಮಾರ್ಚ್‌ನಲ್ಲಿ ಮುಂಬೈಗೆ ಹೋದ ಮೋನಿಕಾ ಅಲ್ಲಿದ್ದ ಎರಡೇ ತಿಂಗಳಲ್ಲಿ ನೀರಜ್ ಗ್ರೋವರ್ ಎಂಬ ಇಪ್ಪತ್ತೈದರ ಯುವಕನೊಂದಿಗೆ ಅಫೇರ್ ಶುರು ಮಾಡಿದ್ದಳು. ಇವನು ಟಿವಿ ಪ್ರೋಗ್ರಾಂಗಳ ನಿರ್ಮಾಪಕ. ಅದಕ್ಕೂ ಮೊದಲಿಂದಲೂ ಜೆರೋಮ್ ಮ್ಯಾಥ್ಯೂ ಎಂಬ ನೌಕಾದಳದ ಆಫೀಸರ್‌ನ್ನು ಮೋನಿಕಾ ಪ್ರೀತಿಸುತ್ತಿದ್ದಳು. ಇದು ಮದುವೆಯ ಹಂತಕ್ಕೂ ಬಂದಿತ್ತು. ಇದಕ್ಕೂ ಮೊದಲು ಈ ಮೋನಿಕಾ ಬೆಂಗಳೂರಿನಲ್ಲಿ ಸಿನಿಮಾ ಛಾನ್ಸ್‌ಗಾಗಿ ಅಲೆಯುತ್ತಿದ್ದಾಗಲೇ ನದೀಂ ಖಾನ್ ಎಂಬ ಡ್ಯಾನ್ಸ್ ಡೈರೆಕ್ಟರ್ ಜೊತೆ ಸರಸವಾಡಿಕೊಂಡಿದ್ದಳು. ಅದಕ್ಕೂ ಹಿಂದೆ ಹುಡುಕುತ್ತಾ ಹೋದರೆ ಮೈಸೂರಿನ ಮಹಾಜನ್ ಕಾಲೇಜಿನಲ್ಲಿ ಬಿ.ಎ. ಜರ್ನಲಿಸಂ ಓದುತ್ತಿದ್ದಾಗಲೂ ಅಸಂಖ್ಯ ಹುಡುಗರೊಂದಿಗೆ flirt ಮಾಡಿಕೊಂಡು ಓಡಾಡುತ್ತಿದ್ದುದನ್ನು ಮೈಸೂರಿಗರು ನೋಡಿದ್ದಾರೆ.

ಬಹುಶಃ ಆಗಿನ್ನೂ ಮೋನಿಕಾಗೆ ಹದಿನೆಂಟು-ಹತ್ತೊಂಭತ್ತರ ವಯಸ್ಸಿರಬೇಕು. ಆಗಲೇ ತನಗೆ ಸತ್ಯದ ದರ್ಶನವಾದವಳಂತೆ `I know about boys, if you commit to one, you cannot enjoy life' ಎಂದು ಕ್ಲಾಸ್‌ಮೇಟ್ ಒಬ್ಬನಿಗೆ ಬೋಧಿಸಿದ್ದಳಂತೆ.

ಆದರೆ ಈಗೇನಾಗಿದೆ ನೋಡಿ,


ಮೋನಿಕಾ at a time, ಇಬ್ಬರು ಯುವಕರೊಡನೆ ಪ್ರೇಮಸಲ್ಲಾಪ ನಡೆಸಲು ಹೋಗಿ ಒಬ್ಬನ ಕೊಲೆಗೆ ದಾರಿ ತೋರಿಸಿದ್ದಾಳೆ. ಇತ್ತ ಕೊಂದವನೂ ತನ್ನ ಪ್ರೇಮಿಯೇ ಆದರೂ ಅವನು ಶಾಶ್ವತವಾಗಿ ಜೈಲು ಪಾಲಾಗಲಿದ್ದಾನೆ. ಈ ಮೋನಿಕಾಗೆ boys ಬಗ್ಗೆ ಸಾಕಷ್ಟು ಗೊತ್ತಿದ್ದಿರಬಹುದು. ಆದರೆ ಬದುಕಿನ ಬಗ್ಗೆ, ಕಾನೂನಿನ ಬಗ್ಗೆ ಪೊಲೀಸರ ಬಗ್ಗೆ, ಏನೇನೂ ಗೊತ್ತಿರಲಿಲ್ಲ ಎಂದು ಈಗ ಎಲ್ಲರಿಗೂ ಗೊತ್ತಾಗಿದೆ.


ಗ್ರೋವರ್ ಕೊಲೆಯಾದ ಗಳಿಗೆ, ನಂತರ ಹತ್ಯೆಯಾದವನ ಕಳೇಬರ ಕಣ್ಮರೆ ಮಾಡಲು ಮೋನಿಕಾ-ಮ್ಯಾಥ್ಯೂ ನಡೆಸಿದ ಕರಾಮತ್ತುಗಳೇ ಇದಕ್ಕೆ ಸಾಕ್ಷಿ.

ಬೆಡ್‌ರೂಂನಲ್ಲೊಬ್ಬ-ಮನೆ ಬಾಗಿಲಲ್ಲೊಬ್ಬ

ಕನ್ನಡದ ಸಿನಿಮಾ 'ಜೂಟ್'ನ ಹಿರೋಯಿನ್ ಆಗಿ 'ಓಕೆ ಸಾರ್ ಓಕೆ', 'ಏಕದಂತ' ಸಿನಿಮಾಗಳಲ್ಲಿ ಸೈಡ್ ರೋಲ್‌ನಲ್ಲಿ ನಟಿಸಿದ್ದ ಮೋನಿಕಾಗೆ ಬೆಂಗಳೂರಿಗಿಂತ ಮುಂಬೈನಲ್ಲೇ ತನ್ನ ಸಿನಿಮಾ ಕೆರಿಯರ್ ಕಂಡುಕೊಳ್ಳಬೇಕು

ಸಿನಿಮಾ ಜಗತ್ತಿನ ಕ್ರಿಮಿನಲ್‌ಗಳು



ದುಡ್ಡು, ಪ್ರಚಾರ, ಅದೇರೀತಿ ಭ್ರಮೆಗಳ ಲೋಕವೂ ಆಗಿರುವ ಸಿನಿಮಾದಲ್ಲಿ ಕ್ರೈಮು ಹೊಸದೇನಲ್ಲ,

ಮೋನಿಕಾ ಭಯಾನಕ ಕೊಲೆಯೊಂದರ ಸಾಕ್ಷಿ ಹಾಗೂ ನಂತರ ಸಹಭಾಗಿಯಾಗಿದ್ದರೆ ಕನ್ನಡ ಸಿನಿಮಾಗೆ ಪರಿಚಿತರಾಗಿದ್ದ ಇನ್ನೂ ಬೇರೆ ಕೆಲವರು ನಾನಾ ತರದ ಕ್ರೈಂ ನಡೆಸಿ ಸಿಕ್ಕುಬಿದ್ದಿದ್ದಾರೆ.

'ನನ್ನಾಸೆಯ ಹೂವೆ' ಚಿತ್ರದಲ್ಲಿ ಜಗ್ಗೇಶ್‌ಗೆ ನಾಯಕಿಯಾಗಿ ನಟಿಸಿದ್ದ ಮೋನಿಕಾ ಬೇಡಿಗೆ ಮುಂಬೈ ಅಂಡರ್‌ವರ್ಲ್ಡ್‌ನ ಅಬು ಸಲೇಂ ಜೊತೆ ಲಿಂಕ್ ಇತ್ತು. ನಂತರ ಅವಳು ಪೋರ್ಚುಗಲ್‌ನಲ್ಲಿ ಅರೆಸ್ಟಾಗಿ ಇಂಡಿಯಾಗೆ ಬಂದು ಕೆಲ ವರ್ಷ ಜೈಲು ಸೇರಿ ಈಗ ಹೊರಬಂದಿದ್ದಾಳೆ. ಮೋನಿಕಾ ಅರೆಸ್ಟ್ ಆದ ಸುದ್ದಿ ಕೇಳಿದ ಜಗ್ಗೇಶ್ ಗಾಬರಿಯಾಗಿ 'ಅಯ್ಯಯ್ಯಪ್ಪ, ಗುರುವೆ... ನಾನಂತೂ ಯಾವ ಗ್ಯಾಂಗ್ ಮೆಂಬರ್ರೂ ಅಲ್ಲ' ಅಂತ ಅಲವತ್ತುಕೊಂಡಿದ್ದ.


ಇನ್ನು 'ತನಿಖೆ' ಎಂಬ ತಗಡು ಸಿನಿಮಾದ ಗುಲ್ಜಾರ್ ಖಾನ್ ಕೊಲೆ ಕೇಸೊಂದರಲ್ಲಿ ಸಿಕ್ಕಾಕಿಕೊಂಡು ಕೊನೆಗೆ ಜೈಲಿನಲ್ಲೇ ಸತ್ತೂ ಹೋದ.

ತೀರಾ ಇತ್ತೀಚೆಗೆ ಹಾರ್ಟ್ ಅಟ್ಯಾಕ್ ಆಗಿ ತೀರಿಕೊಂಡ ವಿಲನ್ ಹರೀಶ್ ರಾಯ್ ಸಹ ಕೊಲೆ ಕೇಸೊಂದರಲ್ಲಿ ಮೂರು ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ.

ಇನ್ನು ನಟಿಯರ ವಿಚಾರಕ್ಕೆ ಬಂದರೆ ವಿನಿತಾಳ ಕುಖ್ಯಾತಿ ನಿಮಗೂ ನೆನಪಿರಬಹುದು. ವಿಷ್ಣು ಜೊತೆ 'ಧಣಿ'ಯಲ್ಲಿ ಮತ್ತು ದೇವರಾಜ್ ಜೊತೆಗೆ 'ಮಾರ್ಕೆಟ್ ರಾಜಾ'ದಲ್ಲಿ ಹಿರೋಯಿನ್ ಆಗಿದ್ದ ವಿನಿತಾ ಆಮೇಲೆ ನೇರ ವೇಶ್ಯಾವಾಟಿಕೆಗೆ ಇಳಿದಿದ್ದಳು. ಒಂದು ದಿನ ಚೆನ್ನೈ ಪೊಲೀಸರು ವಿನಿತಾಳನ್ನು ಅರೆಸ್ಟ್ ಮಾಡಿದಾಗ ಅವಳೊಂದಿಗೆ ಜಪಾನಿ ಗಿರಾಕಿಯೊಬ್ಬನಿದ್ದ. ಅಂದಹಾಗೆ ಈ ವಿನಿತಾ ಒಂದು ರಾತ್ರಿಯ ಸರ್ವೀಸ್‌ಗೆ ಬರೋಬ್ಬರಿ ಎರಡು ಲಕ್ಷ ಫೀಸ್ ಕೇಳುತ್ತಿದ್ದಳಂತೆ.


ಉಷಾರಾಣಿ ಅನ್ನೋ ಇನ್ನೊಬ್ಬಳು ದಢೂತಿ ನಟಿಯದ್ದೂ ಇದೇ ಕತೆ. 'ನವಭಾರತಿ', 'ಕಾರ್ಮುಗಿಲು'ನಲ್ಲಿ ಕಾಣಿಸಿಕೊಂಡಿದ್ದ ಇವಳೂ ಕೂಡಾ ತನ್ನ ತಾಯಿಯನ್ನೇ ಪಾಲುದಾರಿಕೆಗೆ ಕರಕೊಂಡು ದಂಧೆ ನಡೆಸುತ್ತಿದ್ದಳು. ಕೊನೆಗೆ ಜೈಲು ಪಾಲಾದಳು.

ಇನ್ನು ಮದ್ದೂರ್ ಮಂಜುಳಾ ಕತೆ ಕೂಡ ಭಿನ್ನವಾಗಿಲ್ಲ, ಲೇಟೆಸ್ಟ್ ಮಂಜನೆಂಬ ಭೂಗತ ಕ್ರಿಮಿ ಜೊತೆ ಓಡಾಡಿಕೊಂಡಿದ್ದ ಈ ಮದ್ದೂರ್ ವಡೆ ಮಂಜ ಕೊಲ್ಲಲ್ಪಟ್ಟಾಗ ಅವನ ಜೊತೆ ಅವನದ್ದೇ ಕಾರ್‌ನೊಳಗಿದ್ದು ಮಂಜನ ದುಷ್ಮನ್‌ಗಳು ಅಟ್ಯಾಕ್ ಮಾಡಿದಾಗ ಓಡಿಹೋದಳು.



ಮೋನಿ 2008 ರ ಮಾರ್ಚ್‌ನಲ್ಲೇ ಮುಂಬೈಗೆ ಹೋಗಿದ್ದಳು. ಮೋನಿಕಾಳಂತ ಸಾವಿರ ಜನ ...ಯರು ಪ್ರತಿನಿತ್ಯ ಮುಂಬೈಗೆ ಬರುತ್ತಿರುತ್ತಾರೆ. ... ಅದೃಷ್ಟ, ಪ್ರತಿಭೆ ಇದ್ದವರು ಒಳ್ಳೇ ಅವಕಾಶ ...ಲಿ ಕಂಡುಕೊಳ್ಳುತ್ತಾರೆ. ಉಳಿದವರನ್ನು ಮುಂಬೈ ...ಂದು ಹಾಕುತ್ತಿರುತ್ತದೆ. ಸ್ವಲ್ಪ ಕುಳ್ಳಿಯೂ, ...ಪಿನ ಬಣ್ಣದವಳೂ ಆಗಿದ್ದ ಮೋನಿಕಾಗೆ ಮೇಲೆ ... ಎರಡು ದಾರಿಗಳಿಗಿಂತ ಭಿನ್ನವಾದ ಜೈಲು ... ಎದುರಾಗಿದ್ದು ಮಾತ್ರ ಅವಳ ಅತೀ ...ಹಾಂಕ್ಷೆಗಳಿಂದ.

...ಪಾಪಿ ನೀರಜ್ ಗ್ರೋವರ್ ಇದಕ್ಕೆ ಬಲಿಯಾಗಿ



...ಂಬೈಗೆ ಹೋದ ಮೋನಿಕಾ ಛಾನ್ಸ್ ಕೇಳಿಕೊಂಡು ಹತ್ತಾರು ಕಡೆ ...ತ್ತಿದ್ದಾಗ ಈ ಗ್ರೋವರ್‌ನ ಪರಿಚಯವಾಗಿದೆ. ಆಗ ಅವಳಿಗೆ ತನ್ನದು ...ಂದು ಮನೆಯೂ ಇರಲಿಲ್ಲವಾದ ಕಾರಣ ಗ್ರೋವರ್ ಮೋನಿಕಾಳನ್ನು ...ನೆಯಲ್ಲೇ ಇರಗೊಟ್ಟಿದ್ದಾನೆ. ಈ ಗ್ರೋವರ್ ಅದುವರೆಗೂ ಸಾಸ್-ಬಹು ... ಸೀರಿಯಲ್ ನಿರ್ಮಾಪಕಿ ಏಕ್ತಾ ಕಪೂರ್‌ಳ ಬಾಲಾಜಿ ಟೆಲಿಫಿಲಂಸ್‌ನಲ್ಲಿ ...ಮಾಡಿಕೊಂಡಿದ್ದವನು ತೀರಾ ಇತ್ತೀಚೆಗೆ ಅದನ್ನು ಬಿಟ್ಟು ಸಿನರ್ಜಿ ಆಡ್‌ಲ್ಯಾಬ್ಸ್ ... ಸೇರಿಕೊಂಡಿದ್ದ. ಸ್ಟಾರ್ ಟಿವಿಯಲ್ಲಿ ಈಗ ಟೆಲಿಕಾಸ್ಟ್ ಆಗುತ್ತಿರುವ ...ಸ್ ಖಾನ್‌ನ 'ಪಾಂಚ್‌ವಿ ಪಾಸ್'ನ ನಿರ್ಮಾಪಕರಿವರು. ಇಂಡಸ್ಟ್ರಿಯಲ್ಲಿ ...ಸ್ಟಿಗೆ ಹೊಕ್ಕು ಬಳಕೆಯಿದ್ದ ಗ್ರೋವರ್ ಜೊತೆ ಸಲಿಗೆಯಿಂದಿದ್ದರೆ ತನಗೆ ...ರೂ ಛಾನ್ಸ್ ಸಿಗಬಹುದೆಂದು ಮೋನಿಕಾ ಮೊದಮೊದಲು ...ಂಡಿದ್ದಳೆಂದು ಕಾಣುತ್ತದೆ. ಆದರೆ ಏನೆಲ್ಲಾ ಲಾಗಾ ಹಾಕಿದರೂ ಕೊನೆಗೆ ...ಕಾಗೆ ಅವಕಾಶ ಸಿಕ್ಕಿದ್ದು ಏಕ್ತಾ ಕಪೂರ್‌ಳ ...ಸೀರಿಯಲ್ 'ಮಹಾಭಾರತ'ದಲ್ಲಿ ಒಂದು ... ಅಷ್ಟೆ. ಈ ಗ್ರೋವರ್‌ನ ಕೆಪಾಸಿಟಿ ...ಎಂದು ತೀರ್ಮಾನ ಮಾಡಿ ಅವನಿಂದ ...ಗಲು ಮೋನಿಕಾ ಯತ್ನಿಸಿದರೂ ಅದ್ಯಾಕೋ ... ಗ್ರೋವರ್ ಒಪ್ಪಿಲ್ಲ. 'ಸ್ವಲ್ಪ ತಡಿ ನಿನಗೆ ...ನ್ಸ್ ಕೊಡಿಸುತ್ತೀನಿ' ಎಂದುಕೊಂಡೆ ಕಾಲ ...ನೆ.

ನಡುವೆ ತನ್ನ ಅಪ್ಪ-ಅಮ್ಮ ಹಾಗೂ ...ರ ಮ್ಯಾಥ್ಯೂ ವಿರೋಧದ ನಡುವೆಯೇ ...ಬೈಗೆ ಬಂದಿದ್ದ ಮೋನಿಕಾ ಕೊನೆಗೆ ಮೇ ... ಮೊದಲ ವಾರದಲ್ಲಿ ಅಲ್ಲಿನ ಮಲಾಡ್ ...ದ ಧೀರಜ್ ಸಾಲಿಟೇರ್ ಅಪಾರ್ಟ್‌...ಲ್ಲಿ ಒಂದು ಫ್ಲಾಟ್ ಬಾಡಿಗೆಗೆ ಹಿಡಿದಳು. ಬ್ರೋಕರ್‌ಗೆ ಹೇಳಿ ಮೋನಿಕಾಗೆ ...ನೆ ಕೊಡಿಸಿದ್ದೇ ಗ್ರೋವರ್. ಅದೇ ಮನೆ ಒಂದೆರಡೆ ದಿನದಲ್ಲಿ ಗ್ರೋವರ್ ... ಡೆತ್ ಚೇಂಬರ್ ಆಗುವುದರಲ್ಲಿತ್ತು. ಅವತ್ತು ಮೇ 6 ರಂದು ಮೋನಿಕಾ ... ಮನೆಗೆ ತನ್ನೆಲ್ಲಾ ಸರಕು ಸಾಮಾನು ಸಾಗಿಸಿದ್ದಾಳೆ. ಸಂಜೆಯಾಗಿ ರಾತ್ರಿ ...ಯುತ್ತಿದ್ದಂತೆ ಮೋನಿಕಾಗೆ ನೀರಜ್ ಗ್ರೋವರ್ ನೆನಪಾಗಿದೆ. ಬಹುಶಃ ಒಂಟಿತನ ...ೂ ಇಲ್ಲಾ ತನ್ನ ಎಂದಿನ ಚಿಲ್ಲುತನದಿಂದಲೋ ಗ್ರೋವರ್‌ಗೆ ಫೋನ್ ... ಮನೆಗೆ ಕರೆದಿದ್ದಾಳೆ.



ಜೈಲು ಸೇರಿದ ಮ್ಯಾಥ್ಯೂ



ಕೊಲೆಯಾದ ನೀರಜ್

ಆಗ ರಾತ್ರಿ ಹತ್ತೂವರೆ ಗಂಟೆ!

...ರೋವರ್ ಮೊಬೈಲ್‌ನ ರಿಂಗ್ ಸೌಂಡ್ ಅಕ್ಷರಶಃ ಅವನ ಮರಣದ ...ಮೂ ಆಗಿತ್ತು. ಆದರೆ ಮುಂದೇನಾಗಲಿದೆಯೆಂದು ಯಾರು ತಾನೆ ಊಹಿಸಲು ...ತ್ತು ಹೇಳಿ?

...ಮಾರನೆ ಬೆಳಗ್ಗೆ ಕೊಲೆಯಾಗಲಿದ್ದ ಗ್ರೋವರ್ ಗೆಳೆಯರೊಂದಿಗೆ "ಮೋನಿಕಾ ಫೋನ್ ಮಾಡಿ ಕರೀತಿದ್ದಾಳೆ. ರಾತ್ರಿ ಅವಳ ಮನೇಲಿ ಇದ್ದು ಬರ್‍ತೀನಿ" ಎಂದು ಹೇಳಿ ಹೊರಟಿದ್ದ. ಇನ್ನೊಂದೆಡೆ ಮುಂಬೈನಿಂದ ದಕ್ಷಿಣಕ್ಕೆ ಸಾವಿರದ ಆರುನೂರು ಕಿಲೋಮೀಟರ್ ದೂರದ ಕೊಚ್ಚಿಯಲ್ಲಿ ಮ್ಯಾಥ್ಯೂ ಇದ್ದ. ಈ ಮ್ಯಾಥ್ಯೂ ಬೇರೆ ಯಾರೂ ಅಲ್ಲ, ಈತನ ತಂದೆ ರಾಷ್ಟ್ರೀಕೃತ ಬ್ಯಾಂಕ್ ಒಂದರ ಮ್ಯಾನೇಜರ್ ಆಗಿದ್ದು ಅವರನ್ನೂ ಮೈಸೂರಿಗೆ ವರ್ಗ ಮಾಡಿದ್ದಾಗ ಮ್ಯಾಥ್ಯೂ ಮತ್ತು ಮೋನಿಕಾಳ ಪರಿಚಯವಾಗಿದೆ. ಆಕೆ ಸುಂದರಿ. ಆತನೂ ಸುಂದರನೇ. ಹೇಳಿಕೇಳಿ ಇಬ್ಬರದೂ ಕೇರಳದ ಕ್ರಿಶ್ಚಿಯನ್ ಸಮುದಾಯ ಪರಿಚಯ ಪ್ರೀತಿಯಾಗಿ ಅರಳಿತು. ಮೋನಿಕಾ ಸಿನಿಮಾ ಕನಸು ಕಾಣುತ್ತಿದ್ದರೆ, ಆತ ನೌಕಾದಳದಲ್ಲಿ ಹಿರಿಯ ಸ್ಥಾನ ಪಡೆಯುವ ಆಕಾಂಕ್ಷೆಯಲ್ಲಿದ್ದ. ಮ್ಯಾಥ್ಯೂ ಅವಳನ್ನೂ ಎಷ್ಟು ಪ್ರೀತಿಸುತ್ತಿದ್ದನೆಂದರೆ ಪ್ರತಿದಿನ ಅವಳಿಗೆ ಫೋನ್ ಮಾಡುತ್ತಿದ್ದ. ಹಾಗೆಯೇ ಅವತ್ತಿನ ರಾತ್ರಿ ಕೂಡ ಮಾಡಿದ.

ಆದರೆ ಮಾರನೇ ಬೆಳಗ್ಗೆ ಬೆಳಿಗ್ಗೆಯೇ ತನ್ನಿಂದ ಒಂದು ಕೊಲೆ ನಡೆಯಲಿದೆಯೆಂಬ ಕಲ್ಪನೆಯೂ ಅವನಿಗಿರಲಿಲ್ಲ. ಇತ್ತ ಮುಂಬೈ ಮಲಾಡ್‌ನಲ್ಲಿ ಕೊಲೆಯ ಕಾರಣಕರ್ತೆ ಮೋನಿಕಾ ಗ್ರೋವರ್‌ನೊಂದಿಗೆ ಸರಸ-ಚೇಷ್ಟೆ ಮಾಡಿಕೊಂಡಿದ್ದಾಳೆ. ಮಾರನೆ ಬೆಳಗ್ಗೆ ಕೊಲೆಗೆ ಬಳಕೆಯಾಗಲಿದ್ದ ಚಾಕು ತನ್ನ ಪಾಡಿಗೆ ಕಿಚನ್ ನಲ್ಲಿ ತಣ್ಣಗೆ ಇದೆ. ತರಕಾರಿಯಾದರೇನು, ಮನುಷ್ಯನ ಕರುಳಾದರೇನು ಬಳಸುವ ಕೈನ ಆದೇಶದಂತೆ ಕತ್ತರಿಸು ವುದಷ್ಟೇ ತಾನೆ ಅದರ ಕೆಲಸ.

ಆಗ ರಿಂಗ್ ಆಗಿದೆ ಮೋನಿಕಾಳ ಮೊಬೈಲ್!

ಆ ಕರೆ ಮಾಡಿದವನು ಮ್ಯಾಥ್ಯೂ.

ಫೋನ್ ರಿಸೀವ್ ಮಾಡಿದ ಮೋನಿಕಾ ಮ್ಯಾಥ್ಯೂ ಜೊತೆ ಮಾತಾಡುತ್ತಿದ್ದಾಗಲೇ ನಡುವೆ ಗ್ರೋವರ್ ಏನೋ ಮಾತಾಡಿದ್ದಾನೆ. ಅದು ಜೊತೆಯಲ್ಲಿದ್ದ ಮೋನಿಕಾಗಿಂತ ಸ್ಪಷ್ಟವಾಗಿ ಕೇಳಿಸಿದ್ದು ದೂರದ ಕೊಚ್ಚಿಯಲ್ಲಿದ್ದ ಮ್ಯಾಥ್ಯೂಗೆ.

'ಯಾರದು ನಿನ್ನ ಜೊತೆ ಇರೋದು?' ಎಂದಿದ್ದಾನೆ ಮ್ಯಾಥ್ಯೂ.

'ಗ್ರೋವರ್ ಅಂತ ಫ್ರೆಂಡ್. ಮನೆ ಶಿಫ್ಟ್ ಮಾಡಿದೆ ನಲ್ಲ, ಸ್ವಲ್ಪ **help** ಮಾಡೋಕೆ ಬಂದಿದ್ದಾನೆ' ಅಂದಿದ್ದಾಳೆ ಈ ಮಾಯಾಂಗನೆ. ಮೋನಿಕಾಳ ಬಗ್ಗೆ ಆಕ್ರಮಣಕಾರಿ ಅನಿಸೋವಷ್ಟು ಪೋಸೆಸಿವ್‌ನೆಸ್ ಬೆಳೆಸಿಕೊಂಡಿದ್ದ ಮ್ಯಾಥ್ಯೂಗೆ ತನ್ನ ಪ್ರಿಯತಮೆ ಮನೇಲಿ ಒಂಟಿಯಾಗಿರುವಾಗ ಇನ್ನೊಬ್ಬ ಯುವಕ ರಾತ್ರಿ ವೇಳೆ ಅಲ್ಲಿದ್ದದ್ದು ಸರಿ ಕಂಡಿಲ್ಲ, ಸ್ವಲ್ಪ ಕಠಿಣವಾಗೆ 'ಅವನ್ನ ಬೇಗ ಕಳಿಸು' ಅಂತ ಗದರಿಸಿದ್ದಾನೆ. ಮೋನಿಕಾ ಉತ್ತರಿಸುವಷ್ಟರಲ್ಲಿ ಅವಳ ಮೊಬೈಲ್ ಬ್ಯಾಟರಿ ಡೌನ್ ಆಗಿ ಸಂಪರ್ಕ ತಪ್ಪಿದೆ. ಆಗ ಮೋನಿಕಾಳೇ ಗ್ರೋವರ್ ಮೊಬೈಲ್‌ನಿಂದ ಮ್ಯಾಥ್ಯೂಗೆ ಕರೆ ಮಾಡಿ 'ಗ್ರೋವರ್‌ಗೆ ಈಗಲೇ ಹೋಗಲು ಹೇಳ್ತೀನಿ' ಅಂತ ಸುಳ್ಳು ಸುಳ್ಳೇ ಹೇಳುತ್ತಿರುವಾಗಲೇ ಈ ಗ್ರೋವರ್ ಇಂಗ್ಲಿಷ್‌ನಲ್ಲಿ 'ನಿನ್ನ ಪ್ರೇಮಿಗೆ ನನ್ನ ಬಗ್ಗೆ ಆತಂಕವಾಗಿರಬೇಕು' ಅಂತ ಕಿಚಾಯಿಸಿದ್ದಾನೆ.

ಅಷ್ಟೇ ಸಾಕಾಯಿತು. ಮ್ಯಾಥ್ಯೂಗೆ ಮೋನಿಕಾ ಬಗ್ಗೆ ಯಾಕೋ ಡೌಟು ಬಂದಿದೆ. ಲವ್ ಮಾಡುತ್ತಿದ್ದರೂ ಸದ್ಯಕ್ಕೆ ಎಂಗೇಜ್‌ಮೆಂಟ್ ಬೇಡ ಅನ್ನೋ

▶ ▶ ▶ ಮುಂದಿನ ಪುಟಕ್ಕೆ

'ಸರ್ವೀಸ್‌ನಲ್ಲಿ ಇಂಥ ಕೊಲೆ ನೋಡಿರಲಿಲ್ಲ'



[illegible]

ಕೊಲೆ ನಂತರ ರೇಪ್

[illegible]

ಬಚಾವ್ ಆಗಬಹುದಿತ್ತು

ಈ ಮೋನಿಕಾ ಚಿಲ್ಲು ಸ್ವಭಾವದವಳೇ ಆಗಿದ್ದರೂ, ಮ್ಯಾಥ್ಯೂ ಹಾಗೂ ನೀರಜ್ ಗ್ರೋವರ್ ಇಬ್ಬರಲ್ಲೂ ಮದುವೆ ಬಯಕೆ ಹುಟ್ಟಿಸಿದ್ದಾಗಲೂ ಕೊನೆಗೆ ಈ ಕೊಲೆಗೆ ಸಹಕರಿಸಬೇಕಾದ ಅಗತ್ಯವಿರಲಿಲ್ಲ. ಸಿನಿಮಾದಲ್ಲಿ ಹೇಗಾದರೂ ಮಾಡಿ ಮಿಂಚಬೇಕೆಂಬ ಆಸೆಯಿದ್ದ ಮೋನಿಕಾಗೆ ಅಷ್ಟರಲ್ಲಾಗಲೇ ಮ್ಯಾಥ್ಯೂ ಬೇಡವಾಗಿದ್ದ, ಕೊನೆಗೆ ಗ್ರೋವರ್‌ರಂಥ **low profile** ಮನುಷ್ಯ ಕೂಡಾ ತನ್ನ ಏಳಿಗೆಗೆ ಮೆಟ್ಟಿಲಾಗಲಾರ ಎಂದೇ ಅನ್ನಿಸಿತ್ತು. ಹೀಗಿದ್ದಾಗಲೂ ಮೇ 6 ರ ರಾತ್ರಿ ಅವಳು ಗ್ರೋವರ್‌ನನ್ನು ಒತ್ತಾಯ ಮಾಡಿ ಮನೆಯಲ್ಲೇ ಉಳಿಸಿಕೊಂಡಿದ್ದಾಳೆ. ಮಾರನೆ ಬೆಳಿಗ್ಗೆ ಮ್ಯಾಥ್ಯೂ ಬಂದು ಗ್ರೋವರ್ ಹತ್ಯೆ ಮಾಡಿದ ಮೇಲೂ ಮೋನಿಕಾಳಿಗೆ ಒಂದು ಅವಕಾಶವಿತ್ತು.

ಅದು ಬ್ಯಾಗ್, ಬೆಡ್‌ಶೀಟ್ ತರುವಂತೆ ಮ್ಯಾಥ್ಯೂ ಹೇಳಿ ಕಳಿಸಿದಾಗ ಮೋನಿಕಾ ನೇರ ಪೊಲೀಸರ ಬಳಿ ಹೋಗಿ ಎಲ್ಲಾ ಹೇಳಿದಿದ್ದರೆ ಅಷ್ಟರಮಟ್ಟಿಗೆ ಅವಳು ನಿರಪರಾಧಿಯಾಗುತ್ತಿದ್ದಳು.

ಗ್ರೋವರ್‌ನನ್ನು ಅವಳೇನೂ ಕೊಂದಿರಲಿಲ್ಲ, ಪೊಲೀಸರು ಆಗಲೇ ಬಂದಿದ್ದರೆ ಮೋನಿಕಾ ಗ್ರೋವರ್ ಹೆಣ ಕತ್ತರಿಸುವ, ಸುಟ್ಟು ಸಾಕ್ಷ್ಯ ನಾಶ ಮಾಡುವ ಅಪರಾಧ ಮಾಡಬೇಕಾಗಿಯೂ ಬರುತ್ತಿರಲಿಲ್ಲ.

ಆದರೆ ಅಷ್ಟು ಸಹಜ ವಿವೇಚನೆ ಬರಬೇಕು ಹೇಗೆ.... ಅದೂ ಮೋನಿಕಾಳಂತ ... ಮಾದಕ ಸುಂದರಿಗೆ?

ಈಕೆ ಮೈಸೂರು ಮಲ್ಲಿಗೆಯಲ್ಲ




ಮೈಸೂರಿನ ಬನ್ನಿಮಂಟಪ ಬಡಾವಣೆಯ ಸಿ ಬ್ಲಾಕಿನಲ್ಲಿ ಪುಟ್ಟ ಸೊಗಸಾದ ಬಂಗಲೆಯಲ್ಲಿ ಈ ಮರಿಯಾಳ ತಂದೆ ಸೂಸೈರಾಜ್, ತಾಯಿ ನಿರ್ಮಲ ಇದ್ದಾರೆ. ಸಭ್ಯ ಜನ. ಸಾಕಷ್ಟು ಶ್ರೀಮಂತಿಕೆಯೂ ಇತ್ತು. ಕಾಲೇಜಿಗೆ ಹೋಗುವಾಗಲೇ ಮರಿಯಾ ಕಾರ್ ಬಳಸುತ್ತಿದ್ದಳು. ಈಕೆಯ ಅಣ್ಣಂದಿರಿಗೆ ಈಗಲೂ ಮರಿಯಾ ಬಗ್ಗೆ ಸ್ವಲ್ಪ ಅಸಹನೆಯಿದೆ. ಸೋದರಿ ವೆರೋನಿಕಾ ಟಿ. ನರಸೀಪುರ ತಹಶೀಲ್ದಾರ್ ಸಿ.ಟಿ. ರವಿಯ ಪತ್ನಿ. ಮರಿಯಾ ಸೋದರ ಸಂಬಂಧಿ ಶಾಂತನು ಸೇನ್ ಮೈಸೂರು ಪಾಲಿಕೆ ಸದಸ್ಯ.

ಕಾಲೇಜು ದಿನಗಳಿಂದಲೂ ಹಾಡು, ಡ್ಯಾನ್ಸ್, ಫ್ಯಾಷನ್ ಶೋಗಳೆಂದು ತಿರುಗುತ್ತಿದ್ದ ಮರಿಯಾಗೆ ಅದ್ಯಾವ ಗಳಿಗೆಯಲ್ಲಿ ಸಿನಿಮಾದಲ್ಲಿ ಮಿಂಚಬೇಕೆಂಬ ಹಪಾಹಪಿ ಶುರುವಾಯಿತೋ ಆಗಲೇ ಅವಳ ಬದುಕು ಅವಳ ಹತೋಟಿ ಮೀರಿ ಹೋಯಿತು.

ಸಿನಿಮಾಗೆ ಕಾಲಿಡುವ ಎಲ್ಲಾ ನಟಿಯರ ಪಾಡು ಹೀಗಾಗುವುದಿಲ್ಲ. ಆದರೆ ಅತಿಯಾದ ಆತ್ಮವಿಶ್ವಾಸ, ಭರಿಸಲಾಗದ ಮಹತ್ವಾಕಾಂಕ್ಷೆ ಹಾಗೂ ಅವಳ ವ್ಯಕ್ತಿತ್ವದೊಳಗೆ ಇದ್ದ ವಂಚಕ ಬುದ್ಧಿ ಮರಿಯಾಳ ಬದುಕನ್ನೇ ಬಲಿತೆಗೆದುಕೊಂಡಿದೆ.

ಆದರೆ ಥಟ್ಟೆಂದು ಒಮ್ಮೆ ಇನ್ನೊಂದು ಆಂಗಲ್‌ನಿಂದ ನೋಡಿದರೆ ಮರಿಯಾ ತನ್ನ ಹತೋಟಿ ಮೀರಿದ ಘಟನೆಗಳಿಗೆ ಸಿಕ್ಕು ಬಲಿಪಶುವಾದಂತೆಯೂ ಕಾಣುತ್ತಿದ್ದಾಳೆ.



▶▶▶

ಹುಡುಗಿ ಗ್ರೋವರ್ ಜೊತೆ ಅಫೇರ್ ನಡೆಸ್ತಿರಬಹುದು ಎಂದು ಶಂಕಿಸಿದ್ದಾನೆ.

ಮೋನಿಕಾ ಮೊದಲಿಂದಲೂ ಸ್ವಲ್ಪ ಚೆಲ್ಲುಚೆಲ್ಲು ಅಂತ ಮ್ಯಾಥ್ಯೂಗೂ ತಿಳಿದ ವಿಚಾರವೇ ಆಗಿತ್ತಲ್ಲ, ಮ್ಯಾಥ್ಯೂನ ಅನುಮಾನ ಬೆಳೆದು ಬೆಳೆದು ಇದನ್ನು ಬಗೆಹರಿಸಲೇಬೇಕೆಂದು ನಡುರಾತ್ರಿಯೇ ಮುಂಬೈಗೆ ಸಿಕ್ಕ ವಿಮಾನ ಹತ್ತಿದ್ದಾನೆ.



ಅದೇ ಸಮಯದಲ್ಲಿ ಮುಂಬೈನಲ್ಲಿ ಮೋನಿಕಾ ಗ್ರೋವರ್‌ನನ್ನು ತನ್ನ ಮಂಚಕ್ಕೆ ಹತ್ತಿಸಿಕೊಂಡಿದ್ದಳು. ಮಾರನೇ ಬೆಳಗ್ಗೆ ಅದೇ ಗ್ರೋವರ್‌ನ ದೇಹ ಕತ್ತರಿಸುತ್ತಾ ಕೂರಬೇಕಾಗಿತ್ತು ಅವಳು!

ಮೇ 7 ರ ಬೆಳಗ್ಗೆ ಏಳೂವರೆ ಸುಮಾರಿಗೆ ಮನೆ ಕಾಲಿಂಗ್ ಬೆಲ್ ಸದ್ದಾದಾಗ ಮೋನಿಕಾ ಹೋಗಿ ಬಾಗಿಲು ತೆಗೆದಿದ್ದಾಳೆ.

ಮ್ಯಾಥ್ಯೂ ಈಗ ಪೊಲೀಸರಿಗೆ ನೀಡಿರುವ ಹೇಳಿಕೆ ಪ್ರಕಾರ ಮೋನಿಕಾ ಬಂದು ಬಾಗಿಲು ತೆಗೆದಾಗ ತುಂಡುಡುಗೆಯಲ್ಲಿದ್ದಳಂತೆ. ಒಳಗಡೆ ಬೆಡ್‌ರೂಂನಲ್ಲಿ ಗ್ರೋವರ್ ಅರೆಬೆತ್ತಲೆಯಾಗಿ ಮಲಗಿದ್ದವನು ಅದೇ ಅವತಾರದಲ್ಲಿ ಎದ್ದು ರೂಂನಿಂದ ಹೊರಗೆ ಇಣುಕಿದ್ದಾನೆ.

ಈ ದೃಶ್ಯವಷ್ಟೇ ಸಾಕಾಗಿತ್ತು, ಮ್ಯಾಥ್ಯೂ ನೇರ ಗೂಳಿಯಂತೆ ನುಗ್ಗಿದವನೇ ಗ್ರೋವರ್‌ನನ್ನು ಚಚ್ಚಿ ಕೆಡವಿದ್ದಾನೆ. ಗ್ರೋವರ್ ಪ್ರತಿರೋಧಿಸಿದಾಗ ನೇರ ಕಿಚನ್‌ಗೆ ಹೋದ ಮ್ಯಾಥ್ಯೂ ಚಾಕು ತಂದು ಗ್ರೋವರ್ ಹೊಟ್ಟೆಗೆ ಹಾಕಿ ಇರಿದಿದ್ದಾನೆ.

'ಮರಿಯಾ ಮೈ ಡಾರ್ಲಿಂಗ್' ಎಂಬ ಇವರ ಕಾದಾಟ ಕೆಲವೇ ನಿಮಿಷದಲ್ಲಿ ಗ್ರೋವರ್ ಹತ್ಯೆಯಲ್ಲಿ ಮುಗಿದು ಹೋಗಿದೆ. ಅಲ್ಲಿಂದಾಚೆಗೆ ನಡೆದದ್ದು ಮಾತ್ರ ಭಯಾನಕ ಪೈಶಾಚಿಕ ಕೃತ್ಯ.

300 ತುಂಡುಗಳಾದ ಗ್ರೋವರ್

ತನ್ನ ಮನೆಯಲ್ಲಿ ಒಬ್ಬ ಪ್ರಿಯತಮ ಇನ್ನೊಬ್ಬ ಪ್ರಿಯತಮನನ್ನು ಕೊಂದೇಬಿಟ್ಟಿದ್ದನ್ನು ನೋಡಿದ ಮೋನಿಕಾ ಭಯಾನಕ ಶಾಕ್‌ಗೀಡಾಗಿದ್ದಾಳೆ.

ಅವಳಿಗೆ ಸಿನಿಮಾದ ಚಮಕ್, ವೈಯಾರ, ಬೆಡಗುಗಳು ಗೊತ್ತಿತ್ತೇ ವಿನಃ ಇಂಥ ಸಂದರ್ಭ ನಿಭಾಯಿಸುವುದು ಗೊತ್ತಿರಲಿಲ್ಲ.

ಅದನ್ನು ಮ್ಯಾನೇಜ್ ಮಾಡಲು ಹೊರಟವನು ಮ್ಯಾಥ್ಯೂ.

ಗ್ರೋವರ್ ಡೆಡ್‌ಬಾಡಿಯನ್ನು ಹೊರಗೆ ಸಾಗಿಸಿ ಕಣ್ಮರೆ ಮಾಡಿಬಿಟ್ಟರೆ ಯಾರಿಗೂ ತಾವೇ ಕೊಲೆ ಮಾಡಿದ ಬಗ್ಗೆ ಅನುಮಾನ ಬಾರದೆಂದು ಯೋಚಿಸಿದ ಮ್ಯಾಥ್ಯೂ ಆ ಟೆನ್ಷನ್‌ನಲ್ಲೂ ಶಾಂತವಾಗಿ ವಿವರವಾಗಿ ಯೋಚಿಸಿದ್ದಾನೆ. ಅದರಂತೆ ಮೋನಿಕಾಳನ್ನು ಹತ್ತಿರದ ಶಾಪಿಂಗ್ ಮಾಲ್‌ಗೆ ಕಳುಹಿಸಿ ಅವಳ ಕ್ರೆಡಿಟ್ ಕಾರ್ಡ್‌ನಿಂದಲೇ ಹೊಸ ಬೆಡ್‌ಶೀಟ್, ಕರ್ಟನ್‌ಗಳು, ರೂಮ್ ಫ್ರೆಷನರ್ ಹಾಗೂ ಸ್ಪೋರ್ಟ್ಸ್ ಬ್ಯಾಗ್ ತರುವಂತೆ ಹೇಳಿದ್ದಾನೆ. ಜೊತೆಗೆ ಕ್ಯಾಷ್ ಕೊಟ್ಟು ಎರಡು ದೊಡ್ಡ ಚಾಕೂ ತರಲು ಹೇಳಿದ್ದಾನೆ. ಈ ಖರೀದಿಗೆ ಮೋನಿಕಾ ಹೊರಟು ವಾಪಸ್ ಬರುವವರೆಗೂ ತನ್ನೊಂದಿಗೆ ಮೊಬೈಲ್‌ನಲ್ಲಿ contact ನಲ್ಲೇ ಇರಬೇಕು ಎಂತಲೂ ಬೆದರಿಸಿದ್ದಾನೆ. "ಇಲ್ಲದಿದ್ದರೆ ನೀನು ವಾಪಸ್ ಬರುವಷ್ಟರೊಳಗೆ ಆತ್ಮಹತ್ಯೆ ಮಾಡಿಕೊಳ್ತೀನಿ. ಆಗ ಎರಡೂ ಸಾವಿಗೆ ನೀನೇ ಕಾರಣ ಅಂತ ಜೈಲು ಸೇರ್ತಿಯಾ" ಅಂತಲೂ ಬೆದರಿಸಿದ್ದಾನೆ.

ಅಷ್ಟರಲ್ಲಿ ತನ್ನ ಬುದ್ಧಿ ವಿವೇಚನಾ ಶಕ್ತಿ ಎಲ್ಲವನ್ನು ಕಳೆದುಕೊಂಡಿದ್ದ ಮೋನಿಕಾ ಬೆದರಿದ ಹಕ್ಕಿಯಂತಾಗಿ ಮ್ಯಾಥ್ಯೂ ಹೇಳಿದಂತೆ ಮಾಡಿದ್ದಾಳೆ. ಹೀಗೆ ಬೆಳಗ್ಗೆ 11 ರಿಂದ 12 ರ ಸುಮಾರಿಗೆ ಗ್ರೋವರ್ ಡೆಡ್‌ಬಾಡಿ ಕತ್ತರಿಸಲು ಶುರು ಮಾಡಿ ಸಂಜೆ 4 ರ ವೇಳೆಗೆ ಮುನ್ನೂರು ಪೀಸ್ ಮಾಡಿ ಎರಡು ಸ್ಪೋರ್ಟ್ಸ್ ಬ್ಯಾಗಿಗೆ ತುಂಬಿದ್ದಾನೆ. ಇದನ್ನು ಸಾಗಿಸಲು ಕಾರ್ ಬೇಕಲ್ಲ, ಮೋನಿಕಾ ಸೀದಾ ಹೋಗಿ ಶ್ರೇಯಸ್ ಎಂಬ ಇನ್ನೊಬ್ಬ ಡ್ಯಾನ್ಸರ್‌ನ ಸ್ಯಾಂಟ್ರೋ ಕಾರ್ ಸ್ವಲ್ಪ ಹೊತ್ತು ಬೇಕೆಂದು ಕೇಳಿ ತಂದಿದ್ದಾಳೆ. ಸಂಜೆ 5 ರ ವೇಳೆಗೆ ಇಬ್ಬರೂ ಸೇರಿ ಎರಡು ಬ್ಯಾಗ್‌ಗಳಲ್ಲಿ ಹಂಚಿಹೋಗಿದ್ದ ಗ್ರೋವರ್ ಬಾಡಿ, ರಕ್ತದ ಕಲೆಗಳಿದ್ದ ಬೆಡ್‌ಶೀಟ್, ಹೀಗೆ ಕೊಲೆಗೆ ಸಾಕ್ಷಿಯಾಗಿದ್ದ ಎಲ್ಲವನ್ನು ತಂದು ಕಾರಿಗೆ ತುಂಬಿಕೊಂಡು ಹೊರಟಿದ್ದಾರೆ.

ಬಿಲ್ಡಿಂಗ್‌ನ ಸೆಕ್ಯುರಿಟಿ ಗಾರ್ಡ್ ಇವರನ್ನು ಗಮನಿಸಿ ಮಾತಾಡಿಸಿದ್ದಾನೆ. ಅಂತ ಭಯಾನಕ ಕೃತ್ಯದಲ್ಲಿ ಭಾಗಿಯಾಗಿದ್ದ ಮೋನಿಕಾ ಎಂದಿನಂತೆ ನಸುನಕ್ಕು ಮ್ಯಾಥ್ಯುನತ್ತ ಕೈತೋರಿ "ಇವರೇ ನನ್ನ ಭಾವಿ ಗಂಡ, ನೀನು ಹೇಗಿದ್ದೀಯಾ?" ಅಂತೆಲ್ಲಾ ಮಾತಾಡಿದ್ದಾಳೆ.

ಮೋನಿಕಾ ಈ ಸೆಕ್ಯುರಿಟಿ ಗಾರ್ಡ್‌ನ ವಿಚಾರ ಬೇಗ ಮರೆತಳು. ಆದರೆ ಆ ಗಾರ್ಡ್ ಮರೆತಿರಲಿಲ್ಲ, ಮುಂದೆ ಅದೇ ಅವರಿಗೆ ಮುಳುವಾಯಿತು. ಅದಿರಲಿ....

ಈ ಮ್ಯಾಥ್ಯೂ ಎಂಥ ಬುದ್ಧಿವಂತನೆಂದರೆ ತಾನು ನೌಕಾದಳ ಸೇರಿದಾಗ ಟ್ರೈನಿಂಗ್‌ಗೆಂದು ಮುಂಬೈನ ಹತ್ತಿರದ ಥಾಣೆ ಏರಿಯಾದಲ್ಲಿದ್ದಾಗ ಅಲ್ಲೆಲ್ಲ ಓಡಾಡಿ ಗೊತ್ತಿತ್ತು. ಹಾಗಾಗಿ ಅಲ್ಲಿನ ನಿರ್ಜನ ಪ್ರದೇಶದ ಕುರುಚಲು ಕಾಡೇ ಗ್ರೋವರ್‌ನ ಹೆಣಕ್ಕೆ ಗತಿ ಕಾಣಿಸಲು ಸರಿಯಾದ ಜಾಗ ಎಂದು ಯೋಚಿಸಿ ನೇರ ಅಲ್ಲಿಗೇ ಹೋಗಿದ್ದಾನೆ. ಹಾಗೆ ಹೋದ ಈ killer couple ಗ್ರೋವರ್ ಇದ್ದ ಎರಡು ಬ್ಯಾಗ್‌ಗಳಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಜಾಗ ಖಾಲಿ ಮಾಡಿದ್ದಾರೆ. ಅದೇ ರಾತ್ರಿ ಮ್ಯಾಥ್ಯೂ ಕೊಚ್ಚಿಗೆ ವಾಪಾಸ್ ಆಗಿದ್ದಾನೆ.

ಅಲ್ಲಿಂದಾಚೆಗೆ ಮೋನಿಕಾ ಹೊಸ ನಾಟಕ ಶುರು ಮಾಡಿದ್ದಾಳೆ.

ಮಿಸ್ಸಿಂಗ್ ಕಂಪ್ಲೇಂಟ್ ಕೊಟ್ಟಳು


ಮೋನಿಕಾಳ ಎರಡನೇ ಮಿಸ್ಟೇಕ್ ಮನೆಗೆ ವಾಪಸ್ ಬಂದ ತಕ್ಷಣ ಶುರುವಾಯಿತು. ಅದು ಗ್ರೋವರ್‌ನ ಮೊಬೈಲ್‌ನಿಂದಾಗಿದ್ದು. ಸತ್ತ ಗ್ರೋವರ್‌ನ ಎಲ್ಲವನ್ನು ಸುಟ್ಟು ಹಾಕಿದ್ದರೂ ಅವನ ಮೊಬೈಲ್ ಮಾತ್ರ ಇನ್ನು ಮೋನಿಕಾಳ ಮನೆಯಲ್ಲೇ ಇತ್ತು. ಅವಳು ಥಾಣೆಯಿಂದ ವಾಪಸ್ ಬರುವಷ್ಟರಲ್ಲಿ ಸರಿಸುಮಾರು 135 ಮಿಸ್ಡ್‌ಕಾಲ್‌ಗಳು ಆ ನಂಬರಿಗೆ ಬಂದಿದ್ದವು. ಮೇ 7 ರ ಬೆಳಗ್ಗೆಯೇ ಈ ಗ್ರೋವರ್ ಟಿವಿ ಶೂಟಿಂಗ್ ಕೆಲಸದ ಮೇಲೆ ರಾಜಸ್ಥಾನಕ್ಕೆ ಹೋಗುವುದಿತ್ತು. ಅವನಿಗಾಗಿ ಕಾಯುತ್ತಿದ್ದ ಸ್ನೇಹಿತರು ಮೇ 7 ರ ಬೆಳಗ್ಗೆ ಫೋನ್ ಮಾಡಿದಾಗ ಮೋನಿಕಾಳೇ ರಿಸೀವ್ ಮಾಡಿ ಗ್ರೋವರ್ ರಾತ್ರಿ ಹನ್ನೆರಡೂವರೆಗೇ ಹೋದನೆಂದೂ, ವರ್ಷಾ ಹಾಗೂ ಶ್ವೇತಾ ಎಂಬ ಹುಡುಗಿಯರು ಕರೆದರೆಂದು ಹೇಳಿಬಿಟ್ಟಳು. ಆಮೇಲೆ ತಾನೇ ಹೋಗಿ ಗ್ರೋವರ್‌ನ ಮೊಬೈಲ್ ಬಿಟ್ಟು ಹೋಗಿದ್ದನೆಂದು ಹೇಳಿ ಅವನ ಸ್ನೇಹಿತರ ಕೈಗೆ ಕೊಟ್ಟು ಬಂದಳು. ಅಷ್ಟು ಸಾಲದೆಂಬಂತೆ ಮೇ 8 ರಂದೇ ಮಲಾಡ್ ಪೊಲೀಸ್ ಸ್ಟೇಷನ್ನಿಗೆ ಹೋಗಿ 'ಗ್ರೋ[...] ಕಾಣೆಯಾಗಿದ್ದಾನೆಂದು' ಕಂಪ್ಲೆಂಟ್ ಕೊಟ್ಟಳು. [...] ಅಪಾರ್ಟ್‌ಮೆಂಟಿನ ಗೋಡೆಗೆ ಗ್ರೋವರ್ ಫೋಟೋ[...] ಇರುವ ದೊಡ್ಡ ವಿನಯಲ್ ಮಾಡಿಸಿ ಸುಳಿವು ನೀಡಿದವ[...] 1 ಲಕ್ಷ ಬಹುಮಾನ ಅಂತಲೂ ಪ್ರಚಾರ ಮಾಡಿಬಿಟ್ಟ[...]

ಸ್ವತಃ ಪೊಲೀಸರೆ ನಂಬಿ ಬೆರಗಾಗುವಂ[...] ಗ್ರೋವರ್‌ನನ್ನು ಹುಡುಕಾಡಿದ್ದಾಳೆ ಈ ಮೈಸೂರ[...] ಮೋನಿಕಾ. ಆದರೆ ಈ ನಾಟಕ ನಾಲ್ಕೇ ದಿನದಲ್ಲಿ ಮುಗಿ[...] ಹೋಯಿತು. ಮುಂಬೈನ ಕ್ರೈಂಬ್ರಾಂಚ್ ಪೊಲೀಸ[...] ಬೇರೆಲ್ಲಾ ಕಡೆ ಗ್ರೋವರ್‌ಗಾಗಿ ಹುಡುಕುತ್ತಿದ್ದಾಗಲ[...] ಈ ಮೋನಿಕಾ ಮೇಲೂ ಒಂದು ಕಣ್ಣಿಟ್ಟಿದ್ದರು. ಹಾ[...] ಒಂದು ದಿನ ಅವಳ ಅಪಾರ್ಟ್‌ಮೆಂಟಿನ ವಾ[...] ಮ್ಯಾನ್‌ನನ್ನು ಪ್ರಶ್ನಿಸುತ್ತಿದ್ದಾಗ ಅವನು ಮೇ 7 ರ ಸಂ[...] ಮೋನಿಕಾ ಇನ್ನೊಬ್ಬ ಯುವಕನ ಜೊತೆ ಸ್ಯಾಂಟ್ರೊ ಕಾರ್‌ನ[...] ಹೋದಳೆಂದು, ಜೊತೆಗೆ ಎರಡು ದೊಡ್ಡ ಬ್ಯಾ[...] ಕಾರ್‌ನೊಳಗೆ ತಂದಿಟ್ಟಿದ್ದರೆಂದು ಹೇಳಿಬಿಟ್ಟ.

ಪೊಲೀಸರಿಗೆ ಇಷ್ಟು ಸಾಕಾಯಿತು ಜೊತೆಗೆ ಅದ[...] ಸಮಯದಲ್ಲಿ ಮೋನಿಕಾ ತಾನಿದ್ದ ಮನೆ ಬಾಡಿಗೆ[...] ದಾದರೂ ತನ್ನ ಖರ್ಚಿನಲ್ಲೇ ರೀಪೇಂಟ್ ಮಾಡಿಸಿದ್ದಳು. ರಕ್ತದ ಕಲೆ ಇತ್ಯಾದಿ ಕಾಣದಿರಲೆಂದು.

ಏನಾದರೇನು ಒಮ್ಮೆ ಪೊಲೀಸರು "ನಿನಗೆ ಡ್ರೈವಿಂ[...] ಬರುತ್ತಾ? ಮೇ 7 ರ ಸಂಜೆ ಕಾರಲ್ಲಿ ಎಲ್ಲಿಗೆ ಹೋಗಿದ್ದ[...] ಅವತ್ತು ನಿನ್ನ ಜೊತೆಗಿದ್ದ ಯುವಕ ಯಾರು, ಕಾ[...] ಯಾರದ್ದು" ಎಂದು ಪ್ರಶ್ನೆ ಮೇಲೆ ಪ್ರಶ್ನೆ ಹಾಕುತ್ತಿದ್ದಂ[...] ಎಲ್ಲಾ ಮುಗಿದುಹೋಯಿತೆಂದು ಮೋನಿಕಾಳಿಗೆ ಗೊತ್ತಾ[...] ಹೋಯಿತು.

ಆಕೆ ಭೋರೆಂದು ಅಳುತ್ತಾ ನೀರಜ್ ಗ್ರೋವರ್[...] ಹತ್ಯಾ ವಿಚಾರ ಬಾಯಿಬಿಟ್ಟಿದ್ದಾಳೆ. ಗ್ರೋವರ್‌ನ ದೇಹ[...] ತುಂಡುಗಳನ್ನು ಎಲ್ಲಿ ಸುಟ್ಟು ಹಾಕಿದ್ದೇವೆಂದು ಆಕೆಯ[...] ಪೊಲೀಸರಿಗೆ ತೋರಿಸಿದ್ದಾಳೆ. ಆದ[...] ಅಷ್ಟೊತ್ತಿಗಾಗಲೇ ಗ್ರೋವರ[...] ಕೊಲೆಯಾಗಿ ಎಂಟು ದಿನಗಳಾಗಿದ್ದ[...] ಗ್ರೋವರ್‌ನ ದೇಹದ ತುಂಡುಗಳನ[...] ಆಗಲೇ ನಾಯಿ ನರಿಗಳು ತಿಂದ[...] ಹಾಕಿದ್ದವು. ಅಲ್ಲಿ ಪೊಲೀಸರಿಗೆ ಸಿಕ್ಕಿದ[...] ಆತನ ತಲೆ ಬುರುಡೆ ಮತ್ತು ಹಲವ[...] ಮೂಳೆಗಳು. ಇದನ್ನು ಕಂಡ[...] ಗ್ರೋವರ್‌ನ ತಂದೆ "ನನ್ನ ಮಗ[...] ದೇಹದ ಒಂದು ಚೂರನ್ನಾದರ[...] ಕೊಡಿ ಅವನ ಅಂತ್ಯ ಸಂಸ್ಕಾರಗಳನ[...] ನಡೆಸೋಕೆ" ಎಂದು ಪೊಲೀಸರಲ್ಲಿ ಕಣ್ಣೀರಿಡಬೇಕಾಯಿತು.



ಮೋನಿಕಾಳ ಗುಟ್ಟು ರಟ್ಟಾಗಿತ್ತು.

ಅದಾದ ಮರುಗಳಿಯಲ್ಲೇ ಕೊಚ್ಚಿಯಲ್ಲಿ ಮ್ಯಾಥ್ಯೂ[...] ಅರೆಸ್ಟಾದ.

'ಮರಿಯಾ ಮೈ ಡಾರ್ಲಿಂಗ್' ಎಂದು ಈಗ ಯಾರು[...] ಮೋನಿಕಾಗೆ ಹೇಳುವಂತಿಲ್ಲ.

■ ಬಿಳಿದಾಳೆ ಈಶ[...]

ಪುತ್ತೂರು: ಜಿಲ್ಲಾ ಪಂಚಾಯತ್ ಸದಸ್ಯ ಇಡ್ಯಾಡಿ ಶಿವಣ್ಣ ಗೌಡನ ರೌಡಿ ಕೃತ್ಯಗಳು

ಗೂಂಡಾಗಿರಿಯನ್ನೇ ವೃತ್ತಿಯಾಗಿರಿಸಿಕೊಂಡವನಿಗೆ ಲೈಸನ್ಸ್ ಸಿಕ್ಕಿದಂತಾಗಿದೆ ಇಲ್ಲಿನ ಪರಿಸ್ಥಿತಿ. ಕೋಳಿ ಅಂಕ, ಮರ ಕಳ್ಳತನ, ಗೂಂಡಾಗಿರಿಯ ಪಂಚಾಯತಿಕೆ ಇತ್ಯಾದಿ ದೋ ದಂಧೆಗಳಲ್ಲಿ ತೊಡಗಿಸಿಕೊಂಡಿದ್ದ ಶಿವಣ್ಣ ಗೌಡ ಇಡ್ಯಾಡಿ ಪುತ್ತೂರು ತಾಲ್ಲೂಕು ಸವಣೂರಿನ ಜಿಲ್ಲಾ ಪಂಚಾಯತ್ ಸದಸ್ಯ. ಈತನ ಈ ಕಲ್ಯಾಣ ಗುಣಗಳೇ ಅರ್ಹತೆಗಳೆಂದು ತಿಳಿದ ಬಿಜೆಪಿಯ ಚೆಡ್ಡಿಗಳು ಈತನನ್ನು ತಮ್ಮ ಕ್ಯಾಂಡಿಡೇಟ್ ಮಾಡಿ ಜಿ.ಪಂ. ಎಲೆಕ್ಷನ್‌ನಲ್ಲಿ ಕಣಕ್ಕಿಳಿಸಿದ್ದರು. ತನ್ನ ಎದುರಾಳಿ ಕಾಂಗ್ರೆಸ್ಸಿನ ಸಿ.ಪಿ ಜಯರಾಂ ಕೇಸರಿ ಧ್ವಜಕ್ಕೆ ಅವಮಾನಿಸಿದರು ಎಂದು ಕೊನೆ ಕ್ಷಣದಲ್ಲಿ ಪುಕಾರೆಬ್ಬಿಸಿದ ಶಿವಣ್ಣ ಹಾಗೂ ಹೀಗೂ ಗೆದ್ದು ಬಂದ. ಮೊದಲೇ ಕ್ರಿಮಿನಲ್ಲುತನವನ್ನೇ ಮೈಗೂಡಿಸಿಕೊಂಡಿದ್ದ ಈತನನ್ನು ಜಿಲ್ಲಾ ಪಂಚಾಯತ್ ಸದಸ್ಯನಾದ ಮೇಲಂತೂ ಹಿಡಿಯುವವರೇ ಇಲ್ಲದಂತಾಗಿ ಹೋಯಿತು. ಕಾಣಿಯೂರು, ದೋಳ್ಪಾಡಿ, ಚಾರ್ವಾಕ, ಮುದ್ವ, ಸವಣೂರು, ನರಿಮೊಗರುಗಳಲೆಲ್ಲಾ ಈತನೇ ತುಂಡರಸನಾಗಿ ಮೆರೆಯುವುದು ಶುರುವಾಯಿತು.

ಈ ಶಿವಣ್ಣ ಸಣ್ಣಪುಟ್ಟ ಆಸಾಮಿಯಲ್ಲ. ಈಗ್ಗೇ ಕೇವಲ 6 ವರ್ಷದ ಹಿಂದಷ್ಟೇ ಉದನೆ ಎಂಬಲ್ಲಿ ಕೋಳಿ ಅಂಕದ ಕೂಟದಲ್ಲಿ ಸಣ್ಣದೊಂದು ತಗಾದೆ ತೆಗೆದು ಎಲ್ಲರೆದುರೇ ಅಮಾಯಕನೋರ್ವನನ್ನು ಇರಿದು ಕೊಂದ ಕೀಚಕನಿವನು. ಇದಕ್ಕಾಗಿ 4 ವರ್ಷ ಜೈಲು ವಾಸ ಕೂಡಾ ಅನುಭವಿಸಿ ಬಂದಿದ್ದಾನೆ. ಶಿವಣ್ಣಗೌಡನ ಪಾಪದ ಪಿಂಡದಂತೇ ಅವನ ಮಕ್ಕಳಾದ ಯತೀಶ ಮತ್ತು ಲೋಕೇಶ ಕೂಡಾ ತಂದೆಯನ್ನು ಮೀರಿಸುವ ನಟೋರಿಯಸ್‌ಗಳಾಗಿ ಹೊರಹೊಮ್ಮಿದ್ದಾರೆ. ಈತನ ಮಗ ಯತೀಶ ಅಲಿಯಾಸ್ ತಮ್ಮು ಎಂಬಾತ ಕಳೆದ ತಿಂಗಳ ಹಿಂದೆಯಷ್ಟೇ ಇಡ್ಯಾಡಿಯಲ್ಲಿ ರಬ್ಬರ್ ಹಾಳೆಗಳನ್ನು ಗೋದಾಮಿನಿಂದ ಕದ್ದು ಬೆಳ್ಳಾರೆಯಲ್ಲಿ ಮಾರಾಟ ಮಾಡುವ ಸಂದರ್ಭದಲ್ಲಿ ಸಿಕ್ಕಿ ಬಿದ್ದಿದ್ದ. ಇದು ಬಹಿರಂಗವಾಗುತ್ತಲೇ ವಿಷ ಕುಡಿದು ಸಾಯಲು ಯತ್ನಿಸಿದ್ದ. ಈತ ಕುಡಿದ ವಿಷ ಕಕ್ಕಿಸಿ ಇವನನ್ನು ಬಚಾವು ಮಾಡಿದ್ದು ಮಾತ್ರ ಈತ ಬಿಜೆಪಿಯೊಂದಿಗೆ ಸೇರಿಕೊಂಡು ಯಾವಾಗಲೂ ವಿರೋಧಿಸುವ ಮುಸ್ಲಿಂ ಹುಡುಗರೆ.

ಆದರೆ ದುರಂತ ಎಂದರೆ, ನಂತರದ ದಿನಗಳಲ್ಲಿ ಅದೇ ಮುಸ್ಲಿಮ್ ಹುಡುಗರ ಮೇಲೆ ಈ ಶಿವಣ್ಣ ಗೌಡನ ಹೀನ ಸಂತತಿ ಸವಣೂರು ವಿದ್ಯಾ ರಶ್ಮಿ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಹಲ್ಲೆ ಮಾಡಿದ್ದೂ ಆಗಿಯಿತು.

'ನಾನು ಜಿಲ್ಲಾ ಪಂಚಾಯತ್ ಸದಸ್ಯ ನನ್ನನ್ನು ಕೇಳುವವರೇ ಇಲ್ಲ' ಎಂಬ ದುರಹಂಕಾರದಿಂದ ಮೆರೆಯುವ ಈತ ಒಂದು ಸಲ ತನ್ನ ಮನೆಯಂಗಳದಲ್ಲೇ ರಾಜಾರೋಷವಾಗಿ ಕೋಳಿ ಅಂಕ ನಡೆಸಿದ್ದ. ಎ.ಎಸ್.ಪಿ ರೈಡ್ ಮಾಡಿ ಈತನನ್ನು ಬಂಧಿಸಿದ್ದಕ್ಕಾಗಿ ನಂತರ 'ಕೋಳಿ ಅಂಕ ಹಿತರಕ್ಷಣಾ ವೇದಿಕೆ'ಯನ್ನೇ ಕಟ್ಟಿ ಅದಕ್ಕೆ ಅಧ್ಯಕ್ಷನಾದ ಭೂಪನೀತ. ಒಂದೆಡೆ ಊರ ಅಮಾಯಕ ಜನರಿಗೆ ತನ್ನ ಗೂಂಡಾ ಪ್ರವೃತ್ತಿಯಿಂದ ಭೀತಿ ಹುಟ್ಟಿಸುತ್ತಾ ಇನ್ನೊಂದುಕಡೆ ತನ್ನ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳದಂತೆ ಪೊಲೀಸರಿಗೂ ಕಾಲಕಾಲಕ್ಕೆ ಕಪ್ಪ ಕಾಣಿಕೆ ಅರ್ಪಿಸುತ್ತಾ ಇಡೀ ಊರನ್ನು ಕೈವಶ ಮಾಡಿಕೊಂಡಿರುವ ಶಿವಣ್ಣ ಗೌಡ ಮೊನ್ನೆ ನಡೆದ ಚುನಾವಣಾ ಸಂದರ್ಭದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೀತಿ ಸಂಹಿತೆಗಳನ್ನೆಲ್ಲಾ ಕ್ಯಾರೆ ಅನ್ನದೆ ಗಾಳಿಗೆ ತೂರಿ ಅಟ್ಟಹಾಸ ಮೆರೆದಿದ್ದಾನೆ.

ಇಡ್ಯಾಡಿ ಮೋನಪ್ಪ ಗೌಡ ಜಿಲ್ಲಾ ಪಂಚಾಯತ್ ಸದಸ್ಯ ಶಿವಣ್ಣ ಗೌಡನ ಚಿಕ್ಕಪ್ಪನ ಮಗ. ಮೇ 16 ರಂದು ಬೆಳಿಗ್ಗೆ ಮತದಾನದಂದು ಶಿವಣ್ಣ ಗೌಡ ತನ್ನ ನೆರೆಯ ಮೋನಪ್ಪ ಗೌಡ ಮತ್ತು ಪುವಣೀಗೌಡರ ಮನೆಗೆ ಬಂದವನೇ ಬಿಜೆಪಿಗೆ ಮತ ಹಾಕಲು ಜೀಪಲ್ಲಿ ಬರುವಂತೆ ಒತ್ತಾಯಿಸಿದ್ದಾನೆ. ಆದರೆ ಮೋನಪ್ಪ ಗೌಡ ಮತ್ತು ಪುವಣಿಗೌಡ ನಿರಾಕರಿಸಿದ್ದಾರೆ. ಇಷ್ಟಕ್ಕೆ ಸಿಟ್ಟಾದ ಶಿವಣ್ಣ ಗೌಡ "ನಿನಗೆ ಪಾಠ ಕಲಿಸುತ್ತೇನೆ" ಎಂದು ಹಲ್ಲು ಕಡಿದು ವಾಪಾಸಾಗಿದ್ದಾನೆ. ಅದೇ ದಿನ ರಾತ್ರಿ ಪುನಃ ಬಂದ ಶಿವಣ್ಣ ಗೌಡ ಸಹೋದರ ಮೋನಪ್ಪ ಗೌಡನನ್ನು ಹೀನಾಮಾನವಾಗಿ ಬೈದದ್ದಲ್ಲದೇ ಅಡಿಕೆ ಸೋಂಟೆಯಿಂದ ಹೊಡೆದು ಹಲ್ಲೆ ಮಾಡಿದ್ದಾನೆ. ಮೋನಪ್ಪ ಗೌಡ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡದ್ದೇ ಶಿವಣ್ಣ ಗೌಡನ ಈ ಸಿಟ್ಟಿಗೆ ಮೂಲ.

ಮರುದಿನ ಬೆಳಿಗ್ಗೆ ಹಿಂದಿನ ರಾತ್ರಿ ನಡೆದದ್ದೆಲ್ಲವನ್ನು ಸ್ಥಳೀಯ ಕಾಂಗ್ರೆಸ್ ಲೀಡರ್ ಎಪಿಎಂಸಿ ಸದಸ್ಯ ಎಡಪತ್ಯ ಚಂದ್ರ ಎಂಬುವರ ಬಳಿ ಮೋನಪ್ಪ ಗೌಡನ ಮನೆಯವರು ತಿಳಿಸಿದ್ದಾರೆ. ಎಡಪತ್ಯ ಚಂದ್ರ ಮೋನಪ್ಪ ಗೌಡನನ್ನು ಆಸ್ಪತ್ರೆಗೆ ದಾಖಲು ಮಾಡಿ ಪೊಲೀಸರಿಗೆ ಕಂಪ್ಲೇಂಟ್ ಕೊಡಲು ಹೊರಟಿದ್ದಾರೆ. ಕಡಬ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ನಂದಕುಮಾರ್ ಮೊದಲೇ ಈ ಶಿವಣ್ಣಗೌಡನ ಚೇಲ. ಕಂಪ್ಲೇಂಟ್ ಕೊಡಲು ಬಂದವರನ್ನೇ ಠಾಣೆಯಲ್ಲಿ ಕೂರಿಸಿ, ಶಿವಣ್ಣಗೌಡನ ಜೊತೆ ಫೋನಲ್ಲಿ ಚರ್ಚಿಸಿ, ನಂತರ ಎಡಪತ್ಯ ಚಂದ್ರರನ್ನು ಕತ್ತೆತ್ತಿಯೂ ನೋಡದೆ ಮರುದಿನ ಬರುವಂತೆ ವಾಪಸ್ ಕಳಿಸಿದ್ದಾನೆ. ಎಡಪತ್ಯ ಚಂದ್ರರು ಮರುದಿನ ಇದನ್ನು ಪುತ್ತೂರು ಸಹಾಯಕ ಕಮೀಷನರ್ ಕಮ್ ಚುನಾವಣಾಧಿಕಾರಿಯ ಗಮನಕ್ಕೂ ತಂದು, ಮತ್ತೆ ಕಂಪ್ಲೇಂಟ್ ಕೊಡಲು ಹೋದರೆ ಠಾಣೆಗೆ ಕುಶಾಲಪ್ಪ ಗೌಡ ಮತ್ತು ಬೆಳ್ತ ಎಂಬ ಹೆಸರಿನ ದಲಿತನ ಮೇಲೆ ಹಲ್ಲೆ ಮಾಡಿದ ಆರೋಪದ ಮೇಲೆ ಅವರ ಮೇಲೆಯೇ ಸುಳ್ಳು ಕೇಸು ದಾಖಲಾಗಿದೆ!

ಗೂಂಡಾಗಿರಿಯನ್ನೇ ವೃತ್ತಿಯಾಗಿಸಿಕೊಂಡು, ತನಗೆ ಸಿಕ್ಕಿರುವ ಅಧಿಕಾರ ಕೂಡ ತನ್ನ ದರ್ಪ–ದೌರ್ಜನ್ಯವನ್ನು ಮೆರೆಯುವುದಕ್ಕೆ ಎಂದು ತಿಳಿದಿರುವ ಶಿವಣ್ಣಗೌಡ ಎಂಬ ರೌಡಿಯ ಬೆಂಗಾವಲಿಗೆ ಪೊಲೀಸರೂ ನಿಂತಿರುವುದು ಒಂದು ದುರಂತ. ಅದಕ್ಕಾಗಿಯೇ ಶಿವಣ್ಣಗೌಡ ಇಷ್ಟಾದ ಮೇಲೂ ಸವಣೂರಿನ ಪೇಟೆಯಲ್ಲಿ ನಿಂತು "ನನ್ನ ಕೂದಲು ಕೊಂಕಿಸಲು ಯಾರಿಂದಲೂ ಸಾಧ್ಯವಿಲ್ಲ" ಎಂದು ಮೀಸೆ ತಿರುವುತ್ತಿದ್ದಾನೆ. ಆದರೆ ಈ ಕಿರಾತಕನಿಂದ ರಕ್ಷಣೆ ಪಡೆಯುವುದು ಹೇಗೆ ಎಂಬ ಚಿಂತೆ ಸವಣೂರಿನ ನಾಗರಿಕರನ್ನು ಕಾಡುತ್ತಿದೆ.

■ ವರದಿಗಾರ[...]

ಮೆಂಟಲ್ ಲೆಕ್ಕ ಫೈನಲ್

ಬೀಸಿದ ಲಾಂಗ್ ರಭಸಕ್ಕೆ ಕಣ್ಣುಗುಡ್ಡೆಗಳೆರಡೂ ಹೊರಬಿದ್ದಿವೆ. ಮುಖ ಪೂರ್ತಿ ಅಡ್ಡಡ್ಡ ಸೀಳಿ ಹೋಗಿದೆ. ಭುಜ, ಎದೆ, ಬೆನ್ನು, ಹೊಟ್ಟೆ, ಕಾಲು ಹೀಗೆ ಕತ್ತರಿಸದ ಜಾಗ ಅಂತ ಉಳಿದಿರಲೇ ಇಲ್ಲ. ದಿಕ್ಕಿಲ್ಲದ ಹೆಣವಾಗಿ ಸಾವನದುರ್ಗದ ಬುಡದಲ್ಲಿ ಬಿದ್ದಿದ್ದ ಮೆಂಟಲ್ ಪ್ರಕಾಶನ ಸಾವಿಗೆ ಅಳಲೆಂದು ಯಾರೂ ಉಳಿದಿರಲಿಲ್ಲ!

ಏಕೆಂದರೆ ಅವನೊಬ್ಬ ಸುಫಾರಿ ಕಿಲ್ಲರ್ ಮತ್ತು ಹುಟ್ಟಾ ತಲೆತಿರುಕ. ಯಾರಿಗೂ ನಿಷ್ಠನಲ್ಲ, ಯಾರಿಗೂ ಮಿತ್ರನಲ್ಲ, ಯಾರನ್ನು ಬೇಕಾದ್ರೂ ನಂಬು ಆದರೆ ಸುಫಾರಿ ಕೊಲೆಗಾರರನ್ನು ಮಾತ್ರ ನಂಬಬೇಡ ಅನ್ನುವುದು ಪಾತಕಲೋಕದ ಅಧಿನಿಯಮ. ಮೆಂಟಲ್ ಪ್ರಕಾಶನ ಮಸ್ತಿ, ಮೋಜು, ಕುದಿತ, ಉಡಾಫೆಗಳನ್ನು ಕಂಡ ಯಾರಿಗಾದರೂ ಆತ ಹೆಚ್ಚು ದಿನ ಬದುಕುಳಿಯಲಾರ ಎಂಬುದು ಮನದಟ್ಟಾಗಿಬಿಡುತ್ತಿತ್ತು.

ಅವನ ಹಾವಳಿಗಳಾದರೂ ಎಂಥಾದ್ದು?

ವಿನಾಕಾರಣ ತುಮಕೂರು ಜೈಲಲ್ಲಿ ಕೊರಂಗುವನ್ನು ತಡವಿಕೊಂಡ. ಆ ಕಾರಣಕ್ಕೆ ಹೋಟ್ಲು ಪ್ರಕಾಶ ಖ್ಯಾತಿಗೆ ಬಂದನಾದರೂ ಅದಕ್ಕೂ ಮುನ್ನ ಆತ ಐದು ಸುಫಾರಿ ಕೊಲೆಗಳನ್ನೆಸಗಿದ್ದ. ಜೊತೆಗಿದ್ದೇ ತನ್ನ ಗುರು ಗೋವಿಂದನ ವಿರುದ್ಧ ಕತ್ತಿ ಮಸೆದ. ಗೋವಿಂದನ ಕೊಲೆಯಾದ ಮರುದಿನವೇ ಕ್ವಾಲೀಸ್ ಸಮೇತ ಮಗುಚಿಬಿದ್ದು ಬೆನ್ನು ಮೂಳೆ ಮುರಿದುಕೊಂಡ. ಜೊತೆಗಿದ್ದ ನೀರಾನೆ ತಮ್ಮ ಬಸವ ಆತನ ಕಣ್ಣೆದುರೇ ಅದೇ ಅಪಘಾತದಲ್ಲಿ ಸತ್ತು ಹೋಗಿದ್ದ. ಹಾಗೆ ಅಪಘಾತಕ್ಕೆ ಸಿಲುಕಿ ಹಾಸಿಗೆ ಹಿಡಿದವನು ಕನಿಷ್ಠ ಓಡಾಡುವ ಶಕ್ತಿ ಬರುವವರೆಗಾದರೂ ತೆಪ್ಪಗಿದ್ದಿದ್ದರೆ ಮೆಂಟಲ್ ಬದುಕಿರುತ್ತಿದ್ದ. ಆದರೆ ಹುಟ್ಟು ಗುಣ ಬಿಡಲಿಲ್ಲ, ಕೊಲೆಯಾದ ಗೋವಿಂದನ ಜಾಗಕ್ಕೆ ತಾನು ಬರಬೇಕೆಂದು ದುರಾಶೆ ಬಿದ್ದವನು ಗೋವಿಂದನಂತೆ ತನ್ನ ಜೊತೆಗಿದ್ದ ಶಿಷ್ಯರನ್ನೇ ಟೆರ್ರರೈಸ್ ಮಾಡಲು ಹೋಗಿ ಇಲ್ಲಿಗೆ ವಾರದ ಹಿಂದೆ ತನ್ನ ಮತ್ತೊಬ್ಬ ಶಿಷ್ಯ ಎಮ್ಮೆಮಂಜನ ಮುಖಾಮೂತಿ ಚಚ್ಚಿದ. ಮತ್ತೊಬ್ಬ ಶಿಷ್ಯ ಗೊರಿಲ್ಲ ಶ್ರೀಧರನ ಮೇಲೂ ವಿನಾಕಾರಣ ಕೈ ಮಾಡಿದ. ಅಷ್ಟಕ್ಕೆ ತೃಪ್ತನಾಗದೇ ಮತ್ತೊಬ್ಬ ಶಿಷ್ಯ ಕೋಳಿ ರಮೇಶನನ್ನು ಹಿಡಿದು ದನಕ್ಕೆ ಬಡಿದಂತೆ ಬಡಿಯುತ್ತಿದ್ದ. ಪದೇ ಪದೇ ಆತನ ಕೋಳಿ ಅಂಗಡಿಗೆ ನುಗ್ಗಿದ್ದೇ ಗಲ್ಲದಿಂದ ದುಡ್ಡು ಕಿತ್ತೊಯ್ಯುತ್ತಿದ್ದ.



ಕೋಳಿ ರಮೇಶ, ಎಮ್ಮೆ ಮಂಜ, ಗೊರಿಲ್ಲಾ

ಬಹುಶಃ ಅದು ಮೆಂಟಲ್ ಪ್ರಕಾಶನ ಪಾಪದ ಕೊಡ ತುಂಬಿ ಬಂದಿದ್ದರ ಮುನ್ಸೂಚನೆಯಾಗಿರಬೇಕು. ರೌಡಿಯೊಬ್ಬ ತನ್ನ ಶಿಷ್ಯರನ್ನೇ ಹಿಂಸಿಸುತ್ತಿದ್ದಾನೆಂಬ ಸಣ್ಣ ಮಾಹಿತಿ ಸಿಕ್ಕರೂ ಸಾಕು ಅಲ್ಲಿಗೆ ಆತನ ಆಯಸ್ಸು ಮುಗಿದಂತೆಯೇ. ಗೋವಿಂದನ ಪಟ್ಟವನ್ನು ಆಕ್ರಮಿಸಲು ಹೋಗಿ ಆತನ ಹಾಗೇ ಶಿಷ್ಯರನ್ನೇ ಟೆರ್ರರೈಸ್ ಮಾಡಿದ ಮೆಂಟ್ಲು ಪ್ರಕಾಶನಿಗೆ ತಾನೂ ಕೂಡಾ ಗೋವಿಂದನಂತೆ ತನ್ನ ಶಿಷ್ಯರ ಕೈಯಲ್ಲೇ ಹೆಣವಾಗುತ್ತೇನೆಂಬುದು ಗೊತ್ತಾಗಬೇಕಿತ್ತು.

ಹೆಸರೇ ಮೆಂಟಲ್ ಅಂತಿರುವಾಗ ಪ್ರಕಾಶ ಹೇಗೆ ತಾನೇ ವಿವೇಕಿಯಾಗುತ್ತಾನೆ? ಆತನ ಜಾತಕ ಪೂರ್ತಿ ಈ ಥರದ ಮೆಂಟಲ್ ಹಾವಳಿಗಳಿಂದಲೇ ತುಂಬಿ ಹೋಗಿರುವಾಗ ಅದೂ ಈ ವಯಸ್ಸಿನಲ್ಲಿ ಹೇಗೆ ಸರಿ ಹೋಗಲು ಸಾಧ್ಯ?

ವಿಜಯನಗರ, ಮಾರೇನಹಳ್ಳಿ, ತಿಮ್ಮೇನಹಳ್ಳಿ, ಕಾಮಾಕ್ಷಿಪಾಳ್ಯ, ಮೂಡಲಪಾಳ್ಯ, ಸುಂಕದಕಟ್ಟೆ, ಕಮಲಾನಗರ, ವೃಷಭಾವತಿನಗರದ ಬಹುತೇಕ ಪಡ್ಡೆ ಹುಡುಗರಂತೆ ರೌಡಿಸಂನ ಆಕರ್ಷಣೆಗೆ ಬಿದ್ದು ಲಾಂಗ್ ಹಿಡಿದವನು ಮೆಂಟಲ್ ಪ್ರಕಾಶ. ಗೋವಿಂದರಾಜನಗರದ ಸರ್ವಜ್ಞ ಸ್ಕೂಲು ಹೇಗೆ ತಿಮ್ಮೇನಹಳ್ಳಿಯ ಸೂರಿ, ಗೋವಿಂದ, ತಮ್ಮಯ್ಯರಂಥವರನ್ನು ಹುಟ್ಟುಹಾಕಿತೋ ಹಾಗೇ ಮೆಂಟ್ಲು ಕೂಡ ಇದೇ ಸ್ಕೂಲಿನಿಂದ ಹೊರಬಿದ್ದ. ಈತನ ತಂದೆ ಗಂಗಪ್ಪ ಕಾಮಾಕ್ಷಿಪಾಳ್ಯದ ಕೆರೆ ಪಕ್ಕ ಇವತ್ತಿಗೂ ಪುಟ್ಟ ಹೋಟೆಲೊಂದನ್ನು ನಡೆಸಿಕೊಂಡಿದ್ದಾನೆ. ಒಬ್ಬನೇ ಮಗ. ಇದ್ದೊಬ್ಬ ಅಕ್ಕನನ್ನು ವರ್ಷದ ಹಿಂದಷ್ಟೇ ಮದುವೆ ಮಾಡಿಕೊಟ್ಟಿದ್ದಾರೆ. ಹೆತ್ತ ತಂದೆ ತಾಯಿಗೆ ಪ್ರಕಾಶ್ ಕೊಡುತ್ತಿದ್ದ ಕಿರುಕುಳ ಬಹುಶಃ ಬೇರಾವ ತಂದೆ ತಾಯಿಂದಿರೂ ಅನುಭವಿಸಿರಲಿಕ್ಕಿಲ್ಲ.

ಎಸ್ಸೆಸ್ಸೆಲ್ಸಿ ಫೇಲಾಗಿ ಸ್ಕೂಲಿನಿಂದ ಹೊರಬಿದ್ದವನು ಗೋವಿಂದನ ಪಡೆಯಲ್ಲಿ ಕಾಣಿಸಿಕೊಂಡ. ಆವತ್ತು ಗೋವಿಂದನ ಗ್ಯಾಂಗ್ ಲೇಟೆಸ್ಟ್ ಮಂಜನನ್ನು ಮುಗಿಸಿದ ಘಟನೆಯಿಂದ ಪ್ರಕಾಶ್ ಅದೆಂಥಾ ಹುಚ್ಚಿಗೆ ಬಿದ್ದನೆಂದರೆ ಮಚ್ಚನನ್ನು ಮುಗಿಸೋದೇ ನಾನು ಎಂದು ಕಂಡಕಂಡಲ್ಲಿ ಲಾಂಗ್ ಚಮಕಾಯಿಸಿದ್ದ. ಆಗಷ್ಟೇ ಕೇಬಲ್ ದಂಧೆಗೆ ಕೈಯಿಟ್ಟಿದ್ದ ಮಚ್ಚನಿಗೂ ದಾಸರಹಳ್ಳಿಯ ಕೇಬಲ್ ಶ್ರೀಧರನಿಗೂ ಕೇಬಲ್ ಸಂಬಂಧಿ ಜಿದ್ದಾ ಜಿದ್ದಿಯಿತ್ತು, ಅದೊಮ್ಮೆ ನೀರಾನೆ ತಮ್ಮ ಬಸವನನ್ನು ಬೆನ್ನಟ್ಟಿ ಬಂದ ಚಲಪತಿ ಮತ್ತಿಕುಮಾರ, ಮೆಂಟಲ್ ಪ್ರಸಾದಿ ಮುಂತಾದ ಪಡ್ಡೆ ಕೇಡಿ ಹಿಂಡು ಶ್ರೀಧರನ ಮಾರುತಿ ಎಂಟರ್ ಪ್ರೈಸಸ್‌ನ ಗ್ಲಾಸ್ ಚಿಂದಿಯೆಬ್ಬಿಸಿದ ಘಟನೆಯೊಂದೇ ಒಂದು ಡಜನ್ ಕೊಲೆಗಳಿಗೆ ಕಾರಣವಾದದ್ದು ವಿಕಟವಾದರೂ ಸತ್ಯ.

ತಮ್ಮಯ್ಯನ ಹತ್ಯೆಯ ನಂತರ ತಿಮ್ಮೇನಹಳ್ಳಿಯ ಹುಡುಗರಲ್ಲಿ ಒಡಕು ಬಂದು ಗೋವಿಂದನ ಗ್ಯಾಂಗ್ ಇಬ್ಭಾಗವಾಗಿತ್ತು. ಸೂರಿ, ಮೆಂಟ್ಲು ಪ್ರಕಾಶ, ಗೊರಿಲ್ಲಾ ಶ್ರೀಧರ, ನೀರಾನೆ ತಮ್ಮ ಬಸವ ಒಂದು ಗ್ಯಾಂಗಾದರೆ, ಗೋವಿಂದನ ಜೊತೆ ನಿಂತಿದ್ದು ವಿಶ್ವ, ಎಮ್ಮೆ ಚಂದ್ರು, ಎಮ್ಮೆ ಮಂಜ, ಕಬಾಬ್ ಮಂಜ ಮತ್ತು ಕಾವೇರಿಪುರದ ಮಪಡಿ ಸೋಮ. ಈ ಪೈಕಿ ಮಿಕ್ಕೆಲ್ಲರಿಗಿಂತಲೂ ವಿಲಕ್ಷಣವಾಗಿ ಬೆಳೆದವನು ಮೆಂಟಲ್.

2001ರಲ್ಲಿ ಮಚ್ಚನ ಶಿಷ್ಯರೆಂಬ ಒಂದೇ ಕಾರಣಕ್ಕೆ ಕನಕ ಶ್ರೀಧರ ಮತ್ತು ನಂಜುಂಡ ಎಂಬಿಬ್ಬರನ್ನು ಸೆಲೆಕ್ಟ್ ಬೇಕರಿಗೆ ತುರುಕಿಕೊಂಡಿದ್ದೇ ಮೆಂಟ್ಲು ಮತ್ತು ವಿಶ್ವ ಮುಖಾಮೂತಿ ಕುಯ್ದುಬಿಟ್ಟರು. ಇದು ಪ್ರಕಾಶನ ಮೊದಲ ಕ್ರೈಮ್. ಇತ್ತ ಇಡೀ ಗೋವಿಂದನ ಗ್ಯಾಂಗ್ ತಮ್ಮಯ್ಯನ ಕೊಲೆ ಕೇಸಲ್ಲಿ ಜೈಲು ಪಾಲಾಗಿದ್ದೇ ಪ್ರಕಾಶ ಎರಡು ಅನಾಹುತಕಾರಿ ಸುಪಾರಿ ಹತ್ಯೆಗಳಿಗೆ ಕೈಯಿಟ್ಟ. ಈ ಪೈಕಿ ಮಾಲೂರಿನ ಹೋಟೆಲ್ ಮಾಲೀಕ ದಯಾನಂದ ಶೆಟ್ಟಿಯ ಹತ್ಯೆಗೆ ಆತನ ಪತ್ನಿಯಿಂದಲೇ ಪ್ರಕಾಶ ಸುಪಾರಿ ಪಡೆದಿದ್ದ. ಲಗ್ಗೆರೆಯಲ್ಲಿ ಪ್ರಿಂಟಿಂಗ್ ಪ್ರೆಸ್ ಇಟ್ಟುಕೊಂಡಿದ್ದ ಫೈನಾನ್ಸಿಯರ್ ಒಬ್ಬನನ್ನು ಕೊಂದು ಕುಣಿಗಲ್‌ನ ರಸ್ತೆ ಬದಿಯಲ್ಲಿ ಸುಟ್ಟುಹಾಕಿದ್ದ. ಇದೇ ಹೊತ್ತಿಗೆ ಕೇಬಲ್ ಶ್ರೀಧರನ ಅಡ್ಡೆಯ ಮೇಲೆ ದಾಳಿ ನಡೆಸಿದ್ದ ಮತ್ತಿಕುಮಾರ ಮತ್ತು ಗಾಯತ್ರಿನಗರದ ಪ್ರಸಾದಿಯ ವಿರುದ್ಧ ಕೇಬಲ್ ಶ್ರೀಧರನಿಂದ ಸುಫಾರಿ ಪಡೆದು 2006ರ ಆಗಸ್ಟ್‌ನಲ್ಲಿ ಮತ್ತಿಕುಮಾರನನ್ನು ಕೊಂದುಬಿಟ್ಟ.


ಆವತ್ತು ಬಸವೇಶ್ವರ ನಗರದ ಸಾಯಿ ಕಾಲೇಜ್ ಎದುರು ಮತ್ತಿಕುಮಾರನನ್ನು ಮುಗಿಸಿದ ಪ್ರಕಾಶನ ಜೊತೆಗೆ ನೀರಾನೆ ಬಸವ, ದಾಸರಹಳ್ಳಿ ರವಿ, ಗೊರಿಲ್ಲಾ ಶ್ರೀಧರ, ಕುರ್ಫ್ ಹೇಮಂತ, ಕೇಬಲ್ ಶ್ರೀಧರ ಮುಂತಾದ ಪಾಖಂಡಿಗಳ ಹಿಂಡೇ ಇತ್ತು. ಇದಾದ ಮೂರೇ ತಿಂಗಳಿಗೆ ಕುಣಿಗಲ್ ಅಮೃತ್ತೂರಿನ ಕಲ್ಲಹಳ್ಳಿಗೆ ನುಗ್ಗಿದ ಪ್ರಕಾಶ, ಗಾಯತ್ರಿನಗರದ ಲಕ್ಕಿ, ಕ್ಯಾಪ್ಟನ್ ರಾಜ, ಗೊರಿಲ್ಲಾ ಶ್ರೀಧರ, ಕುರ್ಫ್ ಹೇಮಂತ ಮತ್ತು ಶ್ರೀಧರ ಸೇರಿಕೊಂಡು ಪ್ರಸಾದಿಯನ್ನು ಕೊಂದು ಬಿಟ್ಟರು.

ಪ್ರಸಾದಿ ಗಾಯತ್ರಿನಗರದ ಬ್ರೇಕ್ ಜಗ್ಗಿಯ ಖಾಸಾ ತಮ್ಮ. ಗಾಯತ್ರಿನಗರದ ಲಕ್ಕಿ ಮತ್ತು ಕ್ಯಾಪ್ಟನ್ ರಾಜರಿಗೆ ಪ್ರಸಾದಿಯ ಜೊತೆಗಿದ್ದ ಹಳೇ ಜಿದ್ದಿಗೆ ಕೇಬಲ್ ಶ್ರೀಧರ ಮತ್ತು ಹೋಟ್ಲು ಪ್ರಕಾಶ ಸಾಥ್ ಕೊಟ್ಟಿದ್ದೇ ಪ್ರಸಾದಿಯ ಅಂತ್ಯಕ್ಕೆ ಕಾರಣವಾಗಿತ್ತು.

ಅಲ್ಲಿಗೆ ಕೇಬಲ್ ಶ್ರೀಧರನ ಜಿದ್ದೇನೋ ಮುಗಿದಿತ್ತಾದರೂ ಪ್ರಸಾದಿಯ ಅಣ್ಣ ಬ್ರೇಕ್ ಜಗ್ಗಿ ಗಾಯಗೊಂಡ ಚಿರತೆಯಂತೆ ಪ್ರತೀಕಾರಕ್ಕೆ ನಿಂತು ಬಿಟ್ಟಿದ್ದ. ಇಷ್ಟಕ್ಕೆ ಸುಮ್ಮನಾಗದ ಹೋಟ್ಲು ಪ್ರಕಾಶ ಪ್ರಸಾದಿಯ ಶಿಷ್ಯ ಲೋಕಿ ಆಲಿಯಾಸ್ ಲೊಡ್ಡೆಯನ್ನು 2007ರಲ್ಲಿ ಜಾಲಹಳ್ಳಿ ಕ್ರಾಸ್‌ನಲ್ಲಿ ಅಟ್ಟಾಡಿಸಿ ಕೊಂದು ಹಾಕಿದ್ದ.

ಮೊದಲು ಎರಡು ಸುಫಾರಿ ಕೊಲೆ, ಅನಂತರ ಮತ್ತಿಕುಮಾರನ ಕಗ್ಗೊಲೆ, ತದನಂತರ ಪ್ರಸಾದಿ ಹತ್ಯೆ ಅನಂತರ ಲೊಡ್ಡೆ ಲೋಕಿಯ ಕೊಲೆಯಿಂದಾಗಿ ಮೆಂಟ್ಲು ಪ್ರಕಾಶನ ಹೆಸರಿನ ಭೀಕರತೆ ಹೆಚ್ಚಿತು. ಗೋವಿಂದನ ಜೊತೆಗಿದ್ದೇ ಆತನ ಗೆಳೆಯ ಬ್ರೇಕ್ ಜಗ್ಗಿಯ ತಮ್ಮನನ್ನು ಪ್ರಕಾಶ ಮುಗಿಸಿದ್ದು ಎಂಥವರಿಗೂ ಅಚ್ಚರಿ ಹುಟ್ಟಿಸಿತ್ತು. ಈ ಎಲ್ಲಾ ಸುಫಾರಿ ಕೊಲೆಗಳಿಂದಾಗಿ 2001ರಿಂದ 2007ರ ತನಕ ಮೆಂಟಲ್‌ನ ಬಹುಪಾಲು ಆಯುಸ್ಸು ಜೈಲಲ್ಲಿ ಕಳೆದುಹೋಗಿತ್ತು, ತುಮಕೂರು ಜೈಲಲ್ಲಿ ಕೊರಂಗು ಮೇಲೆ ವಿನಾಕಾರಣ ಕ್ಯಾತೆ ತೆಗೆದು ಜಗಳಕ್ಕೆ ಬಿದ್ದು ಫಜೀತಿ ತಂದುಕೊಂಡಿದ್ದು ಪ್ರಕಾಶನ ಮೆಂಟಲ್ ಬುದ್ದಿಗೆ ಮತ್ತೊಂದು ಉದಾಹರಣೆಯಷ್ಟೆ.

ಮೇಲುನೋಟಕ್ಕಿದು ಮೆಂಟಲ್ ಬುದ್ಧಿಯಂತೆ ಕಂಡರೂ ಆಳದಲ್ಲಿ ಆತನ ಲಾಭದ ಲೆಕ್ಕಾಚಾರವಿತ್ತು. ಪ್ರಚಾರಕ್ಕೆ ಪ್ರಚಾರ, ಹೆಸರಿಗೆ ಹೆಸರು ಬರುತ್ತದೆಯೆಂದರೆ ಪ್ರಕಾಶ ಎಂಥ ದುಸ್ಸಾಹಸಕ್ಕೂ ಅಣಿಯಾಗಿದ್ದ. ಆ ತನಕ ತಾನು ಗೋವಿಂದನ ಶಿಷ್ಯ ಎಂದೇ ಹೇಳಿ



ಕೊಂಡಿದ್ದ ಪ್ರಕಾಶ ಕೊರಂಗು ಘಟನೆಯ ನಂತರ ಒಳಗೊಳಗೆ ಗೋವಿಂದನ ವಿರುದ್ಧ ಕತ್ತಿ ಮಸೆಯುತ್ತಿದ್ದ. ಅದಕ್ಕೆ ಕಾರಣ ಗೊರಿಲ್ಲಾ.

ಯಾವುದೋ ದುಡ್ಡಿನ ವಿಷಯಕ್ಕೆ ತನ್ನ ಶಿಷ್ಯ ಗೊರಿಲ್ಲಾನನ್ನು ಹಿಡಿದು ಬಡಿದಿದ್ದ ಗೋವಿಂದನ ವಿರುದ್ಧ ಪ್ರಕಾಶ ಜೈಲಲ್ಲೇ ಕೂತು ಸ್ಕೆಚ್ ಹಾಕಿದ್ದ. ಅದನ್ನು ಅರಿಯದೇ ಹೋದ ಗೋವಿಂದ ಅನ್ಯಾಯವಾಗಿ ತನ್ನ ಜೊತೆಗಿದ್ದ ಹುಡುಗರ ಕೈಯಲ್ಲೇ ಕೊಲೆಯಾಗಿ ಹೋದ.

ಬಹುಶಃ ಗೋವಿಂದನ ಸ್ಥಾನದಲ್ಲಿ ತಾನು ವಿಜಯನಗರವನ್ನಾಳುವುದು ಪ್ರಕಾಶನ ಆಲೋಚನೆಯಾಗಿತ್ತೇನೋ. ಎಲ್ಲಿ ಗೋವಿಂದನ ಕೇಸಲ್ಲಿ ಪೊಲೀಸರು ತನ್ನನ್ನು ಹಿಡಿಯುತ್ತಾರೋ ಎಂದು ಕ್ವಾಲೀಸ್ ಗಾಡಿಯೊಂದರಲ್ಲಿ ಪರಾರಿಯಾಗುತ್ತಿದ್ದ ಪ್ರಕಾಶನ ಜೊತೆ ಆವತ್ತು ನೀರಾನೆ ತಮ್ಮ ಬಸವನೂ ಇದ್ದ. ಕಂಠ ಮಟ್ಟ ಕುಡಿದು ಡ್ರೈವಿಂಗ್ ಮಾಡುತ್ತಿದ್ದ ಪ್ರಕಾಶ ಸ್ಟೈಲ್ ತೋರಿಸಲು ಹೋಗಿ ಅನಾಹುತ ಮಾಡಿಕೊಂಡ. ಗಾಡಿ ದಿಬ್ಬವೊಂದಕ್ಕೆ ಗುದ್ದಿ ಮಗುಚಿ ಬಿದ್ದೇಟಿಗೆ ನೀರಾನೆ ತಮ್ಮ ಬಸವ ಸ್ಥಳದಲ್ಲೇ ಸತ್ತರೆ, ಪ್ರಕಾಶನ ಪಕ್ಕೆಲುಬೇ ಮುರಿದು ಹೋಗಿತ್ತು. ಹಾಗೇ ಗಾಯಗೊಂಡು ತಿಂಗಳುಗಟ್ಟಲೇ ಆಸ್ಪತ್ರೆಯಲ್ಲಿ ಮಲಗೆದ್ದು ಬಂದವನಿಗೆ ಅದೇನು ಕೇಡು ಬಡಿದಿತ್ತೋ. ಯಾವುದೋ ರೋಲ್‌ಕಾಲ್ ದುಡ್ಡನ್ನು ತನಗೆ ತಲುಪಿಸಲಿಲ್ಲ ಎಂದು ವಿನಾಕಾರಣ ತನ್ನ ಶಿಷ್ಯ ಕೋಳಿ ರಮೇಶನನ್ನು ಪೀಡಿಸತೊಡಗಿದ. ಪದೇ ಪದೇ ಆತನ ಕೋಳಿ ಅಂಗಡಿಗೆ ನುಗ್ಗಿ ಗಲ್ಲದ ದುಡ್ಡನ್ನು ಕಿತ್ತೊಯ್ಯುತ್ತಿದ್ದ. ಇದಿಷ್ಟೇ ಅಲ್ಲದೆ ವಾರದ ಹಿಂದಷ್ಟೇ ತನ್ನ ಮತ್ತೊಬ್ಬ ಶಿಷ್ಯ ಎಮ್ಮೆ ಮಂಜನನ್ನು ಹಿಡಿದು ಮುಖಾಮೂತಿ ಚಚ್ಚಿದ. ಆತನಕ ಚೆಡ್ಡಿ ದೋಸ್ತಿಯಾಗಿದ್ದ ಗೋರಿಲ್ಲಾ ಶ್ರೀಧರನನ್ನೂ ಹಿಡಿದು ಬಡಿದಿದ್ದ. ಅಲ್ಲಿಗೆ ಆತನ ಪಾಪದ ಕೊಡ ತುಂಬಿರಬೇಕು. ಕೊಲೆಯಾಗುವುದಕ್ಕೂ ವಾರದ ಹಿಂದೆ ತನ್ನ ಅಪ್ಪ ಮತ್ತು ಅಮ್ಮನನ್ನು ಹೀನಾಮಾನ ಹೊಡೆದು ಹೋಟೆಲಲ್ಲಿ ಕೂಡಿಟ್ಟಿದ್ದ.

ತನ್ನ ಮನೆ ಮುಂದೆ ಯಾರೇ ಅಪರಿಚಿತರು ಕಂಡರೂ ಅವರು ತನ್ನ ದುಷ್ಮನ್ ಕಳಿಸಿದವರೆಂದೇ ಆಲೋಚಿಸಿ ಓಡಿದು ಥರಗುಟ್ಟಲಾರಂಭಿಸಿದ್ದ.

ಇದಕ್ಕೇ ಸೀರ್ಝುರ್ ಹೇಮಂತ ಕಾಯುತ್ತಿದ್ದ. ಇಲ್ಲಿಗೆ ವರ್ಷದ ಹಿಂದಷ್ಟೇ ತನ್ನನ್ನು ಬಸವನ ಜೊತೆ ಸೇರಿಕೊಂಡು ದಾಸರಹಳ್ಳಿಯುದ್ದಕ್ಕೂ ಅಟ್ಟಾಡಿಸಿ ಹೊಡೆದಿದ್ದ ಪ್ರಕಾಶನನ್ನು ಕೊಂದೇ ತೀರುತ್ತೇನೆಂದು ಶಪಥಗೈದಿದ್ದ ಹೇಮಂತನ ಬೆನ್ನಿಗೆ ಈ ಬಾರಿ ಕೇಬಲ್ ಶ್ರೀಧರನೇ ನಿಂತಿದ್ದ. ಅದಕ್ಕೂ ಕೇಬಲ್ಲೇ ಮೂಲವಾಗಿತ್ತು, ಯಾವ ಪ್ರಕಾಶನನ್ನು ಛೂಬಿಟ್ಟು ಮತ್ತಿಕುಮಾರ ಮತ್ತು ಪ್ರಸಾದಿಯನ್ನು ಕೇಬಲ್ ಶ್ರೀಧರ ಮುಗಿಸಿದ್ದನೋ ಅದೇ ಪ್ರಕಾಶ ಶ್ರೀಧರನ ವಿರುದ್ಧ ತಿರುಗಿಬಿದ್ದ. ಜೈಲಿನಿಂದ ಬಂದವನೇ ಶ್ರೀಧರನನ್ನು ಅಟಕಾಯಿಸಿಕೊಂಡು "ನಿನ್ನಿಂದಾಗಿ ಮತ್ತಿಕುಮಾರ್ ಮತ್ತು ಪ್ರಸಾದಿ ಇಬ್ಬರನ್ನೂ ಕೊಂದೆ. ಅರ್ಧ ಆಯಸ್ಸು ಜೈಲಲ್ಲೇ ಕಳೆದೆ. ನೀನು ಮಾತ್ರ ಕೇಬಲ್ ಕಾಸು ತಿಂದು ಆರಾಮವಾಗಿದ್ದೀಯ ತಾನೇ? ರಂಗನಾಥಪುರದ ಮುನ್ನೂರು ಕೇಬಲ್ ಕನೆಕ್ಷನ್‌ಗಳನ್ನು ನನಗೇ ಬಿಟ್ಟುಕೊಡು" ಎಂದಿದ್ದಾನೆ ಪ್ರಕಾಶ. ಜಗ್ಗದ ಶ್ರೀಧರನ ಕೇಬಲ್ ವೈರುಗಳನ್ನೆಲ್ಲ ಬಸವ ಮತ್ತು ಪ್ರಕಾಶ ಸೇರಿ ಕತ್ತರಿಸಿ ಎಸೆದಿದ್ದಾರೆ. ಪಾಖಂಡಿ ಶ್ರೀಧರನ ಕೇಬಲ್ ಮೇಲೆ ದಾಳಿ ನಡೆಸಿದ ಎರಡೇ ತಿಂಗಳಿಗೆ ತನ್ನ ಕತೆಯೇ ಮುಗಿದುಹೋಗಲಿದೆ ಎಂಬುದು ಮೆಂಟಲ್‌ಗೆಲ್ಲಿ ಗೊತ್ತಾಗಬೇಕು?


ಯಾವತ್ತು ಕೋಳಿ ರಮೇಶನ ಮೇಲೆ ಪ್ರಕಾಶ ಕೈ ಮಾಡಿದ ಸುದ್ದಿ ಬಂತೋ ಸೀರ್ಝುರ್ ಹೇಮಂತ ಎದ್ದು ನಿಂತಿದ್ದಾನೆ. ಕೇಬಲ್ ಶ್ರೀಧರನ ದುಡ್ಡು ಹರಿದಿದೆ. ಆತನಕ ಶಿಷ್ಯನಾಗಿದ್ದ ಕೋಳಿ ರಮೇಶ ತನಗೆ ಹೆಣ್ಣು ನೋಡಲು ಬಾ ಎಂದು ಉಪಾಯವಾಗಿ ಪ್ರಕಾಶನನ್ನು ತನ್ನ ಬೈಕ್‌ಗೆ ಹತ್ತಿಸಿಕೊಂಡು ಸಾವನದುರ್ಗಕ್ಕೆ ಕರೆತಂದಿದ್ದಾನೆ. ಅದು 2008 ಮೇ 22 ಸಂಜೆ. ಇನ್ನೇನು ಜೋಡುಕಟ್ಟೆ ಹೊರಳಬೇಕೆನ್ನುವಷ್ಟರಲ್ಲಿ ಕೋಳಿ ರಮೇಶ ಒಂಬೈಕ್ ನಿಲ್ಲಿಸಿದ್ದಾನೆ. ಕಾಲ ಮಿಂಚಿ ಹೋಗಿತ್ತು. ಎದುರಿಗಿದ್ದ ಸ್ಯಾಂಟ್ರೋ, ಮತ್ತೊಂದು ಸುಮೋದಿಂದ ಇಳಿದ ಸೀರ್ಝುರ್ ಹೇಮಂತ, ದಡಿಯಾ ಸೀನ, ಕೇಬಲ್ ಶ್ರೀಧರರ ಕೈಯಲ್ಲಿ ಲಾಂಗ್‌ಗಳು. ಕ್ಷಣಾರ್ಧದಲ್ಲಿ ಲಾಂಗ್‌ಗಳು ಕೆಲಸ ಪೂರೈಸಿಯಾಗಿತ್ತು. ಮೆಂಟಲ್ ಹೆಣವಾಗಿದ್ದ.

ಕೈಗೆತ್ತಿಕೊಂಡರೆ ಲಾಂಗು ನಶೆ ಕೊಡುತ್ತದೆ, ರೋಲ್‌ಕಾಲ್ ಹುಟ್ಟುತ್ತದೆ, ಮೊಬೈಲು, ಕಾರು, ಶಿಷ್ಯರು, ಹುಡುಗಿಯರು, ಹೆಸರು ಎಲ್ಲವೂ ಗಿಟ್ಟುತ್ತದೆ ನಿಜ. ಆದರೆ ಅಂತ್ಯದಲ್ಲಿ ದಕ್ಕುವ ಕೂಲಿಯೆಂದರೆ ದುಃಖ ಮತ್ತು ಕಣ್ಣೀರು ಮಾತ್ರ. ಮೆಂಟಲ್ ಇದಕ್ಕೊಂದು ಉದಾಹರಣೆಯಷ್ಟೇ.

■ ರಾ. ಸೋಮನಾಥ್

ಕೊಲೆಯಾಗುವ ಮುನ್ನ ಗೋವಿಂದ ಹೇಳಿದ್ದು


ಆ ಸೀರ್ಝುರ್ ಹೇಮಂತ ಇಷ್ಟರಲ್ಲೇ ಹೋಟ್ಲು ಪ್ರಕಾಶನ ಮೇಲೆ ಅಟ್ಯಾಕ್ ಮಾಡ್ತಾನೆ [illegible]



[illegible] ಮಾತುಗಳು. ತನ್ನ ವಿರುದ್ಧ [illegible] ಒಳಗೊಳಗೇ ಕತ್ತಿ ಮಸೆಯುತ್ತಿರುವ ಬಗ್ಗೆ [illegible] ಮಾಹಿತಿಯಿದ್ದಿರಬೇಕು. ತನ್ನ ವಿರುದ್ಧ ಅವರಿಬ್ಬರೂ [illegible] ಬೀಳದ ಹಾಗೆ ಬಿರುಕನ್ನು ಮುಚ್ಚುವ ಉದ್ದೇಶದಿಂದಲೇ [illegible] ಕೊನೇ ಗಳಿಗೆಯಲ್ಲಿ ತೇಪೆ ಹಾಕಲು ಯತ್ನಿಸಿದ್ದ. [illegible] ಮೆಂಟಲ್ ಪ್ರಕಾಶನ ಕಿವಿಗಿದು ಮುಟ್ಟುವ ಮೊದಲೇ ಗೋವಿಂದ ಕೊಲೆಯಾಗಿತ್ತು.

ಸಣ್ಣದೊಂದು ಮನಸ್ತಾಪ, ಕಿತ್ತಾಟ, ವೈಮನಸ್ಸು ಯಾವುದೂ [illegible] ನಿಷ್ಕಾರಣವಾಗಿ ಗೋವಿಂದನ ದುಷ್ಮನ್‌ಗಳ ಜೊತೆ [illegible] ಪ್ರಕಾಶನ ವಿಕೃತಿಯೇ ಅಂಥಾದ್ದು. ಆತನ ದುಷ್ಮನಿಗೂ ದೋಸ್ತಿಗೂ ಕಾರಣವೇ ಬೇಕಿರಲಿಲ್ಲ. [illegible] ಸೀರ್ಝುರ್ ಹೇಮಂತನ ಜೊತೆ ಸೇರಿ ಮತ್ತಿಕುಮಾರನನ್ನು ಕೊಂದನೋ ಅದೇ ಹೇಮಂತನನ್ನು [illegible] ಕಾರಣಕ್ಕೆ ದುಷ್ಮನ್ ಮಾಡಿಕೊಂಡ. ಯಾವ ಕೇಬಲ್ ಶ್ರೀಧರನಿಗಾಗಿ ಎರಡು ಭೀಕರ ಹತ್ಯೆಗಳನ್ನು [illegible] ಎಸಗಿದ್ದನೋ ಅದೇ ಶ್ರೀಧರನ ಕೇಬಲ್‌ಗೆ ಪಾಲುದಾರಿಕೆ ಕೇಳಿ ದುಷ್ಮನಿ ಕಟ್ಟಿಕೊಂಡ. ಬ್ರೇಕ್ ಜಗ್ಗಿ [illegible] ಸೇರಿದಂತೆ ತನ್ನ ವಿರುದ್ಧ ಇಷ್ಟೆಲ್ಲ ಶಕ್ತಿಗಳು ಕೈಜೋಡಿಸಿದ್ದು ಗೊತ್ತಾಗಿಯೂ ತನ್ನ ಜೊತೆಗಿದ್ದವರನ್ನೇ [illegible] ಹೊಡೆಯಲಾರಂಭಿಸಿದ. ಹೀಗಿರುವಾಗ ಬದುಕುಳಿದಾನಾ?

ಎರಡು ಸಾವಿನ ಸುತ್ತ



ಮೈ ಮುರ್ದು ಮಗ್ಲು ಹೊಳ್ಳೀ ಎದ್ದೇಳ್ಬೋ ಬೇಡ್ವೋ ಎನ್ನೋಂತೆ ನಿದ್ದೆಯ ಜೋಪಡಿಯಿಂದ ಹೊರಬರುವ ಆಕಾಶ್ದಾಗಿನ ಸೂರಣ್ಣ ಸುರಪುರ ತಾಲೂಕಿನ ಕಾಮನಟಗಿ ಕ್ಯಾಂಪಿಗೆ ಬರೋದಿಕ್ಕೆ ಅರರ ಮೇಲೆ ಅರ್ಧ ತಾಸಾಗಿತ್ತು. ಕುಡ್ದ ಅಮಲ್ನಾಗೆ ರಾತ್ರಿಯೆಲ್ಲಾ ಪದ್ದಾಡ್ತಿದ್ದ ಬಾಜುಮನಿ ಪೂಜಾರಿಗೆ ಇನ್ನೂ ಎಚ್ಚರಾಗಿಲ್ಲ, ಗೊರ್ಕೆ ಹೊಡೀತಿದ್ದ. ಪೂಜಾರಿಯ ಎರಡ್ನೇ ಹೆಂಡ್ತಿ ಮಗ್ಳು ರೇಖಾ ಬಾರ್ಗೆ ಹಿಡ್ದು ಅಕಳ ಕಸ ಬಳೀತಿದ್ಳು. ಎದರ್ಮನಿ ಸುಬ್ಬಲಕ್ಷ್ಮಿ ಅಂಗಳಕ್ಕೆ ನೀರ್ಚ್ಚಿದ್ದು ರಂಗೋಲಿ ಇಕ್ತಿದ್ಳು. ಅಗಸರ ಬಸ್ಯ ಇಸ್ತ್ರಿ ಪೆಟ್ಟಿಗ್ಯಾಗ ಬೆಂಕಿ ಹಾಕಿ, ಬಟ್ಟೆ ತಿಕ್ತಿದ್ದ. ಹೋಟೆಲು ಪರಸಣ್ಣ ಒಂದ್ರೊಂಡು ಚಾ ಸೋಸಿ ಖಾಲಿ ಮಾಡಿದ್ದ. ಸರ್ವಜನಾಂಗದ ಸಮ್ಮಿಶ್ರದಂತಿದ್ದ ಓಣಿ ಎಚ್ಚರವಾಗಿತ್ತು. ಮನಿ ಮುಂದ ನಿಂತು ಬಲಗಡಿಗೆ ಕಣ್ಣುಬಿಟ್ಟರೆ ಬ್ರಾಮುಣ್ರ ಭರ್ಮವ್ವನ ಮನೆ. ಗಾಯತ್ರಿ, ಗಂಗೋತ್ರಿ, ಮಂತ್ರಗಳ ಸುಪ್ರಭಾತವಿರದ ಭರ್ಮವ್ವನ ಬದ್ಕು ಸಗಣಿ ಕಸ ಬಳಿಯೋದರಿಂದ ಕಣ್ತೇರೀತಿತ್ತು.

ನಾಷ್ಟ ಮುಗ್ಸಿ ನೀರು ಕುಡಿಯೋಷ್ಟರಲ್ಲಿ ದಿಢೀರ್ನೆ ಪ್ರತ್ಯಕ್ಷನಾದ ಮಲ್ಲಣ್ಣಾ ದೇಸಾಯಿಯ ಹಿರೇಮಗ ಸಿದ್ದ "ಇವೊತ್ತು ಇಂಡಿಯಾ ವರ್ಸಸ್ ಆಸ್ಟ್ರೇಲಿಯಾ ಬನ್ನಿ ಸಾರ್" ಎಂದ. ಹುಣಸಗಿಯ ಭಾನುವಾರದ ಸಂತೀ ಮಾಡ್ಲಿಕ್ಕೆ ಕೈಚೀಲ ಹಿಡ್ಕೊಂಡೊರಟಿದ್ದ ಬ್ರಾಮುಣ್ರ ಪುಟ್ಟಣ್ಣಾ ಟಂ ಟಂ ಬರೋವರ್ಗೂ ಇಣುಕಿ ತಿಣ್ಕಿ ಕ್ರಿಕೆಟು ನೋಡ್ತಿದ್ದ. ಇತ್ತ ಮಲ್ಲಣ್ಣ ದೇಸಾಯಿಯ ಮನೇಲಿ ಇಂಡಿಯಾದ ಬೋಲರ್ಸುಗಳು ಅಪೂರ್ಪದ ಕಸ್ರತ್ತು ನಡೆಸಿರೋದು ಬಿತ್ತರವಾಗ್ತಿದ್ರೆ, ಬ್ರಾಮುಣ್ರ ಭರ್ಮವ್ವನ ಮನಿಯಾಗ ಯಾರಿಗೂ ಕಾಣದ ಕಸರತ್ತು ನಡೆದಿತ್ತು.


ಬ್ರಾಮುಣ್ರ ಭರ್ಮವ್ವನದು ಹಿರಿಯ ಜೀವವಾದ್ರು, ಕೂಲಿ ಮಾಡೋದು ತಪ್ಪಿರ್ಲಿಲ್ಲ. ಗ್ರಾಮ ಪಂಚಾಯ್ತೀಲಿ ಪಂಪ್ ಆಪರೇಟರ್ ಕೆಲ್ಸ ಮಾಡ್ತಿದ್ದ ಗಂಡ ಸಿಂಗಣ್ಣ ಮುತ್ತಾ ಹುಳ ಮುಟ್ಟಿ ಸತ್ಮೇಲೆ. ಪವ್ವಿ ವಿಜಿ ಎಂಬ ಎರಡು ಹೆಣ್ಣು ಹೈಕ್ಳುಗಳ ಕಟ್ಕಕೊಂಡು ಗಂಡು ದುಡ್ದಾಂಗೆ ದುಡಿತಿದ್ಳು. ವತಾರೆ ಕೆಲಸಕೋದ್ರೆ ಸಂಜೀ ಕಢೀಕೆ ಮನೇಗೆ ಬರೋದು. ದ್ಯಾವ್ರಂಗಿದ್ದ ಭರ್ಮವ್ವ ತಾನಾಯ್ತು, ತನ್ನ ದಗದ ಆಯ್ತು ಯಾರ ತಂಟೆಗೂ ಹೋಗ್ತಿರ್ಲಿಲ್ಲ. ಗಂಡ ಸತ್ಮೇಲೆ ಗಂಡು ಮಕ್ಳಿಲ್ಲದ ಮನೆಗೆ ಮನಿಯಾಳ್ತಾನಕ್ಕು ಆತು. ವರ್ದಕ್ಷಣೆ ಇಲ್ದೆ ಮಗಳ್ನ ಖರ್ಚು ಮಾಡ್ದಾಂಗಾಯ್ತು ಅಂತ ಅಣ್ಣನ ಮನಿಗೋಗಿ ಅತ್ತು ಕರ್ದ ಭರ್ಮವ್ವ, ಅಣ್ಣನ ಮಗ ಪುಟ್ಟಣ್ಣನ ಹಿಡ್ದು ತಂದ್ಳು. ಪುಟ್ಟಣ್ಣನ ಬಣ್ಣ ಕಬ್ಬಣದ್ದಾದ್ರು ಗುಣ ಚಿನ್ನದಂತಾದ್ದು. ಅನುಕಂಪದ ಮ್ಯಾಲೆ ಮಾವನ ಪಂಪ್ ಆಪ್ರೇಟರ್ ಕೆಲ್ಸ ಪುಟ್ಟಣ್ಣನ ಜೋಳಿಗೆಗೆ ಬಿತ್ತು! ಪುಟ್ಟಣ್ಣನ ಕಂಡ್ರೆ ಉರ್ದು ಬೀಳ್ತಿದ್ದ ಪವ್ವಿ, ಮದ್ವೆ ಆಗ್ಲೀಕೆ ಸುತಾರಾಮ್ ಒಪ್ಕೋಳ್ಲಿಲ್ಲ. ಸಣ್ಣಾಕಿದ್ದಾಗಿನಿಂದಲೇ ಓಣಿಯ ಅಗಸರ ಬಸ್ಯನ್ನ ಸಿನ್ಸಿಯರ್ರಾಗಿ ಪಿರುತಿಸ್ತಿದ್ದ ಪವ್ವಿ ಮನಸ್ನಲ್ಲಿ ಪುಟ್ಟಣ್ಣ ವಿಲನ್ ಆಗಿದ್ದ. ಕಾಲ್ಮರಿ ತಗೋಂಡು ನೆತ್ತಿ ಮೇಲಿನ ಕೂದ್ಲು ಉದುರೋ ತರ ಬಾರ್ಸಿದಾಂಗೆ ಮಾತಾಡಿದ್ರು, ಪುಟ್ಟಣ್ಣ ಅತ್ತಿ ಮೇಲಿನ ಪ್ರೀತಿಯಿಂದಾಗಿ ಪವ್ವಿ ಮಾತಿಗೆ ತಲೆ ಕೆಡಿಸ್ಕೋಂಡಿರ್ಲಿಲ್ಲ.

ಪ್ರಾಣಕ್ಕಿಂತ ಹೆಚ್ಚಾಗಿ ಪಿರುತಿಸ್ತಿದ್ದ ಬಸ್ಯ, ಪವ್ವೀನ ರಮ್ಸಿ "ಸದ್ಯದ ಕಿರಿಕಿರಿ ತಪ್ಪಿದ್ರ ಸಾಕು ವೀಳ್ಯ ಕೊಡೋ ದಿಕ್ಕೆ ಒಪ್ಕೋಂಡ್ಬಿಡು ಎಂದಿದ್ದ" ವೀಳ್ಯ ಕೊಟ್ಟದ್ದು ಆಯ್ತು, ಮದುವೆ ಹತ್ತಿರ ಬಂದದ್ದೂ ಆಯ್ತು. ಓಣೀಲಿ ಜಿಂಕೆಮರಿಯಾಂಗೆ ಜಿಗ್ದಾಡಿಕೊಂಡು, ಎಲ್ಲಾರ್ನೂ ನಗಿಸ್ಕೊಂಡು ಓಡಾಡ್ತಿದ್ದ ಪವ್ವಿ ಮನ್ಸಿಗೆ ಮದ್ವೆ ಹತ್ತಿರ ಆದಾಂಗೆಲ್ಲ ದಿಗಿಲಾಯ್ತು. ದೇಹ ಸಣ್ಣಗಾಯ್ತು. ಯಾವತ್ತಿನಂತೆ ಪಡಸಾಲಿಗೆ ಕುಕ್ಕರ ಕಾಲ್ನಲ್ಲಿ ಕುಂತಿದ್ದ ಭರ್ಮವ್ವ ರೊಟ್ಟಿಗೆ ಪುಂದಿ ಪಲ್ಯ ಸವರ್ಕೊಂಡು ಕಳೆದುಕೊಂಡು ಉಳಿದಿರೋ ಹಲ್ಲುಗಳಲ್ಲಿ ಚಪ್ಪರಿಸಿ ವತಾರನೇ ಕೆಲಸ್ಕ ಹೋದ್ಳು. ಪುಟ್ಟಣ್ಣಾ ಹುಣಸಗಿ ಸಂತಿಗೋದ. ಪವ್ವಿ ಒಂಟಿಯಾದ್ಳು. ಮನ್ಸು ಹುಚ್ಚು ಕುದ್ರೀಯಂತೆ ಓಡ್ಲಿಕ್ಕೆ ಶುರು ಮಾಡ್ತು. ಕುಲಕರ್ಣ್ಯಾರ ಅಂಗಡಿ ಬಲಿ ಮಾತಿಗಿಳಿದಿದ್ದ ಬಸ್ಯಾನಿಗೆ ಫೋನಚ್ಚಿ ಮನೆಗೆ ಕರೆಸಿಕೊಂಡ್ಳು.

ಜೊತೆಯಾದ ಹಕ್ಕಿಗಳು ಇದ್ದ ಗೂಡನ್ನ ವದ್ದು ಹಾರಿಹೋಗಿ, ಹೊಸಗೂಡನ್ನ ಕಟ್ಟಿಕೊಳ್ಳುವ ಪಿಲಾನಿನಲ್ಲಿ ಮೈಮರೆತ್ಳು. ಆಗಂತುಕನಂತೆ ವಕ್ಕರಿಸಿದ ಪವ್ವಿ ಕಾಕ ರವಿ ಮುತ್ತಾ ಇಬ್ರಿಗೂ ನಾಕೇಟು ಬಿಗಿದ. "ಹೊತ್ತು ಮುಣ್ಗೋದರೊಳಗೆ ನಿಮ್ಗೊಂದ್ಗತಿ ಕಾಣಿಸ್ತೇನೆ" ಎಂದು ಕಾಲ್ಕಿತ್ತ. ಊರಿಗೆಲ್ಲಾ ಸುದ್ದಿ ಬಹಿರಂಗಾಗಿ ಅನಾವೃತ ಆದೀತಂಥ ಬಸ್ಯಾ ಓಡಿಹೋದ. ಸರೀಕ್ರಿಗೆಲ್ಲಾ ಈ ವಿಷ್ಯ ಹೇಳಿ ಕಾಕ ನನ್ನ ಮರ್ಯಾದೆ ಕಳೀತಾನಂಥ, ಚಿಮಣಿ ಎಣ್ಣೆವಾಸ್ನೆಗೆ ತಲೆ ಕೊಡುವ್ತಿದ್ದ ಪವ್ವಿ, ಕವಳಿಗೆ ಹೋದಿಯೋ ಎಣ್ಣೆ ಕುಡ್ದು ಬಾಜು ಮನಿ ಭಾಗವ್ವನತ್ರ ಮಾತನಾಡ್ತ ನೊರಿ ಕಾರ್ಕೊಂಡು ನೆಲಕ್ಕೊರಗಿದ್ಳು.

ಪವ್ವಿ ಎಣ್ಣೆ ಕುಡ್ದಿರೋ ಸುದ್ದಿ ತಿಳ್ದಾ ಹೆಣ್ಣು ಹೈಕ್ಳುಗಳು ಗಾಬರಿಯಿಂದ ಓಡಾಡ್ತಿದ್ದವು. ಮಲ್ಲಣ್ಣಾ ದೇಸಾಯಿ ಮನೇಲಿ

ಪಿರಾಣಕ್ಕಿಂತ ಹೆಚ್ಚಾಗಿ ಪಿರೂತಿಸ್ತಿದ್ದ ಗೆಳತಿ ಹೆಣದ ಮುಂದೆ ಕೂತು ಗೋಳಿಡ್ಲಿಕ್ಕೂ ಆಗದ, ಕೊನಿಸಲ ಅವ್ಳ ಮಾರೀನ ಕಣ್ತುಂಬ ತುಂಬ್ಕೋಳ್ಲಿಕ್ಕಾಗದ ಬಸ್ಯ, ಮಾದಿಗರ ಓಣಿ ಬಲಿಯಿರೋ ಕೆಸರಿನ ಹೊಂಡದಂತಾಗಿದ್ದ. ಗೆಳೆಯರಿಗೆ ಫೋನಚ್ಚಿದ ಬಸ್ಯ "ಜೀವ ತೆಗೆಯೋ ಜಾತಿ ಸಂಪ್ರದಾಯ್ವ ಹುಟ್ಟುಹಾಕಿದ ಮಿಟ್ಟಿ ಮಕ್ಳಿಗೆ ಕಾಲ್ಮರೀ ತಗೊಂಡು ಏಟ್ಹಾಕಬೇಕು" ಎಂದು ರೇಗಿದ.



ಬರಲಿದೆಯೇ ದ್ರೌಪದಿ ಸ್ಥಿತಿ?

ಮಾರ್ಚ್ 21 ಹಾಗೂ 22 ರಂದು ಮೈಸೂರಿನ ರಾಜ್ಯ ಸಂಪನ್ಮೂಲ ಕೇಂದ್ರ ಹಾಗೂ ವಿವೇಕಾನಂದ ಯೂತ್ ಮೂವ್ ಮೆಂಟ್ ಸಂಸ್ಥೆ ಜಂಟಿಯಾಗಿ 'ಹೆಣ್ಣು ಭ್ರೂಣ ಹತ್ಯೆಯ ವಿಚಾರ ಮಂಥನ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಹೆಣ್ಣು ಭ್ರೂಣಹತ್ಯೆಯ ಮೇಲೆ ಬೆಳಕು ಚೆಲ್ಲುವುದು ಹಾಗೂ ಅದನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮದ ಕುರಿತು ಚರ್ಚಿಸಲು ಇಂತಹ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕದ ಹೆಚ್ಚಿನ ಜಿಲ್ಲೆಗಳಿಂದಲೂ ಆರೋಗ್ಯ, ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಇಲಾಖೆ, ಪತ್ರಿಕೆ ಮತ್ತು ಹಲವಾರು ಎನ್.ಜಿ.ಓ. ಸಂಸ್ಥೆಗಳಿಂದಲೂ ಪ್ರತಿನಿಧಿಗಳನ್ನು ಈ ಸಭೆಗೆ ಆಹ್ವಾನಿಸಲಾಗಿತ್ತು.

ಇತ್ತೀಚೆಗೆ ಮಂಡ್ಯದಲ್ಲಿ ನಡೆದ ಭ್ರೂಣ ಪರೀಕ್ಷೆ ಹಾಗೂ ಆ ಪರೀಕ್ಷೆಯಲ್ಲಿ ಹೆಣ್ಣೆಂದು ವರದಿಯಾಗಿದ್ದ ಮಗು ಗರ್ಭಪಾತ ಮಾಡಿಸಿದಾಗ ಗಂಡಾಗಿದ್ದುದನ್ನು ತಿಳಿದು ಭ್ರೂಣ ಪರೀಕ್ಷೆ ಮತ್ತು ಹೆಣ್ಣು ಭ್ರೂಣ ಹತ್ಯೆಯ ಕುರಿತು ರೈತ ಸಂಘದ ಮಹಿಳೆಯರು ಹೋರಾಡಿದ್ದನ್ನು ರೈತ ಸಂಘದ ಸುನಂದಾ ಜಯರಾಂ ವಿವರಿಸಿದರು. ಹೆಣ್ಣು ಭ್ರೂಣ ಹತ್ಯೆಯ ಕುರಿತು ಹಲವಾರು ವಿಷಯಗಳು ಈ ಮಂಥನದಲ್ಲಿ ಹೊರಬಂದವು.

ಇಂದು ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿಯೇ ಹೆಣ್ಣು ಭ್ರೂಣಹತ್ಯೆ ದೊಡ್ಡ ಪಿಡುಗಾಗಿದೆ. UNICEF ವರದಿಯಂತೆ ಲಿಂಗಪತ್ತೆಯ ತಾಂತ್ರಿಕತೆಯಿಂದ ಪ್ರತಿನಿತ್ಯ ತಾಯಿಯ ಗರ್ಭಕೋಶದಲ್ಲಿಯೇ ಸುಮಾರು ಏಳು ಸಾವಿರ ಹೆಣ್ಣು ಭ್ರೂಣಗಳ ಹತ್ಯೆಯಾಗುತ್ತಿದೆ! ಇಂಡಿಯಾದಲ್ಲಿ ಮಕ್ಕಳ ಸಂಖ್ಯೆ ಅತ್ಯಧಿಕವಾಗಿದೆ. ಹದಿನೆಂಟು ವರ್ಷಕ್ಕಿಂತ ಕೆಳಗಿನ ಪ್ರಾಯದವರು ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟಿದ್ದಾರೆ. ಆರು ವರ್ಷದೊಳಗಿನ ಮಕ್ಕಳಲ್ಲಿ ಹೆಣ್ಣು ಗಂಡುಗಳ ಅನುಪಾತ 1991 ರಲ್ಲಿ 1000ಕ್ಕೆ 945ಇದ್ದದ್ದು 2001ರಲ್ಲಿ 927ಕ್ಕೆ ಇಳಿದಿದೆ. ಆರ್ಥಿಕವಾಗಿ ಮುಂದುವರಿದಿರುವ ಹರಿಯಾಣ ರಾಜ್ಯದಲ್ಲಿ ಈ ಅನುಪಾತ 1000 ಕ್ಕೆ 820 ಆದರೆ ರಾಜಸ್ಥಾನದಲ್ಲಿ ಒಂದು ಸಾವಿರಕ್ಕೆ ಕೇವಲ ಆರುನೂರು ಹೆಣ್ಣು ಮಕ್ಕಳಷ್ಟೆ ಇದ್ದಾರೆ! ಅಂದಿನ ಉದ್ಘಾಟಕರಾದ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ನಿವೃತ್ತ ನ್ಯಾಯಮೂರ್ತಿ ಎಸ್.ಆರ್. ನಾಯಕ್ ಅವರು ಹೇಳಿದ ಮಾತು ಉಲ್ಲೇಖಾರ್ಹವಾಗಿದೆ. "ಇಂದು ಹರಿಯಾಣ ಮುಂತಾದ ರಾಜ್ಯಗಳಲ್ಲಿ ಹೆಣ್ಣು ಭ್ರೂಣಹತ್ಯೆಯಿಂದಾಗಿ ಯುವಕರಿಗೆ ಮದುವೆಯಾಗಲು ವಧುಗಳು ದೊರೆಯುತ್ತಿಲ್ಲ ಹೀಗಾಗಿ ಅವರು ಕೇರಳದಂತಹ ದೂರದ ರಾಜ್ಯದಿಂದಲೂ ವಧುಗಳನ್ನು ಆಮದು ಮಾಡಿಕೊಳ್ಳಲಾರಂಭಿಸಿದ್ದಾರೆ. ತೀರಾ ಬೇರೆಯಾಗಿರುವ ಭಾಷೆ, ಸಂಸ್ಕೃತಿಯ ಇಬ್ಬರು ಒಂದುಗೂಡಿ ಬದುಕುವುದು ಹೇಗೆ? ದಾಂಪತ್ಯದಲ್ಲಿ ಪರಸ್ಪರರನ್ನು ಅರ್ಥಮಾಡಿಕೊಂಡು ವಿಚಾರ ವಿನಿಮಯ ಮಾಡಿ ಒಟ್ಟಾಗಿ ಬದುಕಬೇಕಾದವರು ಈ ಭಿನ್ನತೆಯಿಂದಾಗಿ ಒಂದುಗೂಡಿ ಬದುಕಲು ಸಾಧ್ಯವೇ?" ಎಂಬ ಪ್ರಶ್ನೆಯನ್ನು ಮುಂದಿಟ್ಟು ಹೆಣ್ಣು ಭ್ರೂಣಹತ್ಯೆಯ ಅಪಾಯವನ್ನು ತಿಳಿಸಿದರು. (ಕೇರಳದಿಂದ ಉತ್ತರದ ರಾಜ್ಯಗಳಿಗೆ ವಧುಗಳಾಗಿ ಹೋದ 25 ಮಹಿಳೆಯರಲ್ಲಿ 20 ಮಹಿಳೆಯರೂ ಹಿಂತಿರುಗಿದ್ದಾರೆಂದು ವರದಿಯಾಗಿದೆ).

ಕರ್ನಾಟಕದ ವಿಷಯಕ್ಕೆ ಬಂದರೆ ಬೆಳಗಾವಿಯಲ್ಲಿ ಅತ್ಯಧಿಕ ಹೆಣ್ಣುಭ್ರೂಣ ಹತ್ಯೆಗಳು ನಡೆಯುತ್ತಿದ್ದು ಅನುಪಾತ 1000 ಕ್ಕೆ 924 ಇದ್ದು ಬಾಗಲಕೋಟೆಯಂತಹ ಹಿಂದುಳಿದ ಜಿಲ್ಲೆಯಲ್ಲಿ 1000 ಕ್ಕೆ 939 ರಷ್ಟಿದೆ. ಈ ಜಿಲ್ಲೆ ಬೇರೆ ವಿಷಯಗಳಲ್ಲಿ ಹಿಂದುಳಿದಿದ್ದರೂ ಹೆಣ್ಣು ಭ್ರೂಣವನ್ನು ಇಲ್ಲವಾಗಿಸುವಲ್ಲಿ ಮುಂದುವರಿದಿದೆ! ಒಂದು ನೆಮ್ಮದಿಯ ವಿಷಯವೆಂದರೆ ವಿದ್ಯಾವಂತರ ನಾಡಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಹಾಸನ ಜಿಲ್ಲೆಯಲ್ಲಿ ಈ ಅನುಪಾತ ಕ್ರಮವಾಗಿ 1000:1025, 1000:1050 ಹಾಗೂ 1000:1030 ಎಂದು ವರದಿಯಾಗಿದೆ. ಈ ಮೂರು ಜಿಲ್ಲೆಗಳಲ್ಲಿ ಈ ರಾಕ್ಷಸ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿಲ್ಲ ಎಂಬುದು ಕೊಂಚ ನೆಮ್ಮದಿ ನೀಡುತ್ತಿದೆ.

ಲಿಂಗ ಅನುಪಾತದ ಈ ಏರುಪೇರಿಗೆ ಹೆಣ್ಣು ಭ್ರೂಣಹತ್ಯೆ ಒಂದೇ ಕಾರಣವಲ್ಲ, ಹೆಣ್ಣುಮಕ್ಕಳನ್ನು ಹುಟ್ಟನಿಂದಲೇ ನಿರ್ಲಕ್ಷಿಸಲಾಗುತ್ತಿದೆ. ಗಂಡು ಮಗುವಿಗೆ ಕಾಯಿಲೆಯಾದರೆ ಕೂಡಲೇ ಎತ್ತಿಕೊಂಡು ಡಾಕ್ಟರ್ ಬಳಿಗೆ ಓಡುವವರು ಹೆಣ್ಣುಮಗುವಿಗೆ ಅಂತಹ ಉತ್ತಮ ಚಿಕಿತ್ಸೆಯನ್ನೇ ನೀಡುವುದಿಲ್ಲ, ಆಹಾರದಲ್ಲೂ ತಾರತಮ್ಯ ಮಾಡಲಾಗುತ್ತಿದೆ. ಒಂದರಿಂದ ಐದು ವರ್ಷಗಳೊಳಗಿನ ಹೆಣ್ಣುಮಕ್ಕಳ ಮರಣವು ಗಂಡುಮಕ್ಕಳ ಮರಣಕ್ಕಿಂತ ಶೇ. 43 ರಷ್ಟು ಅಧಿಕವಾಗಿದೆ. ಪ್ರತಿ ವರ್ಷವೂ ಲಿಂಗ ಪರೀಕ್ಷೆಯಿಂದಾಗಿ ಐದು ಲಕ್ಷ ಹೆಣ್ಣುಮಕ್ಕಳ ಜನನವನ್ನು ತಡೆಯಲಾಗುತ್ತದೆ! ಲಿಂಗ ಪತ್ತೆಯ ಬಳಿಕದ ಗರ್ಭಪಾತದಿಂದ ಸಾವಿರ ಗಟ್ಟಲೆ ತಾಯಂದಿರೂ ಮರಣವನ್ನಪ್ಪುತ್ತಾರೆ.

ನಮ್ಮ ಜನರು ಎಷ್ಟೊಂದು ಹೃದಯಹೀನರಾಗಿದ್ದಾರೆ ನೋಡಿ. ಈ ಬಾರಿಯ ಮಹಿಳಾ ದಿನಾಚರಣೆಯಂದು ಧಾರವಾಡದಲ್ಲಿ ಸ್ತ್ರೀ ಶೋಷಣೆಯ ಒಂದು ಘಟನೆ ಬೆಳಕಿಗೆ ಬಂದಿದೆ. ಮಾರ್ಚ್ 9 ರ ಕನ್ನಡ ಪ್ರಭ ಪತ್ರಿಕೆಯಲ್ಲಿ ಈ ವರದಿ ಪ್ರಕಟವಾಗಿದೆ. ಧಾರವಾಡದ ಶ್ರೀನಿವಾಸ ದೇಶಪಾಂಡೆ ಎಂಬಾತನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಬ್ಯಾಡಗಿ ಶಾಖೆಯ ಸಹಾಯಕ ವ್ಯವಸ್ಥಾಪಕ. ಈತನ ತಂದೆ ರಕ್ಷಣಾ ಇಲಾಖೆಯ ಮಾಜಿ ಅಧಿಕಾರಿ. ತನ್ನ ಹೆಂಡತಿ ಹೆಣ್ಣುಮಗುವನ್ನು ಹೆತ್ತಿದ್ದಾಳೆಂಬ ಕಾರಣಕ್ಕಾಗಿ ಈ ಬ್ಯಾಂಕ್ ಅಧಿಕಾರಿ ಆಕೆಯನ್ನು ಮನೆಯಿಂದ

ಹೆಣ್ಣುಗಂಡುಗಳ ಈ ಅನುಪಾತದ ಏರುಪೇರಿನಿಂದಾಗಿ ಮುಂದೊಂದು ದಿನ ಬಹುಪತಿತ್ವ ಪ್ರಾರಂಭವಾಗಬಹುದು. ದ್ರೌಪದಿಯ ಉದಾಹರಣೆಯೇ ಇದೆಯಲ್ಲ? ಅದು ಮಾತ್ರವಲ್ಲ ಮಹಿಳೆಯರ ಮೇಲೆ ಆಕ್ರಮಣ, ಅತ್ಯಾಚಾರ ಮುಂತಾದ ಪ್ರಕರಣಗಳು ಮತ್ತಷ್ಟು ಅಧಿಕಗೊಂಡು ಮಹಿಳೆಯರಿಗೆ ರಕ್ಷಣೆಯೇ ಇಲ್ಲದಂತಾಗಬಹುದು. ●●

ಕತೆ

ಕೈದಾಳ ಕೃಷ್ಣಮೂರ್ತಿ

ಕ್ರೆಟು ನೋಡುವಲ್ಲಿ ಯಂಗೇಜಾಗಿದ್ದ ಓಣಿ ಹುಡುಗ್ರು, ಕಾಮನಟುಗಿಯ ಬಿಬಿಸಿ ನ್ಯೂಸ್ ಏಜೆಂಟ್‌ರ್ನ ಹಿಡ್ದು ಸುದ್ದಿ ತಿಳಿಸ್ಕೊಟ್ರಿದ್ರು. ಹುಣಸಗಿ ಸರ್ಕಾರೀ ದವಾಖಾನಿ ಸೇರಿ ಅರ್ಧ ತಾಸಿಗೆ ಪವ್ವಿ ಸತ್ತ ಸುದ್ದಿ ಊರಿಗೆ ತಲುಪ್ತು. ಸುದ್ದಿ ತಿಳ್ದ ಓಣಿಯ ಮಾರಕ್ಕ, ಶಾರದಕ್ಕ, ಸಣ್ಣೀರವ್ವ ಗುಂಪು ಕಟ್ಕೊಂಡು ಗುಸು ಗುಸ್ಸಂಥ ಪವ್ವಿ ಗುಣಗಾನ ಮಾಡ್ತಿದ್ರು. ಕುಲಕರ್ಣ್ಯಾರ ಮಂದಿ ಊರಾಚೆಯ ಹಣಮಂದಿ ಬಳಿಯಿರುವ ಬ್ರಾಮುಣ್ರ ಹೆಣ ಹೂಳೋ ಜಾಗ್ದಾಗ ಕಟ್ಟಿಗೆ ಒಟ್ಟಿ ಸಜ್ಜಾದ್ರು. ಹೆಣ ಹೊತ್ತ ಟಂ ಟಂ ಊರಿಗೆ ಬರ್ತಿದ್ದಾಂಗೆ ಹೆಣದ ಮಾರೀನ ಯಾರ್ರೂ ತೋರ್ಸದೆ ಕಟ್ಟಿಗೆ ಕಿಚ್ಚಿನತ್ರ ಹೋಯ್ದು ಬೆಂಕಿಯಿಟ್ರು. ಕೊನಿ ಸಲ ಹೆಣದ ಮಾರಿ ನೋಡ್ಕೋಳ್ಳಸ ಎನ್ನೋ ಓಣಿ ಹೆಂಗಸ್ರ ಆಸಿಗೆ ಬೆಂಕಿ ಬಿತ್ತು.

ಮನಿ ಮುಂದ ಚಪ್ರ ಹಾಕ್ಸಿ ಅಗ್ನಿಕುಂಡಕ್ಕೆ ತುಪ್ಪ ಸುರಿಬೇಕಿದ್ದ ಭರ್ಮವ್ವ, ಮಗಳ ಹೆಣಕ್ಕೆ ಬೆಂಕಿಯಿಟ್ಟು ಹಾಡ್ಯಾಡ್ಕೊಂಡು ಅಳತಿದ್ಲು. ಭರ್ಮವ್ವನ ರೋಧನಕ್ಕೆ ದನಿಗೂಡಿಸಿದ ಹೆಂಗುಸ್ರು "ಬ್ರಾಮುಣ್ರ ಜಾತೀಯಂದ್ರೆ ಆದೇನ್ ಜಾತೀನ? ಹೆಣದ್ಮಾರಿ ತೋರಿಸ್ದೇನೆ ಬೆಂಕಿ ಇಟ್ಟು ಹಾಳಾದ್ ಮುಂಡೇವು"ಎಂದು ಬೈದ್ರು. ವತಾರೆ ಕೆಲಸಕ್ಹೋಗಿ ಹಾಸಿಗೆ ಸಿಕ್ರೆ ಸಾಕು ಕುಂದಿ ಉಲ್ಡಿಬಿಟ್ರಾಯ್ತುಂಥ ಬರ್ತಿದ್ದ ಹೆಂಗುಸ್ರು ವಿಷ್ಯ ತಿಳ್ದು ಭರ್ಮವ್ವನ ಮನಿ ಮುಂದ ಗರಬಡಿದವರಂಗೆ ನಿಂತ್ರು. ಸಣಕಲು ಸೊಂಟದ ಅಗಸರ ಸಣ್ಣೀರವ್ವ ಬಂದೀರೊದ್ನ ವಾರೆಗಣ್ಣೇಲಿ ಖಾತ್ರಿ ಮಾಡ್ಕೊಂಡ ಭರ್ಮವ್ವ, "ಬಾಜು ಮನೇರಂಥ ನಂಬಿದ್ನೆ, ಕುತ್ಗಿ ಕೊಯ್ದ್ವ ಎಣ್ಣೀ ಮಾರಿ ನೋಡದ ಮಗ್ಗಿಗೆ ಎಣ್ಣಿಡಬ್ಬಿ ತಂದು ಕೊಟ್ಟು ಸಾಯಹೊಡ್ದೋರ ಮನೆ ನಾಶವಾಗ್ಲಿ" ಅಂತ ಮಣ್ಣು ತೂರಿದ್ಲು.

ಹೆಂಡ್ತಿ ಕಳ್ಕೊಂಡ ಗಂಡನಂತಿದ್ದ ಓಣಿ ಮುಖ ನೋಡ್ಲಾರ್ದೆ ಸಿಗಾರ್ ಹಚ್ಚಿದ್ರಾಯ್ತಂಥ ಪರಸಣ್ಣನ ಹೋಟೆಲ್ಗೆ ಹೋದ. ಸಿಗಾರ್ಗಿಂತ ಪರಸಣ್ಣನ ಮಾತು ಕಿಕ್ ಹೊಡಿಲಿಕತ್ತು, "ಧರ್ಮರಾಯನಂಥ ಪುಟ್ಟಣ್ಣನಿಗೆ ಮೋಸ ಮಾಡಿದ್ಲು. ಮದ್ವೆ ಆಗಿದ್ರೆ ಪುಟ್ಟಣ್ಣ ರಾತ್ರಿಯೆಲ್ಲಾ ಉಪಾಸ ಇರ್ಬೇಕಿತ್ತು. ಮಾಡೋಕಲ್ಲಾ ನೋಡೋಕು ಚಾನ್ಸು ಕೊಡ್ತಿರ್ಲಿಲ್ಲ, ಇಂತಾವ್ರ ಕುಂಡ್ಯಾಗ ಕಾರದ್ಪುಡಿ ತುಂಬೇಕು. ನೋಡೋದಿಕ್ಕೆ ಮಳ್ಳನಾಂಗೇ ಕಾಣೋ ಬಸ್ಯಾ ಸರ್ಯಾದ ಏಟೆ ಇಟ್ಟಾವ್ನೆ. ಬಸ್ಯಾನ ರುಚಿಯತ್ತಿದ್ದ ಪವ್ವಿ ಪುಟ್ಟಣ್ಣನಾದ್ರು ಯಾಂಗ್ ಒಪ್ತಾಳೆ" ಸಂದ್ಯಾಗ ಮೂಲ್ಯಾಗಿದ್ದ ಸಿಟ್ನೆಲ್ಲಾ ಪರಸಣ್ಣ ಕಾರಿಕೊಂಡ. ಸಾವೇನ್ ಕಮ್ಮಿಯನ್ನಾಂಗೆ ಗಿಡ್ಡನೆಯ ಗಡ್ಡದಾರಿ ಸತೀಶ್ ಮುತ್ಯಾ "ಬ್ರಾಮುಣ್ರ ಜಾತ್ಯಾಗ ಹುಟ್ಟಿ, ನಮ್ಮ ಮರ್ಯಾದಿ ಕಳೆದ್ಲು, ಇಂತಾವ್ರು ಬದುಕಿರೋದಕ್ಕಿಂತ ಸಾಯೋದೆ ಮೇಲು" ಎಂದು ಗುಡುಗಿದ.

ಇವ್ರು ಹೀಂಗೆಲ್ಲಾ ಮಾತಾಡಿದ್ಮೇಲೆ ಬಸ್ಯಾನ ಪರಿಚಯ ಮಾಡಿ ಕೊಡ್ಲೇಬೇಕಾಗುತ್ತೆ. ನೋಡೋದಿಕ್ಕೆ ಹಾಸ್ಯನಟ ಬಾಲಕೃಷ್ಣನಾಂಗೆ ಕಾಣೋ ಮಡಿವಾಳಪ್ಪ ಸಾವ್ಕಾರನಿಗೆ ಇಬ್ರು ಹೆಂಡ್ರು. ಮೊದಲ್ನೇ ಹೆಂಡ್ತಿ ಸತ್ಮೇಲೆ, ಸಣ್ಣೀರವ್ವನ ಕಟ್ಕೊಂಡಿದ್ದ. ಬಸ್ಯ ಎರಡ್ನೇ ಹೆಂಡ್ತಿಯ ಹಿರೇಮಗ. ತೆಳ್ಳಗೆ, ಬೆಳ್ಳಗೆ, ಮಟ್ಟಸದ ಎತ್ತರ, ಕುಣಿದಾಡೋ ಕೆಂಚನೆಯ ಕೂದಲಿನ ಬಸ್ಯ ಮುಚ್ಚುಗನ ಸ್ವಭಾವದವನು. ಯಾರತ್ರಾನೂ ಹೆಚ್ಚು ಮಾತಾಡ್ತಿರಲಿಲ್ಲ. ಕೆಲ್ಸದಲ್ಲಿ ಅಚ್ಚುಕಟ್ಟುತನ. ಬಸ್ಯ ಇಸ್ತ್ರೀ ಹೊಡ್ದಿದಾನಂದ್ರೆ ಯಾರೂ ತುಟಿ ಬಿಚ್ಚೋಕೆ ಆಗ್ತಿರ್ಲಿಲ್ಲ. ಗೆಣೆಕಾರರಾದ ಸಂಗ್ಯ ರೇವಣಸಿದ್ದ ಲೆಕ್ಕ ಇಲ್ದೊಷ್ಟು ಸಾರಿ ಪುಕ್ಕಟೆ ಇಸ್ತ್ರೀ ಹೊಡೆಸಿಕೊಂಡು ಹೋಗ್ಯಾರೆ. ಲಂಗ, ಜಂಪರ್, ತಿಕ್ಕಸ್ಕೋಳ್ಳಕಂಥ ಓಣಿ ಹುಡ್ಗೀರೆಲ್ಲಾ ಬಸ್ಯಾನತ್ರ ಬಂದೋಗ್ತಿದ್ರು. ಯಾರ್ರೂ ಕಣ್ಣೆತ್ತಿ ನೋಡದ ಬಸ್ಯಾನ ಮನಸ್ಸು ತುಬುಕ್ಕಂಥ ಜಾರಿ ಬಿದ್ದದ್ದು ಬ್ರಾಮುಣ್ರ ಭರ್ಮವ್ವನ ಮಗ್ಳು ಪವ್ವಿ ಮ್ಯಾಲೆ.

ಪವ್ವೀನ ಮನ್ಸು ಗೆಲ್ಬೇಕಂಥ ಹಟತೊಟ್ಟ ಬಸ್ಯ ಮಾಡದ ಕೆಲ್ಸಗಳಿಲ್ಲ, ತಿರುಗದ ಜಾಗಗಳಿಲ್ಲ. ಪವ್ವಿ ಕಟ್ಟಿಗೆ ತರೋದಿಕ್ಕೆ, ನೀರು ತರೋದಿಕ್ಕೆ, ಸಂತೀಗೆ ಎಲ್ಲಿ ಹೋದ್ರು ಅಲ್ಲಿ ಹಾಜರಿರ್ತಿದ್ದ. ಅವಳ ಕೆಲ್ಸಗಳಿಗೆ ಕೈ ಜೋಡಿಸ್ತಿದ್ದ. ಮೈ ನೆರ್ತಿದ್ದ ಪವ್ವಿ ಬಸ್ಯನ ಮುಗ್ಧತೆಗೆ ಕರ್ಗಿ ಹೋಗಿದ್ಲು. ಇವರ ಪಿರೂತಿ ವಿಷ್ಯ ಓಣಿ ಮಂದಿಗೆಲ್ಲಾ ಗೊತ್ತಿದ್ರು ಯಾವ ಅಡ್ಡಿ, ಆತಂಕಾನೂ ಬರ್ಲಿಲ್ಲ. ಪವ್ವಿಯ ಅಪ್ಪ ಹುಳ ಮುಟ್ಟಿ ಸತ್ಮೇಲೆ ಸ್ವಲ್ಪ ತ್ರಾಸಾಯ್ತು! ಬಸ್ಯಾನ ಮೇಲಿನ ಪ್ರೀತಿನೂ ಹೆಚ್ಚಾಯ್ತು. ಹೀಗೆ ಆರು ವರ್ಷದವರೆಗೆ ಮೈಮುಟ್ದೆ ಮನಸ್ನಲ್ಲೆ ಮುದ್ದಾಡ್ತಿದ್ದ ಬಸ್ಯ ಪವ್ವಿ ಕಾಣದೆ ಒಂದು ಗಳಿಗೇನು ಕಳಿತೀರ್ಲಿಲ್ಲ. ಆದ್ರೆ ಪವ್ವಿ ವಿಷ ಕುಡಿದ್ಮೇಲೆ ಬಸ್ಯಾನ್ನ ಊರ್ಬಿಡ್ಸಿ ಕಕ್ಕೇರಾದಲ್ಲಿರೋ ಅಪ್ಪನ ಮೊದಲ್ನೇ ಹೆಂಡ್ತಿ ಮಗಳು ಶಾಂತಕ್ಕನ ಬಳಿ ಇಡ್ತಾಗಿತ್ತು, ಅನ್ನ ನೀರು ಬಿಟ್ಟಿದ್ದ, ಪವ್ವಿ ಸತ್ತ ವಿಷ್ಯ ತಿಳಿದ್ದ ಬಸ್ಯಾನ ಮನ್ಸು ಪೂರ್ತಿ ಸತ್ತು ಹೋಗಿತ್ತು.

ಪಿರಾಣಕ್ಕಿಂತ ಹೆಚ್ಚಾಗಿ ಪಿರೂತಿಸ್ತಿದ್ದ ಗೆಳತಿ ಹೆಣದ ಮುಂದೆ ಕೂತು ಗೋಳಿಡ್ಬೇಕೂ, ಆಗದ. ಕೊನಿಸಲ ಅವ್ಳ ಮಾರೀನ ಕಣ್ತುಂಬ ತುಂಬ್ಕೋಳ್ಳಾಗದ ಬಸ್ಯ ಮಾದಿಗರ ಓಣಿ ಬಲಿಯಿರೋ ಕೆಸರಿನ ಹೊಂಡದಂತಾಗಿದ್ದ. ಗೆಳೆಯರಿಗೆ ಫೋನಚ್ಚಿದ ಬಸ್ಯ "ಜೀವ ತೆಗೆಯೋ ಜಾತಿ ಸಂಪ್ರದಾಯ್ದ ಹುಟ್ಟುಹಾಕಿದ ಮಿಟ್ಟಿ ಮಕ್ಳಿಗೆ ಕಾಲ್ಮರೀ ತಗೊಂಡು ವಿಟ್ಟಾಕಬೇಕು"ಎಂದು ರೇಗಿದ. ಸಿಟ್ಟು ಇಳ್ದ ಕೊಡ್ಲೆ "ನನ್ಬಿಟ್ಟು ಒಬ್ಳೇ ಹೋಗಿ ಎಲ್ಲಾ ಹಾಳ್ ಮಾಡಿದ್ಲು, ಅವಳಿಲ್ದೆ ನಾ ಹ್ಯಾಂಗ್ ಬದುಕ್ಲಿ, ನನ್ನ ಕತಿ ಮುಗೀತು" ಅಂದಿದ್ದ. "ಹಾಗೆಲ್ಲಾ ಏನು ಮಾಡ್ಕೋಬೇಡ. ನಾವಿದ್ದೀವಿ, ಎಲ್ಲಾ ಸರಿಹೋಗುತ್ತೆ" ಎಂದು ಗೆಳೆಯರು ಭರವಸೆ ನೀಡಿದ್ದರು. ಮೂರ್ದಿವಸ ಬಿಟ್ಟು ಸುಧಾರಿಸ್ಕೊಂಡು ಮಂಗಳಾರ ರಾತ್ರಿ ಬಸ್ಯ ಮನೆಗೆ ಬಂದ. ಪರಸಣ್ಣನ ಹೋಟೆಲು ಕಮ್ ಸೆರೆದಂಗಡ್ಯಾಗ ಎಲ್ದು ಬ್ರಾಂದಿ ಸೀಸಕ್ಕೆ ಏಟ್ಹಾಕಿದ್ದ ಮಡಿವಾಳಪ್ಪ ಸಾವ್ಕಾರ ನೀಸೆದಾಗ ಬಾಯಿಗ್ಬಂದಂಗೆ ವದರಿದ. ಮಗನ್ನ ಮನೆಯಿಂದ ಹೊರ ಹಾಕಿದ. ಗಂಡನ ಮಸಲತ್ತಿಗೆ ಹೆಂಡ್ತಿ ಮಸಾಲಿ ಹಚ್ಚಿದ್ಲು. ದ್ರಾಕ್ಷಹಣ್ಣು ಹಿಡ್ಕೊಂಡು ಬಂದಿದ್ದ ಬಸ್ಯ ಬಂದ ದಾರೀಗೇ ಸುಂಕ್ವಲ್ಲಂಥ ವಾಪಾಸ್ಸಾದ. ದೆವ್ವಗಳು ಅಡ್ಡಾಡ್ಲಿಕ್ಕೆ ಎದಿ ಹೊಡಿಯೋ ವ್ಯಾಳ್ಯಾದಾಗ ಅಡಪಂಡಿ ಬಲಿಯಿರೋ ಬ್ರಾಮುಣ್ರ ಸಮಾಧಿ ಕಡಿ ಹೆಜ್ಜೆ ಹಾಕಿದ. ಪವ್ವಿಯ ಹೆಣದ ಬೂದಿ ಮುಂದ ಕುಂತು "ಜಾತಿ ರೀತೀನೆ ಮುಖ್ಯವಾಗಿರೋ ಈ ಊರ್ನಾಗ ನನ್ನೊರಂಥ ಯಾರೂ ಇಲ್ಲ ಪವ್ವಿ ದ್ರಾಕ್ಷಿ ತಂದಿವ್ನಿ ತಗೋ ತಿನ್ನು, ತಿನ್ನು ಪವ್ವಿ, ಇದು ನನ್ನೊರಿಗಂಥ ತಂದಿದ್ದು. ನೀನೆ ತಿನ್ಲಿಲ್ಲಂದ್ರೆ ನಾ ಯಾರೀಗೆ ತಿನ್ನಿಸ್ಲಿ" ಅಂಥ ಹೊರ್ಯಾಡಿ ಅಳ್ಲೀಕ್ಕೆ ಶುರು ಮಾಡ್ದ. ಕಣ್ಣಾಗಿನ ನೀರು ಬತ್ತೋದ್ಮೇಲೆದ್ದು ಕಕ್ಕೇರಿ ಕಡಿ ಕಾಲಾಕಿದ. ಎರಡು ಗಂಟೆಗೆ ಅಕ್ಕನ ಮನಿ ತಲುಪ್ದ. ಅಣ್ಣ ಮಲಗೋ ಬೆಳಿಗ್ಗೆ ಮಾತಾಡಿದ್ರಾಯ್ತಂದ್ರೆ, ಇನ್ನೇಲೆ ಮಲಗೋದು ಇದ್ರೆ ಇಡುತ್ತು ಒಂದು ದಿಪ್ಪ ಮಲಗಿಲ್ಲಂದ್ರೆ ಪಿರಾಣ ಹೋಗುತ್ತಾ? ಎಂದು ಕೊಂಕಿ ಹಾಕಿದ

ಬೆಳಗಿನ ಜಾವ ನಾಕು ಗಂಟ್ಯಾಕ ಉಚ್ಚಿ ಹೊಯ್ಯಕ್ಕಂಥ ಮನೆ ಹಿಂದೆ ಹೋದ ಬಸ್ಯ ಎದ್ದು ಬರ್ಲ್ಯಾಗ ಎದ್ರೀಗೆ ನಿಂತಿದ್ದ ಅಣ್ಣನ ಮಾರಿ ನೋಡ್ತಾ, ಹುಸಿನಗೆ ಬೀರ್ತಾ, ಎಲ್ಲಾ ಮುಗೀತಣ್ಣ ಎಂದು ಕುಸ್ದುಬಿದ್ದ. ಲಿಂಗ್ಸೂರಿನ ಸರ್ಕಾರಿ ದವಾಖಾನಿಗೆ ಹೋಯ್ತುರ್ಲ್ ಕಾಟ್ಯಾಗೆ ಬಸ್ಯ ಹೆಣವಾದ. ಹೊತ್ತುಟ್ಟಿ ಬೆಳಗಾಗೋದರೊಳಗೆ ಸತ್ತ ಸುದ್ದಿ ಓಣಿ ತಲುಪ್ತು. ಮಡಿವಾಳಪ್ಪ ಸಾವ್ಕಾರ ಸಣ್ಣೀರವ್ವ ಕಿರಿಗ್ಯಾಡ್ರು. ಮಡಿವಾಳಪ್ಪನ ಮನಿ ಮುಂದ ಜಮಾಯ್ಸಿದ ಓಣಿ ಮಂದಿ, ವಿಸಾಯ್ತು, ಯಂಗಾಯ್ತು, ವಿಕಾಯ್ತು, ಅಂಥ ತನಿಖೆ ನಡೆಸಿದ್ರು.

ಮದ್ವೀಗ್ಮುಂಚೆ ಪಿರೂತಿಸಿ, ಮದುವೆಯಾದ್ಮೇಲೆ ಸಂಜೀ ಕಡೆ ಜಾಲಿ ಮರೀಗೆ ಚರಿಗೆ ತಗೊಂಡೋಗಿ ಮೈಗೆ ಮೈಯುಜ್ಜಿ ತಿಕ್ತಿದ್ದವರಿಗೆ ಇದೊಂದು ಪವಾಡ ಅನ್ನಿಬಿಡ್ತು, ಓಣಿ ಹುಡುಗ್ರು, ಹುಡ್ಗೀರು, ಊರ್ಗೋರೆಲ್ಲಾ ಹೆಣದ ದಾರಿ ನೋಡ್ತಾ ಹಿಂದುಕ್ಕ ಮುಂದುಕ್ಕ ಸುತ್ತುತ್ತಿದ್ರು. ಕೆಂಡದಾಂಗೆ ಉರೀತಿದ್ದ ಸೂರಣ್ಣನ ಮೋಡ ಮುತ್ಕೊಂಡಿತ್ತು, ಮರಗಿಡದ ಯಾವ ಎಲೀನೂ ಮಿಸ್ಗ್ಯಾಡ್ತಿಲ್ಲ, ಹುಣಸ್ಗಿ ಎಸ್.ಐ. ದಯಾನಂದನ ಜೀಪು ಬುರ್ರಂಥ ದೂಳೆಬ್ಬಿಸ್ಕೊಂಡು ಬಂತು. ಹಳೀ ಕಾಲದ ದೊರೆ ಗತ್ತಿನಾಗೆ ಕುಂತಿದ್ದ ದಯಾನಂದ, ಬಯಲಾಟದ ಭೀಮಣ್ಣನಿಗೆ ಹೋಟ್ಲು ಪರಸನಣ್ಣಂಗೆ "ಯಾಂಗಿದೀರ್ಲೆ?" ಎಂದು ದೂಳೆಬ್ಬಿಸಿದ್ದ. ಪಾಲ್ತುಜೀವ ತಕ್ಕೊಂಡೋರ್ಗೆ ತಂದಿಡೋ ಹಣಮಂತ ದೇವ್ರ ಗುಡಿ ಬಲಿ ಹೆಣದ ಕಾರು ನಿಲ್ತು. ಮರಿ ಕಳ್ಕೊಂಡ ಕಾಗವ್ವನ ಬಳಗ ಮುತ್ಕೊಂಡು ಗೋಳೀಡೋ ಆಗೆ, ಸರೀಕ್ರು, ಊರ್ಮಂದಿಯೆಲ್ಲಾ ಹೆಣ ಮುತ್ಕೊಂಡು ಮಾರೀ ನೋಡಿ, ನೋಡಿ, ಹುಯ್ಲಿಟ್ರು.

ಮಡಿವಾಳಪ್ಪ ಹಾರಾಡಿ ಹೋಯ್ಕಂಡ. ಬಸ್ಯ ಮಾತ್ರ ನಗ್ತಿದ್ದ! ಹಣಮಂತ ದೇವ್ರ ಗುಡಿ ಎದುರ್ಗಿದ್ದ ಅಬ್ರಾಮುಣ್ರ ಸ್ಮಶಾನ್ದಾಗ ಹೆಣಕ್ಕೆ ಬೆಂಕಿಯಿಟ್ರು. ಟಿವಿ ಮುಂದೆ ಕಣ್ಣ ಪಿಳಿಪಿಳಿ ಬಿಟ್ಕೊಂಡು ಕನ್ನಡ ಸಿನ್ಮಾ ನೋಡ್ಕೊಂಡು ಹನಿ ಊದುರ್ಸೋ ಜನ್ರು, ಓಣ್ಯಾಗಿನ ಎರಡ್ಸಾವನ್ನ ಕಣ್ಣೇದುರ್ಗೆ ಕಂಡು ಇದೊಂದು ಪವಾಡ ಎಂದ್ರು. ಬಾಲವಾಡಿ ಮೇಡಂ ದ್ಯಾಮವ್ವ, ರುಬ್ಬೋ ಮಿಷನ್ ಸಂಕ್ರವ್ವ, ಹೋಟ್ಲು ಪರಸಣ್ಣ ಎಲ್ರೂ ಸೇರಿ "ಎಲ್ಲಿ ಜಾತಿ? ಹೀಂಗ ಪಿರೂತಿಸ್ತರಂಥ ಗೊತ್ತಿದ್ರೆ, ನಾವೇ ನಿಂತಿದ್ದು ಮದ್ವಿ ಮಾಡ್ತಿದ್ದೀವಿ ಎಂಥ ಕೆಲ್ಸ ಆಯ್ತು" ಅಂದ್ರು. ಆಕಾಶ ಕಪ್ಪಿಟ್ಟು, ಕತ್ತಲಾದಂಗೆ ಬಿರುಸ್ಮಳಿ ಹುಯ್ತು... ■

ವಿಶೇಷ ಲೇಖನ

■ ಸಾರಾ ಅಬೂಬಕ್ಕರ್

ಹೊರಹಾಕಿದ್ದಾನೆ. "ನಾವು ಆಕೆ ಹಾಗೂ ಮಗುವನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ, ನಮ್ಮಲ್ಲಿ ಹೆಣ್ಣಿಗೆ ಸ್ಥಾನವಿಲ್ಲ, ಗಂಡು ಮಗುವಾಗಿದ್ದರೆ ಸೇರಿಸಿಕೊಳ್ಳುತ್ತಿದ್ದೆವು. ನೀವು ಯಾರೂ ನಮ್ಮ ಮನೆಗೆ ಬರುವುದು ಬೇಡ" ಎಂದು ಆ ಮನೆಗೆ ಹೋಗಿದ್ದ ಆ ಮಗುವಿನ ತಾಯಿ, ಆಕೆಯ ಹೆತ್ತವರು ಮತ್ತಿತರ ಸಂಬಂಧಿಕರನ್ನು ಶ್ರೀನಿವಾಸ ಕುಟುಂಬ ಮನೆಯಿಂದ ಹೊರಗಟ್ಟಿದರು ಎಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

2006 ರ ಪ್ರತಿಷ್ಠಿತ ಅಂತರರಾಷ್ಟ್ರೀಯ ವೈದ್ಯಕೀಯ ವಾರ್ತಾಪತ್ರ ಲಾನ್‌ಸೆಟ್ (Lancet) ಪ್ರಕಾರ ಕಳೆದ 20 ವರ್ಷಗಳಲ್ಲಿ ಹತ್ತು ದಶಲಕ್ಷ ಹೆಣ್ಣು ಮಕ್ಕಳನ್ನು ಹೆಣ್ಣುಭ್ರೂಣ ನಾಶದ ಮೂಲಕ ಕೊಂದು ಹಾಕಲಾಗಿದೆ. ಹುಟ್ಟಲಿರುವ ಮಗುವಿನ ನ್ಯೂನತೆ ಕಂಡುಹಿಡಿಯಲು ವಿಜ್ಞಾನಿಗಳು ಸಂಶೋಧಿಸಿದ ಸಂಶೋಧನೆಯೇ ಇಂದು ಹೆಣ್ಣುಭ್ರೂಣದ ವಿನಾಶಕ್ಕೆ ಕಾರಣವಾಗಿದೆ. ದೈಹಿಕ ನ್ಯೂನತೆ ಇರುವ ಮಕ್ಕಳು ಹುಟ್ಟಿ ಬದುಕು ಪೂರ್ತಿ ನರಳುತ್ತಾ ಹೆತ್ತವರಿಗೂ ನೋವು ಕೊಡುವುದಕ್ಕಿಂತ ಅದನ್ನು ಹುಟ್ಟನಿಂದಲೇ ತಡೆಯಲು ಸಾಧ್ಯ ಎಂಬುದು ವಿಜ್ಞಾನಿಗಳ ಸಂಶೋಧನೆಯಾಗಿದೆ. ಆದರೆ ಗರ್ಭಸ್ಥ ಆರೋಗ್ಯವಂತ ಹೆಣ್ಣು ಶಿಶುಗಳನ್ನೇ ಈ ರೀತಿ ನಿರ್ನಾಮಗೊಳಿಸಲು, ಪ್ರಕೃತಿಯ ನಿಸರ್ಗ ನಿಯಮವನ್ನೇ ಬುಡಮೇಲು ಮಾಡಲು ಜನರು ಮುಂದಾಗಬಹುದು ಎಂಬುದನ್ನು ಈ ವಿಜ್ಞಾನಿಗಳು ಕನಸಿನಲ್ಲೂ ಊಹಿಸಿರಲಾರರು.

ಭಾರತದಲ್ಲಿ ಮೊಟ್ಟಮೊದಲು 1979 ರಲ್ಲಿ ಅಮೃತಸರದಲ್ಲಿ ಭ್ರೂಣ ಪರೀಕ್ಷೆ ಮತ್ತು ಅದರ ಹತ್ಯೆ ಪ್ರಾರಂಭವಾಗಿ ಈಗ ಇಡೀ ದೇಶದಲ್ಲಿ ಸಾವಿರಾರು ಲಿಂಗ ಪರೀಕ್ಷಾ ಕೇಂದ್ರಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ಎಷ್ಟೋ ಪಟ್ಟಣಗಳಲ್ಲಿ ಜನರಿಗೆ ಸಮನಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ನಗರವನ್ನು ನಿರ್ಮಲವಾಗಿಡಲು ಒಳಚರಂಡಿ ವ್ಯವಸ್ಥೆಯಾಗಲಿ ಇಲ್ಲದೆ ಹೋದರೂ ಭ್ರೂಣದ ಲಿಂಗ ಪರೀಕ್ಷೆ ಮಾಡುವಂತಹ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮೆಷಿನ್ ಪ್ರತಿ ಬೀದಿಯಲ್ಲೂ ಇದೆ ಎನ್ನುತ್ತಾರೆ ಸಮಾಜ ಕಾರ್ಯಕರ್ತರು. ಇತ್ತೀಚೆಗೆ ಹೆಣ್ಣುಭ್ರೂಣ ತೆಗೆಯಲು ಸುಲಭವಾಗಿ ಕೊಂಡೊಯ್ಯಬಹುದಾದ ಹಾಗೂ ಮನೆಯಲ್ಲೇ ಸುಲಭವಾಗಿ ಹೆಣ್ಣುಭ್ರೂಣವನ್ನು ತೆಗೆಯಬಹುದಾದ ಕಿಟ್‌ಗಳೂ ಬಂದಿವೆಯೆನ್ನಲಾಗಿದೆ. ಹರಿಯಾಣದಲ್ಲಿ ಹೆಣ್ಣು ಭ್ರೂಣ ತೆಗೆಯುವ ಸಂಚಾರಿ ಘಟಕವೇ ಇತ್ತು. ಹಲವು ವರ್ಷಗಳ ಹಿಂದೆ ಹೆಣ್ಣುಮಗು ಹುಟ್ಟಿದಾಗ ಅದರ ಹೊಕ್ಕಳಬಳ್ಳಿಯನ್ನು ಕಟ್ಟದೆ ಹಾಗೆಯೇ ಬಿಟ್ಟು ರಕ್ತಸ್ರಾವದಿಂದ ಮಗು ಸಾಯುವಂತೆ ಮಾಡಲಾಗುತ್ತಿತ್ತು. ಭತ್ತವನ್ನು ಮಗುವಿನ ಗಂಟಲಲ್ಲಿ ಹಾಕಿ ಕೊಲ್ಲುವ ಪದ್ಧತಿ ತಮಿಳುನಾಡಿನಿಂದ ವರದಿಯಾಗಿತ್ತು. "ಇಂದು 500 ರೂ. ಖರ್ಚು ಮಾಡಿ ಹೆಣ್ಣುಭ್ರೂಣ ತೆಗೆಸಿ; ಮುಂದೆ ಖರ್ಚಾಗಲಿರುವ 50,000 ರೂಪಾಯಿ ಉಳಿಸಿ" ಎಂಬ ಜಾಹೀರಾತುಗಳು ದೆಹಲಿ, ಹರಿಯಾಣ, ಮುಂಬಯಿ ಮುಂತಾದ ನಗರಗಳಲ್ಲಿ ಕಾಣಿಸಿಕೊಂಡಿತ್ತು.

1980 ರ ರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲೇ ಈ ವಿಷಯದ ಕುರಿತು ಬಿರುಸಿನ ಚರ್ಚೆ ನಡೆಯಿತು. ಆ ಬಳಿಕದ ದಿನಗಳಲ್ಲಿ ದೇಶದ ವಿವಿಧೆಡೆ ಮಹಿಳಾ ಸಂಘಟನೆಗಳು ಜಾಗೃತಗೊಂಡು ಭ್ರೂಣ ಪರೀಕ್ಷೆ ನಿಲ್ಲಿಸಬೇಕೆಂದು ಹೋರಾಟವನ್ನಾರಂಭಿಸಿ ದವು. 1988 ರಲ್ಲಿ ಮಹಾರಾಷ್ಟ್ರ ಸರ್ಕಾರ ಪ್ರಸವಪೂರ್ವ ಲಿಂಗ ಪತ್ತೆಹಚ್ಚುವ ಮೊಟ್ಟಮೊದಲ ನಿಷೇಧ ನಿಯಮ, ನಿಬಂಧನೆಗಳನ್ನು ತಂದಿತು. 1994 ರಲ್ಲಿ ಪಂಜಾಬಿನಲ್ಲಿ ಈ ಕಾನೂನು ಜಾರಿಯಾಯಿತು. ಬಳಿಕ ದೇಶದ ಎಲ್ಲಾ ಭಾಗಗಳಲ್ಲೂ ಈ ಕಾನೂನು ಜಾರಿಯಲ್ಲಿದೆ ಎನ್ನಲಾಗಿದೆ. ಈ ಕಾನೂನಿನ ಪ್ರಕಾರ ಈ ನಿಯಮ ಉಲ್ಲಂಘನೆ ಮಾಡಿದವರಿಗೆ ಮೂರು ವರ್ಷ ಜೈಲು ಮತ್ತು ಹತ್ತು ಸಾವಿರ ರೂಪಾಯಿ ದಂಡದ ಶಿಕ್ಷೆ ವಿಧಿಸಬಹುದಾಗಿದೆ.

ಈ ಕಾನೂನು ಜಾರಿಗೆ ಬಂದೊಡನೆ ರಾಜಾರೋಷವಾಗಿ ಜಾಹೀರಾತು ನೀಡಿ ಹೆಣ್ಣುಭ್ರೂಣ ಹತ್ಯೆ ಮಾಡುತ್ತಿದ್ದ ಕ್ರಮ ಗುಟ್ಟಾಗಿ, ನಿಯಮಬಾಹಿರವಾಗಿ ನಡೆಯತೊಡಗಿತು. ಪ್ರಾರಂಭದಲ್ಲಿ ಐನೂರರ ಆಸುಪಾಸಿನಲ್ಲಿದ್ದ ಖರ್ಚು ಆ ಬಳಿಕ ಸಾವಿರಗಟ್ಟಲೆಯಾಗತೊಡಗಿತು. ಈ ಕಾನೂನಿನಿಂದಾಗಿ ಕೆಲವು ಚಿಕಿತ್ಸಾಲಯಗಳು ಮತ್ತು ವೈದ್ಯರುಗಳು ಮತ್ತಷ್ಟು ಶ್ರೀಮಂತರಾದರು.

ಮೈಸೂರಿನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಮಾಜ ಕಾರ್ಯಕರ್ತೆಯರು ಡಾಕ್ಟರುಗಳನ್ನೇ ಅಪರಾಧಿಗಳೆಂದು ದೂರಿದರು. ಕೆಲವು ವೈದ್ಯರು ಈ ಕೃತ್ಯದಲ್ಲಿ ಭಾಗವಹಿಸಬಹುದು; ಆದರೆ ಈ ಕಾನೂನು ಜಾರಿಯಾದ ಬಳಿಕ ವೈದ್ಯರು ಭ್ರೂಣಹತ್ಯೆಗೆ ಅಷ್ಟು ಸುಲಭದಲ್ಲಿ ಕೈ ಜೋಡಿಸಲಾರರು ಎಂಬುದು ಅಲ್ಲಿ ಸೇರಿದ್ದ ಡಾಕ್ಟರುಗಳ ಅಭಿಪ್ರಾಯವಾಗಿತ್ತು. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ನೆರವೇರಿಸುವವರು ಆದರ ಟೆಕ್ನಿಷಿಯನ್ ಆಗಿದ್ದು ಆತನು ವೈದ್ಯರ ಬಳಿಗೆ ವರದಿ ಕಳುಹಿಸುತ್ತಾನೆ. ಆತನಿಗೂ ಭ್ರೂಣದ ಲಿಂಗ ತಿಳಿದಿರುತ್ತದೆ. ಈ ಕಾನೂನು ಜಾರಿಯಾದ ಬಳಿಕ ತಮ್ಮ ಬಳಿಗೆ ವರದಿ ಬಂದರೆ ತಾವು ಅದನ್ನು ಸಂಬಂಧಪಟ್ಟ ದಂಪತಿಗಳಿಗೆ ತಿಳಿಸುವುದಿಲ್ಲ, ಆದರೆ ಈ ಜನರು ಈ ಟೆಕ್ನಿಷಿಯನ್ ಬಳಿಗೇ ಹೋಗಿ ಫಲಿತಾಂಶ ತಿಳಿದುಕೊಳ್ಳುತ್ತಾರೆ ಎನ್ನುತ್ತಾರೆ ವೈದ್ಯರು. ಹಣದಿಂದ ಆಗದ ಕೆಲಸವೇನಾದರೂ ಇದೆಯೇ? ಕೆಲವು ನೂರೋ ಸಾವಿರವೋ ದೊರೆತರೆ ಈ ತಂತ್ರಜ್ಞರು ಗುಟ್ಟುಬಿಟ್ಟು ಕೊಡದಿರುತ್ತಾರೆಯೇ? ಬೇಡದಹೆಣ್ಣು ಮಗುವೆಂದು ತಿಳಿದೊಡನೆ ಮುಂದಿನದು ಯಾವ ವಿಧದಲ್ಲಾದರೂ ಅದನ್ನು ಚಿವುಟಿ ಎಸೆಯುವ ಕೆಲಸ ತಾನೇ? ಇಲ್ಲಿಯೂ ಹಣದಾಸೆ ಕೆಲಸ ಮಾಡಿಯೇ ಮಾಡುತ್ತದೆ!

ನರ್ಸಿಂಗ್ ಹೋಂಗಳಲ್ಲಿ ಭ್ರೂಣ ಪತ್ತೆಯ ವಿವರಗಳನ್ನು ದಾಖಲಿಸಬೇಕೆಂಬ ನಿಯಮವಿದೆ. ಮಂಡ್ಯದಿಂದ ಬಂದ ಸಮಾಜ ಕಾರ್ಯಕರ್ತೆ ಹೇಳುತ್ತಾರೆ "ಅಲ್ಟ್ರಾಸೌಂಡ್ ಯಂತ್ರವಿರುವಲ್ಲಿ ಈ ವಿವರವನ್ನು ಸಮನಾಗಿ ದಾಖಲಿಸುವುದೇ ಇಲ್ಲ, ಮೂರು ತಿಂಗಳಲ್ಲಿ ಒಂದೇ ಒಂದು ಕೇಸ್ ದಾಖಲಿಸುತ್ತಾರೆ. ಅದ್ಯಾಕೆ ಯಾರೂ ಬಂದಿಲ್ಲ? ಎಂದು ಪ್ರಶ್ನಿಸಲು ಸಾಧ್ಯವಾ? ಅಂಗನವಾಡಿ ಕಾರ್ಯಕರ್ತೆಯರು ಮನೆಮನೆಗೆ ಭೇಟಿ ನೀಡಿ ಗರ್ಭಿಣಿಯರ ವಿವರ ದಾಖಲಿಸುವ ಕ್ರಮವಿದೆ. ಒಂದು ತಿಂಗಳಲ್ಲಿ ಒಂದು ಮನೆಯಲ್ಲಿ ಓರ್ವ ಗರ್ಭಿಣಿ ಇದ್ದರೆ ಮುಂದಿನ ತಿಂಗಳಲ್ಲಿ ಈ ಕಾರ್ಯಕರ್ತೆ ಸಂದರ್ಶನಕ್ಕೆ ಬಂದಾಗ ಆಕೆಯ ಹೊಟ್ಟೆ ಖಾಲಿಯಾಗಿರುತ್ತದೆ. ಏನಾಯಿತು ಎಂಬ ಕುರಿತು ಆಕೆಯೆಂದೂ ಬಾಯಿ ಬಿಡುವುದಿಲ್ಲ, ಅದು ಹೋಯಿತು ಎಂಬುದಷ್ಟೇ ಆಕೆಯ ಉತ್ತರ. ಸರ್ಕಾರ ಚಾಪೆಯ ಕೆಳಗೆ ಹೋದರೆ ಈ ಜನರು ರಂಗೋಲಿಯ ಕೆಳಗೆ ನುಸುಳುತ್ತಾರೆ! ಕೆಲವು ಡಾಕ್ಟರುಗಳು, ನರ್ಸಿಂಗ್ ಹೋಂಗಳು ಮತ್ತು ದಂಪತಿಗಳೆಲ್ಲರೂ ಈ ಜೀವ ವಿರೋಧಿ ಕ್ರಮಕ್ಕೆ ಕಾರಣಕರ್ತರೇ ಹೊರತು ಯಾರೋ ಒಬ್ಬರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಸಾಧ್ಯವಿಲ್ಲ, ಎಂತಹ ಕಾನೂನುಗಳು ಬಂದರೂ ಜನರ ಹೃದಯಪರಿವರ್ತನೆಯಾಗದೆ ಈ ಕೃತ್ಯವನ್ನು ನಿಲ್ಲಿಸಲು ಸಾಧ್ಯವಾಗದು.

ಹೆಣ್ಣುಗಂಡುಗಳ ಈ ಅನುಪಾತದ ಏರುಪೇರಿನಿಂದಾಗಿ ಮುಂದೊಂದು ದಿನ ಬಹುಪತಿತ್ವ ಪ್ರಾರಂಭವಾಗಬಹುದು. ದ್ರೌಪದಿಯ ಉದಾಹರಣೆಯೇ ಇದೆಯಲ್ಲ? ಅದು ಮಾತ್ರವಲ್ಲ ಮಹಿಳೆಯರ ಮೇಲೆ ಆಕ್ರಮಣ, ಅತ್ಯಾಚಾರ ಮುಂತಾದ ಪ್ರಕರಣಗಳು ಮತ್ತಷ್ಟು ಅಧಿಕಗೊಂಡು ಮಹಿಳೆಯರಿಗೆ ರಕ್ಷಣೆಯೇ ಇಲ್ಲದಂತಾಗಬಹುದು. ಮುಂದಿನ ದಿನಗಳಲ್ಲಿ ಇಂತಹ ಅಪಾಯಕಾರಿ ಬೆಳವಣಿಗೆಯನ್ನು ತಡೆಗಟ್ಟಬೇಕಾದರೆ ಹೆಣ್ಣುಭ್ರೂಣ ಹತ್ಯೆಯ ಈ ಜೀವ ವಿರೋಧಿ ಕೃತ್ಯವನ್ನು ಯಾವ ಬೆಲೆ ತೆತ್ತಾದರೂ ತಡೆಯಲೇಬೇಕಾಗಿದೆ.

ಒಂದು ಗಂಡು ಹುಟ್ಟಬೇಕಾದರೆ ಒಂದು ಹೆಣ್ಣಿನ ಹೊಟ್ಟೆ ಬೇಕೇಬೇಕು ಎಂಬುದನ್ನು ಈ ಜನಗಳು ಮರೆತಿದ್ದಾರೆಯೇ? ಹೆಂಡತಿಯಾಗಿ, ತಾಯಿಯಾಗಿ ಹೆಣ್ಣು ಬೇಕಾದರೆ ಹೆಣ್ಣುಮಗಳನ್ನು ಸ್ವಾಗತಿಸಬೇಕು ಎಂಬುದನ್ನು ಎಲ್ಲರೂ ನೆನಪಿಟ್ಟುಕೊಂಡರೆ ಒಳ್ಳೆಯದು ■

ಕಡಿಗೂ ಎಡೂರಪ್ಪ ತಗದೇಬುಟ್ಟ ಜನವ!

ಕಳ್ಳಬಟ್ಟಿ ಸಾವಿನ ದುರಂತ ಕೇಳಿದ ಕಾಳಮಾವ ಲೊಚಗರಿದು.

"ಕೊಂದಾಕಿಬುಟ್ಟ ಕಂಡ್ಯ ಎಡೂರಪ್ಪ ಜನವ" ಎಂದ.

"ಅವುನು ತಾನೆ ಏನು ಮಾಡ್ತನೊ ಮಾವ, ನಿನಂಗೆ ಪೂಜಾರಿ ತರ ಮಾತಾಡ್ತಿ."

"ಅಂಗರವುನು ಎಡೂರಪ್ಪನ್ನ ಬೈತಾಯಿದ್ದನೆ?" ಎಂದ ಸೀರ.

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಬೈಯ್ಯದೇನು? ಇದಕ್ಕಲ್ಲ ಕಾರಣಾನೆ ಎಡೂರಪ್ಪ ಅಂತ ಬೈಕಂಡು ಸತ್ತೋರ ಮನೆತಕ್ಕೋಗಿ ನೀವೇನು ಹೆದರಬ್ಯಾಡಿ, ಇನ್ನುಮ್ಯಾಲೆ ನಾವು ವಳ್ಳೆ ಶರಾಪು ಸಪ್ಲೈ ಮಾಡ್ತಿವಿ ಅಂದವುನೆ."

"ಅಂಗರೆ ಶರಾಪು ತಿರಗ ಬರ್ತದೇನ್ಲ?" ಎಂದಳು ಜುಮ್ಮಿ.

"ಪೂಜಾರಿ ಮಾತಾಡದ ನೋಡಿದ್ರೆ ತಂದೇ ತತ್ತರೆ ಕಣೆ. ಅಲ್ಲಾ, ಈ ನನಮಕ್ಕಳು ಕುಡಿಯಕ್ಕೆ ಬ್ರಾಂದಿ, ಬೀರು ಅಂಗೇ ಮಡಿಕಂಡು ಪಾಪ ಬಡಬಗ್ಗುರು ಕುಡಿಯೋ ಶರಾಪು ನಿಲ್ಸಿದ್ರೆ ಅನ್ಯಾಯಲವೇನೆ?"

"ಅದು ತಗಳ ಮಾತೆ ಬುಡ್ಡ. ನಿಲ್ಸದಿದ್ರೆ ಯಲ್ಲಾನು ನಿಲ್ಲುಸಬೇಕಾಗಿತ್ತು ಇಲ್ಲ ಅಂದ್ರೆ ನಿಧಾನಕ್ಕೆ ನಿಲ್ಲುಸಬೇಕಾಗಿತ್ತು" ಎಂದ ಕಾಳಮಾವ.

"ಬ್ರಾಂಡಿ ಅಂಗಡಿ ಯಾಪಾರ ಐದು ಸವುರದಿಂದ ಐವತ್ತು ಸವುರಕೆ ಮುಟ್ಟಿತ್ತಂತೆ ಕಣಮಾವ. ಈ ಎಡೂರಪ್ಪ ಶರಾಪು ನಿಲ್ಸಿದೇಟಿಗೆ ಯಾವನೂ ಕುಡಿಯದ ಬುಟ್ಟಿರಲಿಲ್ಲ, ಯಂಗೊ ಎಲ್ಲೋ ಕುಡಕಂಡೆ ಬರೋರು" ಎಂದ ಉಗ್ರಿ.

"ನಿಜ ಕಂಡ್ಯ. ಸರಾಪು ನಿಲ್ಸಿದ್ದಾಗ ಒಂದೈದಾರು ದಿನ ಸುಮ್ಮನಿದ್ದ ವಾಟಿಸ್ಸೆ ಆಮ್ಯಾಲೆ ದಿನ ಕುಡಕಂಡು ಬರೋನಪ್ಪ" ಎಂದಳು ಜುಮ್ಮಿ.

"ಆದಿರ್ಲಿ ಕಣೆ, ಯಲಕ್ಸನ್ ಯರಡು ದಿನಿದೆ ಅನ್ನುವಾಗ ಬ್ರಾಂದಿ, ಬೀರು ಮಾರಂಗಿರಲಿಲ್ಲ, ಆದ್ರು ಯಲಕ್ಷನ್ ದಿನ ವಾಟಸ್ಸೆ ಸಮೇತ ಏಟು ಜನ ಕುಡುದಿದ್ರು ಗೊತ್ತೆ? ಪೊಲೀಸ್‌ನೋರು ನೋಡಿಕಂಡು ತಿರುಗಿದ್ರೆ ವರತು ಎಲ್ಲಿ ಕುಡುದ್ರಿ? ಎಲ್ಲಿಂದ ತಂದ್ರಿ? ಅಂತ ಒಂದು ಮಾತು ಕೇಳಲಿಲ್ಲ" ಎಂದ ಉಗ್ರಿ.

"ನನಿಗನ್ನಿಸ್ತಾ ಅದೆ ಕಂಡ್ಯ, ಸರಾಪು ನಿಲ್ಸಿದ್ದಿನನೆ ಕಳಬಟ್ಟಿ ಸುರುಮಾಡಿರಂಗೆ ಕಾಣ್ತರೆ" ಎಂದು ಸೀರ, ಯಾವುದೊ ರಹಸ್ಯ ಕಂಡವನಂತೆ ಮುಖ ಮಾಡಿ ಇನ್ನೂ ಹೆಚ್ಚು ಸ್ಫೂರ್ತಿಗೆ ಬೀಡಿ ಹಚ್ಚಿದ.

"ನಿಜ ಕಣಮಾವ. ಈಗ ಪೊಲೀಸ್‌ನೋರು ಹೋಗಿ ಸರಾಪಿನ ಅಡ್ಡೆನ್ಯಲ್ಲ ವಡದಾಕಿ, ಮಡಕೆನ್ಯಲ್ಲ ಪುಡಿಪುಡಿ ಮಾಡದ ನೋಡಿದ್ರೆ, ಕಳ್ಳಬಟ್ಟಿ ಉಸ್ತುವಾರಿಯ ಇವುರೇ ನೋಡಿಕತ್ತಿದ್ರೇನೊ. ಅಂಗೆ ಹಿಡಿತ ಕುಂತವುರೆ."

"ಅಬಕಾರಿ ಇಲಾಖೆ ಸೂಳೆಮಕ್ಕಳು ಏನು ಮಾಡ್ತಿದ್ರು?" ಎಂದ ಕಾಳಮಾವ.

"ಅವುರು ಮಾಮೂಲಿ ತಗಂಡು ಆರಾಮಾಗಿದ್ರು. ಈಗತ್ಲಗೆ ಸಸುಪೆಂಡಾಗ್ಯವುರೆ. ಸಸುಪೆಂಡಾದ್ರು ತಾನೆ ಸುಮ್ಮನಿದ್ದರೆ? ಇದನ್ನೆಲ್ಲಾ ನಾವು ಡ್ಯೂಟಿಲೆ ಇದ್ರೆ ಕಳ್ಳಬಟ್ಟಿಯೋರ ಹಿಡಿತಿದ್ವೊ ಅಂತ ಹೇಳತಾ ಅವುರೇ ಕಣಮಾವ. ಅವುರ ಫಜೀತಿ ನೋಡಿದ್ರೆ ನಗಬತ್ತದೆ."

"ಅಲ್ಲ ಕಂಡ್ಯಾ, ಕಳ್ಳಬಟ್ಟಿ ಇಳಸೋರ ಇದಿತಿದ್ದೆ ಅನ್ನದಾದ್ರೆ ಈಟು ದಿನ ತರಿತಿದ್ನೆ? ಹೋಗಿ ಹಿಡಿಬೇಕಾಗಿತ್ತು, ಹಿಡಿತಿನಿ ಅಂದ್ರೆ ಆವುನಿರೊ ತಾವು ಇವುನಿಗೆ ಗೊತ್ತು ಅನ್ನಂಗಾಯ್ತು" ಎಂದ ಕಾಳಮಾವ.

"ಅಲ್ಲಿಗೆ ಬತ್ತಾ ಅದೆ ಅವುನಂದಿರೊ ಮಾತು."

"ಈಗ್ಯಾರಿಡುದ್ರು ತಾನೆ ಏನು ಬತ್ತದ್ನ? ಪಾಪ ಬಡಬಗ್ಗರ ಬಾಯಿಗೆ ಮಣ್ಣು ಬತ್ತು. ಅವುರೇನೊ ಕುಡುದ್ರು ಹೋದ್ರು, ಅವುರೆದ್ದಿ ಮಕ್ಕಳ ಕತೆಯೇಳ್ಳ? ಅವ್ಯಾರು ಸಾಕಬೇಕು?" ಎಂದಳು ಜುಮ್ಮಿ.

"ಯಲಕ್ಷನಿಗೆ ಅಂತ ಕೋಟ್ಯಾಂತರುಪಾಯಿ ಖರ್ಚು ಮಾಡೊ ಮುಂಡೆ ಮಕ್ಕಳು, ಆ ತಬ್ಬಲಿ ಮಕ್ಕಳನಾರ ಸಾಕಬವುದು ಕಣೆ. ಏನಿವಿಲ್ಲ ಸತ್ತಿರೊ ನೂರಾರು ಕುಟುಂಬದ ಪೈಕಿ ಎಡೂರಪ್ಪ ಐವತ್ತು ಕುಟುಂಬ, ಕುಮಾರಸ್ವಾಮಿ ಐವತ್ತು ಕುಟುಂಬ ವಯಿಸಿಗಂಡ್ರೆ, ಇನ್ನುಳದೋರಾ ಸರ್ಕಾರ ತಿಂದು ದುಡ್ಡು ಮಾಡಿದ್ದೋರು ವಯಿಸಿಕೊಬವ್ವು" ಎಂದ ಉಗ್ರಿ.



"ವಯಿಸಕಬವುದು, ಅದರಲ್ಲೇನು ತಪ್ಪಿಲ್ಲ, ಇವುರು ಮಾಡಿರೊ ತಪ್ಪನಿಂದ್ಲೆ ಅಲವೆ ಆಟೊಂತರ ಜನ ಸತ್ತಿರದು?" ಎಂದ ಕಾಳಮಾವ.

"ಗುಂಡೂರಾಯನ ಕಾಲದಲ್ಲು ಹಿಂಗೆ ಸತ್ತಿದ್ರು ಕಣೆ ಜುಮ್ಮಿ. ಆಗ ಸರಾಪೇನೂ ಬಂದಾಗಿರಲಿಲ್ಲ, ಆದ್ರು ನೂರಾರು ಜನ ಕುಡುದು ಸತ್ತರು. ಕಳಬಟ್ಟಿ ಇಳಸೋರು ಜಾಪರ್ ಸರೀಪು, ಶ್ರೀಕಂಠಯ್ಯ ಇವುರ ಮನೆಲ್ಯಲ್ಲ ಅವುತಗಂಡಿದ್ರಂತೆ" ಎಂದ ಸೀರ.

"ಯಾರೊ ಮಾವ ನಿನಿಗೇಳಿದೋರು?"

"ಏ ಕಂಡೋರೆ ಹೇಳಿದ್ರು ಕಂಡ್ಯ. ಪೇಪ್ರಲ್ಲು ಬಂದಿತ್ತು, ಕಳಬಟ್ಟಿ ಇಳಸೋನ ಕಾರು ಬಂದು ಅಣ್ಣಯ್ಯನ ಮನೇತ್ರ ನಿಂತಿತ್ತಂತೆ."

"ಅದಂಗಲ್ಲ ಕಣೊ. ಕಳ್ಳಬಟ್ಟಿ ಇಳಸೋನ ಕಾರುವೆ, ಹಿರಿಸಾವೆ ಶ್ರೀಕಂಠಯ್ಯನ ಕಾರುವೆ ಒಂದೇ ತರ ಇದ್ದವಂತೆ. ಅದ್ನೆ ನೋಡಿದ ಜನ ಕಳ್ಳಬಟ್ಟಿ ಕಳ್ಳ ಅಣ್ಣಯ್ಯನೋರ ಅಡುಗೆ ಮನೆಲಿ ಅವುತಗಂಡವುನೆ ಅಂತ ತಿಳಕಂಡಿದ್ರು."


"ಇರಬವುದು, ಇಲ್ದೆನು ಇರಬವುದು. ಅಷ್ಟಕು ಇದಕ್ಕಲ್ಲ ರಾಜಕಾರಣಿಗಳೆ ಕಾರಣ ಅಲವೇನ್ಲ? ಇವತ್ಯಾವನು ನಂಬುಕೆ ಉಳಿಸಿಗಂಡಿರನೂ?" ಎಂದ ಕಾಳಮಾವ.

"ಇವತ್ತು ಯತ್ತಮುಂದಾಗಿ ನೋಡಿದ್ರು ಜೆ.ಎಚ್. ಪಟೇಲ್ರು ಮಗನೆ ಬರವಸೆ ಹುಟ್ಟಸೊನಂಗೆ ಕಾಣ್ತನಪ್ಪ."

"ಅವುನೆಲ್ಲಿ ನಿಂತಿದ್ದಾ?"

"ನಿಂತಿರಲಿಲ್ಲ ಕಣೆ, ಕುಂತಿದ್ನಂತೆ. ಸೂಳೆಕ್ಕರೆತಕ್ಕೋಗಿ ಉಪಾಸ ಕುಂತಿದ್ನಂತೆ. ಬಂದೋರ್ಯಲ್ಲ ಕಾಸು ಕೊಟ್ಟು ಹೋಯ್ತಿದ್ರಂತೆ. ಅದೇ ಒಂದೂವರೆ ಲಕ್ಷಾಯ್ತಂತೆ. ಇನ್ನ ಚುನಾವಣೆಲಿ ಗೆದ್ದರೇಟು, ಸೋತರೇಟು ಅವುನಂತೂ ಕಳಕಂಡುದ್ದು ಏನೂಯಿಲ್ಲ."

ಅನಿಷ್ಟಕ್ಕೆಲ್ಲ ಅವರೇ ಹೊಣೆ!



ಜಾಗತಿಕ ಆಹಾರ ಬಿಕ್ಕಟ್ಟು ಯಾರು ಕಾರಣ?

ಆಹಾರ ಕೊರತೆ ಇಂದಿನ ಸಮಸ್ಯೆ.

ಇದಕ್ಕೆ ಯಾರು ಕಾರಣ?

'ಯುಪಿಎ ಸರ್ಕಾರ' ಎನ್‌ಡಿಎ ವಾದ.

'ಇದು ವಿಶ್ವ ಸಮಸ್ಯೆ' ಯುಪಿಎ ಸಮಜಾಯಿಷಿ.

ಚುನಾವಣೆ ಸಮಯ. ಇಂತಹವೆಲ್ಲ ಮಾಮೂಲಿ ಬಿಡಿ.

ಇದಕ್ಕೆ ಆಹಾರ ಮಂತ್ರಿಗಳು ಏನನ್ನುತ್ತಾರೆ?

ಪಾಪ ಅವರಿಗೆ ಜನರ ಆಹಾರ ಸಮಸ್ಯೆಗಿಂತಲೂ ತಮಗೆ ಬಿಸಿಸಿಐನಲ್ಲಿ ಸಿಗಬಹುದಾದ 'ಆಹಾರ'ದ ಕುರಿತೇ ಚಿಂತೆ! ಅದಕ್ಕೇ ಬಿಸಿಸಿಐ ಚೇರ್ಮನ್‌ಗಿರಿ ಫುಲ್‌ಟೈಂ ಜಾಬು; ಆಹಾರ ಮಂತ್ರಿ ಗಿರಿ ಪಾರ್ಟ್‌ಟೈಂ ಜಾಬು! ಒಟ್ಟಾರೆ ಆಹಾರ ಕುರಿತು ಅವರಿಗೆ ಚಿಂತಿಸಲು ವೇಳೆ ಇಲ್ಲ, 'ಪಾರ್ಟ್ ಆಹಾರ' ಕುರಿತು ಅವರ ಚಿಂತನಾಲಹರಿ.

ಯಾವುದು ಈ 'ಪಾರ್ಟ್ ಆಹಾರ?'

ಗೋಧಿ!

ಏನಾಗಿದೆ ಅದಕ್ಕೆ?

ಕೊರತೆ ಬದ್ದಿದೆ!

ಯಾರು ಇದಕ್ಕೆ ಕಾರಣ?

ದಕ್ಷಿಣ ಭಾರತೀಯರು!

ಹೇಗಂತೆ? ಅನ್ನ ಇಡ್ಲಿ ಸಾಂಬರ್ ಗಿರಾಕಿಗಳಲ್ಲವೆ ಅವರು?

ಇಲ್ಲವಂತೆ! ಅವರು ಈಗ ರೋಟಿ ಚಪಾತಿ ವಾಲಾಗಳಾಗಿದ್ದಾರಂತೆ!

ಸಾರ್ವಜನಿಕ ವಿತರಣಾ ಸಂಸ್ಥೆಯ ಅಂಕಿಸಂಖ್ಯೆಗಳು ಇದನ್ನು ಅಲ್ಲಗಳೆಯುತ್ತಿರಬಹುದು. ವರ್ಷೇ ವರ್ಷೇ ಗೋಧಿ ಸರಬರಾಜು ದಕ್ಷಿಣ ಭಾರತಕ್ಕೆ ಕಡಿಮೆಯಾಗುತ್ತಿದೆ ಎಂದು ಅಂಕಿಅಂಶಗಳು ಖಚಿತಗೊಳಿಸಬಹುದು. ಆದರೆ ಮಂತ್ರಿಗಳ ಮಾತು ಅಲ್ಲಗಳೆಯುವಂತಿಲ್ಲವಲ್ಲ!

ಇದು ಫುಲ್‌ಟೈಂ ಕ್ರಿಕೆಟ್ ಪಾರ್ಟ್‌ಟೈಂ ಆಹಾರ ಮಂತ್ರಿ ಸಂಶೋಧನೆ!

ಇಂತಹ ಸಂಶೋಧನೆಗಳಿಗೆ ಈಗ ಕೊರತೆ ಇಲ್ಲ. ಮುಂದೆ ನೋಡಿ.

ಆಧುನಿಕ ಬಕಾಸುರರು ಯಾರು ಗೊತ್ತೆ?

ಚೀನಿಯರು, ಭಾರತೀಯರು!

ಯಾರು ಇದನ್ನು ಹೇಳಿದವರು?

ವಿಶ್ವದ ಹಿರಿಯಣ್ಣ ಹಿರಿಯಕ್ಕ.

ಅಂದರೆ ಯಾರು?

ಇನ್ನಾರು ಇರಲು ಸಾಧ್ಯ? ಬುಷ್ ಹಾಗೂ ಕಾಂಡೋಲಿಸಾ ರೈಸ್!

ಇದಕ್ಕೇನು ಪುರಾವೆ?

ಯಾವುದಕ್ಕೆ? ಅವರೇ ಹೇಳಿದ್ದರು ಅನ್ನುವುದಕ್ಕಾ?

ಅಲ್ಲ, ಬಕಾಸುರರು ಅನ್ನುವುದಕ್ಕೆ!

ಆಹಾರದ ಕೊರತೆ!

ಅಮೆರಿಕಾದವರು ಆಹಾರ ಸೇವಿಸುವುದಿಲ್ಲವೊ? ಸೇವಿಸುತ್ತಾರೆ. ಅದರ ಪ್ರಮಾಣ ಅಷ್ಟೇ ಇದೆ.

ಭಾರತ ಚೀನಿಯರದ್ದು?

ಯದ್ವಾತದ್ವಾ ಏರಿದೆ!

ಯಾಕೆ ಹೀಗಾಯಿತು?

ಆರ್ಥಿಕ ಸುಧಾರಣೆ!

ಕೊರತೆ ನೀಗಿಸಲು ಆರ್ಥಿಕತೆ ಸುಧಾರಿಸದಿರುವುದೇ ಸೂತ್ರವೆ?

ಇರಬಹುದು!

ಅಮೆರಿಕದ ಆಹಾರ ಉತ್ಪಾದನೆ ಹೇಗಿದೆ?

ಸಮೃದ್ಧವಾಗಿದೆ.

ಹೆಚ್ಚುವರಿ ಆಹಾರ ಏನು ಮಾಡುತ್ತಾರೆ?

ಎಥೆನಾಲ್ ಉತ್ಪಾದಿಸಲು ಬಳಸುತ್ತಾರೆ!

ಮನುಷ್ಯನ ಆಹಾರ ವಾಹನದ ಆಹಾರವಾಗಬೇಕೆ?

ಇದು ಅನಿವಾರ್ಯ!

ಯಾಕೆ ಪೆಟ್ರೋಲ್ ಇಲ್ಲವೆ?

ಅದಕ್ಕೂ ಕೊರತೆ!

ಇದಕ್ಕೆ ಯಾರು ಹೊಣೆ?

ಅದೇ ಬಕಾಸುರರು!

ಅಂದರೆ?

ಚೀನೀಯರು, ಭಾರತೀಯರು!

ಇದು ಹೇಗೆ?

ಆರ್ಥಿಕ ಸುಧಾರಣೆ ಹೆಚ್ಚೆಚ್ಚು ವಾಹನಗಳನ್ನು ಬಳಸುವಂತೆ ಪ್ರೇರೇಪಿಸಿದೆ!

ಇದಕ್ಕೂ ಅವರ ಆರ್ಥಿಕ ಹಿಂಜರಿತವೇ ಪರಿಹಾರವೆ?

ಹೌದು ಅದೊಂದೇ!!

ಅಮೆರಿಕ ನ್ಯಾಯ!

ಮುಫತ್ತಾಗಿ ಏನನ್ನೂ ನೀಡಬಾರದು.

ಅದ್ಭುತವಾದ ಮಾತು. ಮೇಲೆ ಬಿದ್ದು ಬಂದೋಳು ಮೂರು ಕಾಸಿಗೂ ಬ್ಯಾಡ ಅಲ್ಲವೆ?

ಇದರ ಮುಂದುವರಿಕೆ- 'ಸಬ್ಸಿಡಿ ನೀಡಬಾರದು!'

ಯಾಕೆ ನೀಡಬಾರದು?

ಆರ್ಥಿಕತೆ ಹಿಂಜರಿಯುತ್ತೆ!

ವಿಶ್ವ ವಾಣಿಜ್ಯ ಸಂಸ್ಥೆಗಳ ಫರಮಾನು.

ಆಯಿತು ಎಲ್ಲ ದೇಶಗಳಿಗೂ ಇದು ಅನ್ವಯವಾಗುತ್ತೊ?

ಅಣಕ

ಎಚ್.ಎಲ್. ಕೇಶವಮೂರ್ತಿ

ಇಲ್ಲಿ ಒಂದು ಘಟನೆ.

ಭಾರತೀಯ ರೈತನನ್ನು ಯಾರೋ ಕೇಳಿದರಂತೆ- 'ನಿನ್ನ ಜೀವನದ ಆಸೆ ಏನು?'

'ಅಮೆರಿಕದಲ್ಲಿ ಹಸುವಾಗಿ ಹುಟ್ಟುವುದು' ಅಂದನಂತೆ ಆತ!

ಯಾಕೆ ಈ ಆಸೆ ಬಡರೈತನಿಗೆ?

ಯಾಕೆಂದರೆ ಅಲ್ಲಿ ಒಂದು ಹಸುವಿಗೆ ಒಂದು ದಿನಕ್ಕೆ ಮೂರು ಡಾಲರ್ ಸಬ್ಸಿಡಿ ಸಿಗುತ್ತೆ!

ಇಲ್ಲಿ ಬೇಡ, ಅಲ್ಲಿ ಬೇಕು!

ಜ್ಯೋತಿಷಿಗಳು ಬಿಸಿ!

ಜ್ಯೋತಿಷಿಗಳ ಮುಖದ ಮೇಲೆ ಮಂದಹಾಸ.

ಏನು ವಿಶೇಷ?

ಬಂಪರ್ ಬಹುಮಾನ ಹೊಡೆಯುವ ಅವಕಾಶ!

ಮುಖ್ಯಮಂತ್ರಿ ಯಾರು? ಆಯ್ದ ಹದಿನೇಳು ಕ್ಷೇತ್ರಗಳಲ್ಲಿ ಯಾರು ಎಷ್ಟು ಅಂತರದಿಂದ ಗೆಲ್ಲುತ್ತಾರೆ? ಇಂತಹ ಸುಲಭದ ಪ್ರಶ್ನೆಗಳು.

ಬಹುಮಾನ-ವಿಚಾರವಾದಿ ನರೇಂದ್ರ ನಾಯಕ್ ಅವರಿಂದ.

"ಓಟು ಕೇಳಕ್ಕೂ ಹೋಗಲಿಲ್ವೆ?"

"ಇಲ್ಲ ಕಣೆ. ನನ್ನಂಥೋನ್ನ ಗೆಲ್ಲಿಸಬೇಕಾದ್ದು ನಿಮ್ಮಂಥೋರ ಕರ್ತವ್ಯ. ಈ ನ ಕೊಟ್ಟರೂ ಹಣ್ಣ ಚೆಲಾಯ್ತು. ತಿಳಿವಳಿಕೆ ಇರೋ ನಿಮ್ಮಂಥೋರಿಗೆ ಗೇ ಓಟು ಕೊಡಿ ಅಂತ ಕೇಳದಿಲ್ಲ ಅಂತ ಮೌನವ್ರತ ಕುಂತಿದ್ನಂತೆ. ಕೇನೇಳ್ತೆ!"

"ನೋಡು ಮತ್ತೆ, ಅವುನು ಕಂದ್ಯ ಗಂಡು ಮಗ. ತಪ್ಪಿ ಪಟೇಲನ ಲಿ ಹುಟ್ಟವುನೆ ಬುಡು" ಎಂದ ಸೀರ.

"ಅವ್ನು ಈಗುಟ್ಟ ಬಾರದಿತ್ತು ಚಿಗಪ್ಪ ಗಾಂಧಿ ಕಾಲದಲ್ಲಿ ಹುಟ್ಟಬೇಕಾಗಿತ್ತು" ಮಕೊಂಡು ವಾಟಿಸ್ಸೆ ಬಂದ.

"ಕುಡುದು ಬಂದಿದ್ದೆಯೇನ್ಲ?"

"ಇಲ್ಲ ಕಣಕ್ಕ, ಗಾಡ್ ಪ್ರಾಮಿಸ್ ಕುಡುದಿಲ್ಲ"

"ಕುಡಿಯದಾದ್ರೆ ಬ್ರಾಂದಿ, ಬೀರು ಕುಡಿಲ. ಸರಾಪು ಕುಡಿಬ್ಯಾಡ."

"ಕುಡಿಯೋ ವಿಷಯದಲ್ಲಿ ನಾನು ತುಂಬಾ ಇಂಟ್ಲುಜೆಂಟು ಕಣಕ್ಕ. ವ ಮಾಲು ಎಲ್ಲಿಂದ ಬತ್ತದೆ ಅಂತ ತಿಳಕಂಡು ಕುಡಿತಿನಿ."

"ಅದ್ಕಲ್ಲ ಪ್ರವರ ಬ್ಯಾಡ. ಸಿಕ್ಕಿ ಸಿಕ್ಕಿತ್ತ ಕುಡಿಯಕ್ಕೋಗಬ್ಯಾಡ."

"ಇಲ್ಲ ಕಣಕ್ಕ, ಇನ್ನು ಮ್ಯಾಲೆ ಶರಾಪ ಕುಡಿಯದೆ ಆದ್ರೆ ನಮ್ಮ ಸೀರ ಪ್ಪನಿಗೆ ಒಂದಿಷ್ಟು ಶಾಂಪಲ್ ಕೊಟ್ಟು ಆಮ್ಯಾಲೆ ಕುಡಿತಿನಿ."

"ಆದ್ಯಾಕವುನಿಗೆ ಕೊಡ್ತೀ?"

"ಚಿಗಪ್ಪನ ಕ್ಯಲಸ ಕಂಪ್ಲೀಟಾಗ್ಯದೆ. ಮನಿಗೆ ಸೊಸೆನು ಬಂದವ್ಳೆ. ಅಳಿಂಯದಿರು ದವ್ರೆ. ಈಗಾಗ್ಲೆ ಮನೆವಳಗೆ ಮನಿಕಳದೆ ಕೊಡಗೆಲಿ ಮನಿಕತ್ತನೆ. ಆದ್ರಿಂದ ಬಿಟ್ಟ ಟೇಸ್ಟ್ ನೋಡಬವ್ರುದು."

"ಅಮಿಕ್ಕಂಡು ಕೂತಗಳ್ಳೆ. ಕಳ್ಳಬಟ್ಟಿಯ ನನ್ನ ಜೀವಮಾನದಲ್ಲೇ ಕುಡದಿಲ್ಲ ತ್ತ?" ಎಂದು ಸೀರ ಸಿಟ್ಟಾದ.

"ಬಲ್ಲಾವಳ್ಳಿ ಪಾಪೆಗೌಡ್ರು ತರ್ತಾಯಿದ್ದದ್ದು ಕಳ್ಳಬಟ್ಟನೊ, ಸರ್ಕಾರಿ ಸರಾಪೊ ನು ನೋಡನ?"

"ಆದ್ಯಾಲ್ಲ ಈಗ್ಯಾಕೆ? ಮುಚಗಂಡೋಗು" ಎಂದ ಸೀರ.

"ಟೈಮೆಸ್ಸಾಯಿತೊ ಉಗ್ರಿ? ಇನ್ನೇನು ರಿಜಲ್ಟು ಅನವುನ್ಸಾಯ್ತದೆ. ಇದೊಂತರ ಟಿ-ಟ್ವೆಂಟಿ ಮಾಚಿದ್ದಂಗೆ" ಎಂದ ವಾಟಿಸ್ಸೆ.

"ಮ್ಯಾಚಲ್ಲ ಕಣೊ, ಸರಾಪು ಕುಡುದು ಸತ್ತೋರ ಸುದ್ದಿಯಂಗೆ ಇರತದೆ. ತ್ತು ಸಂಜೆವಳಗೆ ಯಾರೋದ್ರು ಯಾರುಳಕಂಡ್ರು ಅನ್ನದ್ಯಲ್ಲ ಗೊತ್ತಾಯ್ತದೆ."

"ಚಿಕ್ಕಣ, ಈ ಟೈಮಲ್ಲಿ ನೀನೊಂದು ಟಿವಿ ತಂದು ಮಡಿಕಬೇಕು ಕಣೊ. ದೀಗ ಟಿವಿ ಇರೋರ ಮನೆ ಹುಡಿಕ್ಕಂಡೋಗಬೇಕು ನಾನು" ಎಂದುಕೊಂಡು ಟಿಸ್ಸೆ ಬಿರುಸಿನಿಂದ ಹೋದ. ■

ಪಡೆಯಲು ಅರ್ಹರು?

ಭವ್ಯ ಭಾರತದಲ್ಲಿ ಅವರಿಗೇನು ಕೊರತೆ?

1980 ರಿಂದ ಪ್ರತಿ ಚುನಾವಣೆಯಲ್ಲೂ ಇವೇ ಪ್ರಶ್ನೆ. ಆದರೆ ಯಾವ ರಾಂಡ ಜ್ಯೋತಿಷಿಯೂ ಗೆದ್ದಿಲ್ಲ.

ಯಾಕೆ ಗೆದ್ದಿಲ್ಲ?

ಪ್ರಾಯಶಃ ಒಂದು ಲಕ್ಷ ರೂಪಾಯಿಯೇ ಎಂಬ ತಾತ್ಸಾರವಿರಬ ದು. ಅದಕ್ಕೆ ಈ ವರ್ಷ ಅದನ್ನು ಹತ್ತು ಲಕ್ಷ ಮಾಡಿದಾರೆ ನಾಯಕರು.

ಆದರೂ...

ಯಾರೂ ಗೆಲ್ಲುವಂತೆ ತೋರುವುದಿಲ್ಲ!

ದೈವಭೀರು ಭಾರತದಲ್ಲಿ ಜ್ಯೋತಿಷಿಗಳಿಗೆ ಬಂದಿತೆ ಕೊರತೆ?

ಸಾಧ್ಯವಿಲ್ಲ!

ಆದರೂ ಯಾಕೆ ಪ್ರಯತ್ನಿಸಿಲ್ಲ....? ಕೆಲವರು ಈ ಹಿಂದೆ ನೀಡಿದ ತ್ತರಗಳು ಹಾಸ್ಯಾಸ್ಪದವಾಗಿದ್ದವು ಎಂದೆ?

ಇಲ್ಲ ಇಲ್ಲ, ನಿಜವಾದ ಜ್ಯೋತಿಷಿಗಳಿಗೆ ಹಣದ ಆಮಿಷ ಇಲ್ಲ! ದ್ದೆ ಅವರಿಗೆ ಈಗ ಪುರುಸೊತ್ತು ಇಲ್ಲ, ಅವರೆಲ್ಲರ ದೃಷ್ಟಿ ಈಗ ದ್ರಿತವಾಗಿರುವುದು.... 'ಮುಖ್ಯಮಂತ್ರಿ' ಮಾಡಲು! ಹೀಗಿರುವಾಗ ತಹ ಜುಜುಬಿ ಪ್ರಶ್ನೆಗಳಿಗೆ ಉತ್ತರ ನೀಡಲು ಸಮಯವಾದರೂ ಎಲ್ಲಿ ತ್ತೆ ಹೇಳಿ!

ವಿಚಿತ್ರ ನೈತಿಕತೆ!

ತಮಿಳುನಾಡಿಗೂ ನೈತಿಕತೆಗೂ ಅವಿನಾಭಾವ ಸಂಬಂಧ. ಅದಕ್ಕೆಂದೇ ಲ್ಲೊಂದು ನೈತಿಕ ಸೇನೆ. ಮಾರಲ್ ಬ್ರಿಗೇಡ್.

ಏನು ಅದರ ಕೆಲಸ?

ಅನೈತಿಕ ತಾಣವನ್ನು ಹುಡುಕಿ ಪ್ರತಿಭಟಿಸುವುದು!

ಹಾಗಾದರೆ ತಮಿಳುನಾಡಿನಲ್ಲಿ ಅನೈಕತೆಯೇ ಇಲ್ಲವೆ?

ಇರಬಹುದು. ಅದು ತಾಂಡವೇ ಆಡುತ್ತಿರಬಹುದು. ಅವರ ದೃಷ್ಟಿ ಪ್ರತಿಷ್ಠಿತ ಸಿನಿಮಾ ತಾರೆಯರತ್ತ, ಈಗ ಅವರ ಕೆಂಗಣ್ಣು ಮಲ್ಲಿಕಾ ವತ್‌ರತ್ತ ಬದ್ದಿದೆ.

ಆಕೆ ಎಸಗಿದ ಅನೈತಿಕ ಕೃತ್ಯ ಯಾವುದು?

ವೇದಿಕೆಯಲ್ಲಿ ಕಾಲು ಮೇಲೆ ಕಾಲು ಹಾಕಿ ಕುಳಿತಿದ್ದು!


ಇದೇನು ಕಡಿಮೆ ಅಪರಾಧವೆ? ಕಮಲಾಹಾಸನ್ ಅವರ 'ದಶಾವ ರಂ' ಚಿತ್ರದ ಆಡಿಯೋ ಕ್ಯಾಸೆಟ್ ಬಿಡುಗಡೆಯ ಸಂದರ್ಭದಲ್ಲಿ ಹೀಗೆ ಪ್ಯವಾಗಿ ನಡೆದುಕೊಳ್ಳಬಹುದೆ ಆಕೆ?

ನಡೆಸಿದರು ಪ್ರತಿಭಟನೆ!

ಹೌದು ವೇದಿಕೆಯಲ್ಲಿದ್ದ ಪುರುಷರಾರೂ ಹೀಗೆ ಕುಳಿತಿರಲಿಲ್ಲವೆ?

ತಲೆಹರಟೆ ಬೇಡ. ನೈತಿಕತೆ ಇರಬೇಕಾದ್ದು ಪುರುಷರಿಗಲ್ಲ, ಮಹಿಳೆ ರಿಗೆ! ■

ಮರೆಯುವ ಮುನ್ನ




ಪಿ. ಲಂಕೇಶ್ -ಆಗಸ್ಟ್ 5, 1990

ಕ್ಯಾಪ್ಟನ್ ಆದದ್ದು

ಫುಟ್‌ಬಾಲ್ ಪಂದ್ಯ ನಡೆಯುತ್ತಿದ್ದಾಗ ಫುಟ್‌ಬಾಲ್, ಕ್ರಿಕೆಟ್ ಮ್ಯಾಚ್‌ಗಳಿದ್ದಾಗ ಕ್ರಿಕೆಟ್; ಗಲ್ಲಿಗಲ್ಲಿಗಳಲ್ಲಿ ಹುಡುಗರು ಸೋಡಾ ಬಾಟ್ಲಿ ಸ್ಪಿರಿಟ್ ತೋರುತ್ತಾರೆ. ನಮ್ಮಂಥವರಿಗೆ ನಮ್ಮ ಆಟದ ರಾಮಾಯಣ ನೆನಪಾಗುತ್ತದೆ. ನಾನು ಹೈಸ್ಕೂಲು ಎಂಟನೆ ತರಗತಿಯಲ್ಲಿದ್ದಾಗ ಒಂದು ಬೆಳಗ್ಗೆ ನನಗೆ ಶಾಕ್ ಕಾದಿತ್ತು, ನಾನು ಹಳ್ಳಿಯಿಂದ ಶಾಲೆಗೆ ಹೋದೊಡನೆ ಗೆಳೆಯರೆಲ್ಲ ಅಭಿನಂದನೆ ಹೇಳುವವರೇ-ಏನೋ ಆಗಿದೆ ಎಂದು ಎದೆ ಹೊಡೆದುಕೊಳ್ಳತೊಡಗಿತು. ಕೃಷ್ಣಮೂರ್ತಿ ಎಂಬ ನಮ್ಮ ಮೇಷ್ಟ್ರು ನನ್ನನ್ನು ಫುಟ್‌ಬಾಲ್ ಕ್ಯಾಪ್ಟನ್ ಮಾಡಿದ್ದರು. ಚಿಣ್ಣಿದಾಂಡು, ಊರಿನ ಚೆಂಡು, ಲಗ್ಗೆ ಬಿಟ್ಟರೆ ನಾನು ಬೇರೇನನ್ನು ಆಡಿದವನೇ ಅಲ್ಲ; ಊರಿನಿಂದ ಶಾಲೆಗೆ ಮೂರು ಮೈಲಿ ಅಲೆಯುವುದು, ಅಲ್ಲಿಂದ ಹೈಸ್ಕೂಲಿಗೆ ಬಂದ ಮೇಲೆ ನಿತ್ಯ ಒಂಭತ್ತು ಮೈಲಿ ರೈಲಿನಲ್ಲಿ ಓಡಾಟ. ನನಗೇ ಆಶ್ಚರ್ಯವಾಗಿ ನನ್ನನ್ನು ಫುಟ್‌ಬಾಲ್ ಕ್ಯಾಪ್ಟನ್ ಮಾಡಿದ್ದೇಕೆ ಎಂದು ಕೇಳಿದೆ; ಕ್ಲಾಸಿನ ಅತ್ಯುತ್ತಮ ವಿದ್ಯಾರ್ಥಿ ಎಂಬ ಕಾರಣಕ್ಕೆ ಮಾಡಿದ್ದರಂತೆ. ನಿತ್ಯ ಬಾಲ್ ತೆಗೆದುಕೊಂಡು ಸಾಕಷ್ಟು ಜನ ಗೆಳೆಯರನ್ನು ಕೂಡಿಸಿಕೊಂಡು ಫುಟ್‌ಬಾಲ್ ಗೊತ್ತಿದ್ದ ಟೀಮ್‌ಮೇಟ್‌ಗಳಿಂದಲೇ ಆಟದ ನಿಯಮ ಕಲಿಯಬೇಕಾಯಿತು. ನಮ್ಮ ನ್ಯಾಷನಲ್ ಹೈಸ್ಕೂಲ್ ಸರ್ಕಾರಿ ಹೈಸ್ಕೂಲಿನ ಮೇಲೆ ಮ್ಯಾಚ್ ಆಡಿ ಮಣ್ಣುಮುಕ್ಕಿದ್ದೂ ಆಯಿತು. ನನಗೆ ಇವತ್ತಿಗೂ ಈ ಯುರೋಪಿನ ಆಟಗಾರರು ಚೆಂಡನ್ನು ಬ್ಯಾಲಿಸ್ಟಿಕ್ ಮಿಸೈಲ್ ಒದ್ದಂತೆ ಒದೆಯುವುದು, ಬಾಂಬ್ ಹಾಕಿದಂತೆ ಮೇಲಿನಿಂದ ಸರಿಯಾದ ಸ್ಥಳದಲ್ಲಿ ಎಸೆಯುವುದು, ತಲೆಯಿಂದ ಫುಟ್‌ಬಾಲ್ ಆಡುವುದು-ಜಗತ್ತಿನ ವಿಸ್ಮಯಗಳಲ್ಲಿ ಹಲವು. ನಮ್ಮ ಉಪಾಧ್ಯಾಯರ ವಿಶ್ವಾಸ ನನಗೆ ತಂದ ಮುಜುಗರ ಅಷ್ಟಿಷ್ಟಲ್ಲ.



ಭಾರತ್ ಭವನ



ಭೋಪಾಲ್ ಈಗ ಸುದ್ದಿಯಲ್ಲಿದೆ. ಮಧ್ಯಪ್ರದೇಶದ ರಾಜಧಾನಿ ಭೋಪಾಲ್; ಅಲ್ಲಿಯ ಭಾರತ್ ಭವನದ ಮೇಲೆ ಚಿಡ್ಡಿಗಳ ಕಣ್ಣುಬಿದ್ದಿದೆ. ಬಿ.ವಿ. ಕಾರಂತರ ಅರ್ಧ ಜೀವನ ಕಿತ್ತುಕೊಂಡ ಜನ, ಈಗ ಭಾರತ್ ಭವನದ ಮುಖಂಡ ಅಶೋಕ್ ವಾಜಪೇಯಿಯವರನ್ನು ತಮ್ಮ ತರಲೆಗೆ ಗುರಿ ಮಾಡಿದ್ದಾರೆ. ಕಾಂಗ್ರೆಸ್‌ನ ಅರ್ಜುನ್‌ಸಿಂಗ್ ಮತ್ತು ವಾಜಪೇಯಿ ಮಧ್ಯಪ್ರದೇಶಕ್ಕೆ ಒಂದು ವ್ಯಕ್ತಿತ್ವ, ಸಾಂಸ್ಕೃತಿಕ ಕೇಂದ್ರ ಒದಗಿಸಲು ಈ ಭಾರತ್ ಭವನ ಶುರು ಮಾಡಿದರು. ನಾನು ಅಲ್ಲಿಗೆ ಮೊದಲ ಸಲ ಹೋದಾಗ ವಾಜಪೇಯಿಯವರ ಉತ್ಸಾಹ ಕಂಡು ಗೇಲಿ ಮಾಡಿದ್ದೆ, "ಲಕ್ಷಾಂತರ ಕುಟುಂಬಗಳು ತುತ್ತಿಲ್ಲದೆ ನರಳುತ್ತಿರುವಾಗ ಇಲ್ಲಿ ಕಲಾವಿದರ ಮೇಲೆ ಹೇಗೆ ಕೋಟ್ಯಂತರ ಸುರಿಯುತ್ತೀರಿ" ಅಂದಿದ್ದೆ. ಒಂದು ರೀತಿಯ ಕೃತಕ ವಾತಾವರಣ, ಲಂಗುಲಗಾಮಿಲ್ಲದ ಸ್ವೇಚ್ಛಾಚಾರ ಕಂಡು ಬೆಚ್ಚಿದ್ದೆ. ಆದರೆ ಕ್ರಮೇಣ ಇದೆಲ್ಲದರೊಂದಿಗೆ ಈ ಭಾರತ್ ಭವನ ಅತ್ಯುತ್ತಮ ಕೃತಿಯನ್ನು ಹುಡುಕಲು, ಶ್ರೇಷ್ಠ ಸಾಹಿತಿಯನ್ನು ಗುರುತಿಸಲು ಮಾಡುವ ಪ್ರಯತ್ನ ನನ್ನನ್ನು ಮುತ್ತ ತೊಡಗಿತು. ಬೇಲೂರಿನ ಶಿಲಾಬಾಲಿಕೆಯರನ್ನು ಕೆತ್ತಲು ಕೋಟ್ಯಂತರ ಹಣ ವ್ಯಯವಾಗಿರಬಹುದು; ಆದರೆ ಈ ಕಲಾಕೃತಿಗಳನ್ನು ಸೃಷ್ಟಿಸದಿದ್ದರೆ ಶಿಲಾಬಾಲಿಕೆಯರು ಇರುತ್ತಿರಲಿಲ್ಲ, ಆ ಹಣವೂ ಇರುತ್ತಿರಲಿಲ್ಲ. ಆರ್ಥಿಕ ಕ್ರಮ ಅನೇಕ ಮುಖಗಳುಳ್ಳದಾಗಿರುತ್ತದೆ; ಒಂದು ಕಡೆಯಿಂದ ಕಲೆ ಉದ್ಭವಿಸಿದರೆ ಇನ್ನೊಂದು ಕಡೆಯಿಂದ ದವಸ ಉತ್ಪತ್ತಿಯಾಗುತ್ತದೆ.

ಆದಿರಲಿ, ಈಗ ಮಧ್ಯಪ್ರದೇಶದ ಬಜೆಪಿ ಸರ್ಕಾರ ಭಾರತ್ ಭವನಕ್ಕೆ ತಾನು ಮೆಚ್ಚುವ ರೂಪ ಕೊಡುವ ಅಪಾಯವಿದೆ. ಉಡುಪಿ, ಪುರಿಗಳಲ್ಲಿ ಸಂಗ್ರಹವಾಗುತ್ತಿರುವ ಇಟ್ಟಿಗೆ ಅಲ್ಲಿ ಶೇಖರವಾಗತೊಡಗಿದರೆ ಆಶ್ಚರ್ಯವಿಲ್ಲ. ಈ ಬಜೆಪಿಗಳಿಗೆ ಗೊಬ್ಬರ, ಸಸ್ಯ, ಹೂವಿನ ಬಗ್ಗೆ ಎಷ್ಟು ಭಾಷಣ ಕೊಟ್ಟರೂ ಉಪಯೋಗವಿಲ್ಲ, ಆ ತಲೆಗಳಲ್ಲಿ ಶೂನ್ಯ ತುಂಬಿದೆ.

ನಮ್ಮ ನಗುವ ಹುಡುಕೋಣ....

ಸುಟ್ಟುಬಿಡಿ ಇವರ
ಅಧಿಕಾರದ ಮಿಂಡರ
ಗದ್ದುಗೆಗಾಗಿ ನಾಡ ಸುಡುವವರ
ಭಾವನೆಗಳಿಗೆ ಕೊಳ್ಳಿ ಇಡುವವರ
ತಾಯಿಗ್ಗಂಡರ...?

ಬಣ್ಣಗಳಿಗೆ ಸುಣ್ಣಸವರಿ
ನಮ್ಮ ನಗುವನ್ನೇ ಕದ್ದಿದ್ದಾರೆ
ಮರೆತುಹೋದ ನಗುವ ತರಲು
ಇವರ ರಕ್ತ ಹರಿಯಲಿ ಮೊದಲು
ಮನೆಗೆ ಬಂದರೆ ಇವರು
ಮಸಣಕ್ಕೆ ಕಳುಹಿಸಿ
ಓಟು ಕೇಳಿದರೆ ಬೇಟೆಯಾಡಿ

ನಮ್ಮ 'ಮತ'ಗಳ ಹಿಂದೆ
ಧರ್ಮವನ್ನಿಟ್ಟು ಮಂದಿರ ಕಟ್ಟುತ್ತಾರೆ
ಮಸೀದಿ ಒಡೆಸುತ್ತಾರೆ
ಇವರ ದೇಶಭಕ್ತಿಗೆ ನಿತ್ಯ
ನಮ್ಮ ನೆತ್ತರು ಬೀದೀಲಿ ಹರಿಯಬೇಕು

ತೊರೆದುಬಿಡಿ ಮಂದಿರ ಮಸೀದಿಗಳ
ಬಿಟ್ಟುಬನ್ನಿ ದೇವರ; ಇದ್ದರೆ ಬದುಕಿಕೊಳ್ಳಲಿ?
ಇರುವ ನಾವು ಬದುಕೋಣ


ಮತಬೇಡ ಜಾತಿ ಬೇಡ
ನೆಲದ ಮೇಲೆ ಗೆರೆಬರೆದ ದೇಶಬೇಡ
ಇವರನ್ನಾರಿಸೋದೇ ಬೇಡ
ಅಸೀಮರಾಗೋಣ
ನಮ್ಮ ನಗುವ ಹುಡುಕೋಣ.....



■ ಸಂತೋಷ ಗುದ್ದಿಯಂಗಡಿ

ಮರೆಯಾದ ಮೋಡಿಗಾರ

ನೂರೊಂದು ನೆನಪು ಎದೆಯಾಳದಿಂದ.....



ಒಡೆಯಿತು ಒಲವಿನ ಕನ್ನಡಿ

ಬರೆಯಿತು ಶೋಕದ ಮುನ್ನುಡಿ...

ಎಂಬ ಶೋಕ ಗೀತೆಯನ್ನು ಬರೆದಿದ್ದ ಆರ್.ಎನ್. ಜಯಗೋಪಾಲ್ ಇಂದು ತಮ್ಮ ಅಗಲಿಕೆಯಿಂದ ಎಲ್ಲರನ್ನೂ ಶೋಕದಲ್ಲಿ ಮುಳುಗಿಸಿದ್ದಾರೆ.

ಸುಮಾರು ಒಂದೂವರೆ ದಶಕದ ಹಿಂದ ಚಿ. ಉದಯಶಂಕರ್‌ರಂಥ ಮೇರು ಚಿತ್ರ ಸಾಹಿತಿಯ ನಿಧನದ ನಂತರ ಅರ್ಧ ತಬ್ಬಲಿಯಂತಾಗಿದ್ದ ಕನ್ನಡ ಚಿತ್ರರಂಗವನ್ನು ಇಂದು ಸಂಪೂರ್ಣವಾಗಿ ಶೂನ್ಯತೆ ಆವರಿಸಿದೆ.

ಶುದ್ಧ ಸಾಂಸಾರಿಕ ಚಿತ್ರಗಳಿಗೆ ಸಾಹಿತ್ಯವನ್ನು ಒದಗಿಸುತ್ತಿದ್ದ ಜಯಗೋಪಾಲ್ ಬರೆದ ಹಾಡುಗಳು ಒಂದೇ ಎರಡೇ... ಇವರು ಬರೆದ ಸಹಸ್ರ ಸಹಸ್ರ ಸಂಖ್ಯೆಯ ಹಾಡುಗಳು ಎಂದೆಂದಿಗೂ ಜನಮಾನಸದಿಂದ ಮಾಸಿಹೋಗದಂಥವು.

ಆರೆನ್ ಜಯಗೋಪಾಲ್ ಬರೆದ ಹಾಡುಗಳಲ್ಲಿ ಪ್ರೇಮ ಗೀತೆಗಳದ್ದೇ ಮೇಲುಗೈ ಆದರೂ ಇಂದಿನ ಚಿತ್ರ ಸಾಹಿತಿಗಳಂತೆ ಅವರು ಎಂದೂ ತಮ್ಮ ಹಾಡುಗಳ ಸಾಲಿಗೆ ಅಶ್ಲೀಲತೆಯ ಸೋಂಕನ್ನು ಲೇಪಿಸಲಿಲ್ಲ, ಮತ್ತು ಇವರ ಸಾಹಿತ್ಯದಲ್ಲಿ ಹೆಣ್ಣು ಯಾವತ್ತಿಗೂ ತುಚ್ಛವಾಗಿ ಕಾಣಲಿಲ್ಲ.

ಕನ್ನಡ ಚಿತ್ರರಂಗ ಕಂಡ ಮಹೋನ್ನತ ನಟಿ ಕಲ್ಪನಾರಿಗೆ ಮಿನುಗುತಾರೆ ಎಂಬ ಹೆಸರು ಬಂದಿದ್ದೇ ಆರ್.ಎನ್.ಜೆ.ಯವರಿಂದ. 'ಬೆಳ್ಳಿಮೋಡ' ಚಿತ್ರದಲ್ಲಿ ದ.ರಾ. ಬೇಂದ್ರೆಯವರ 'ಮೂಡಲ ಮನೆಯ...' ಹಾಡೊಂದನ್ನು ಬಿಟ್ಟು ಮಿಕ್ಕೆಲ್ಲಾ ಹಾಡುಗಳನ್ನು ಬರೆದದ್ದು ಆರ್.ಎನ್.ಜೆ. ಅದರಲ್ಲೂ 'ಬೆಳ್ಳಿ ಮೋಡದ ಅಂಚಿನಿಂದ ಮೂಡಿಬಂದ ಮಿನುಗುತಾರೆ' ಹಾಡು ಅದೆಷ್ಟು ಫೇಮಸ್ ಆಯಿತೆಂದರೆ, ಈ ಹಾಡಿನ ಕಾರಣಕ್ಕೇ ಕಲ್ಪನಾಗೆ ಮಿನುಗು ತಾರೆ ಎಂಬ ಹೆಸರು ಮುಡಿಗೇರಿತು.

'ವಿಜಯನಗರದ ವೀರಪುತ್ರ' ಚಿತ್ರದಲ್ಲಿ ಆರ್.ಎನ್. ಜಯಗೋಪಾಲ್‌ರ ಸಹೋದರ ಸುದರ್ಶನ್ ರಾಜಠೀವಿಯಿಂದ ಕುದುರೆಯ ಮೇಲೆ ಕುಳಿತು ಹಾಡುವ

ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು

ಕರ್ನಾಟವಿದುವೆ ನಿತ್ಯ ಶಿಲ್ಪ ಕಲೆಯ ಬೀಡಿದು

ಹಾಡು ಕರ್ನಾಟಕದ ಸಾಂಸ್ಕೃತಿಕ ವೈಭವವನ್ನು ಕೊಂಡಾಡಿತ್ತು. ಇಂದಿಗೂ ಆ ಹಾಡನ್ನು ಕೇಳಿದರೆ ಕನ್ನಡಿಗರ ಮನಸ್ಸಿನಲ್ಲಿ ಮಿಂಚಿನ ಸಂಚಲನವುಂಟಾಗುತ್ತದೆ.

ದಶಕದ ಹಿಂದಷ್ಟೇ ಆರ್‌ಎನ್‌ಜೆ ಬರೆದ 'ಜೀವನದಿ' ಚಿತ್ರದ 'ಶೇಷಾದ್ರಿವಾಸ ಶ್ರೀ ತಿರುಮಲೇಶ' ಎಂಬ ಭಕ್ತಿ ಗೀತೆ ಇಂದಿಗೂ ಭಕ್ತರ ನಾಲಗೆ ಮೇಲೆ ಸರಿದಾಡುತ್ತಿದೆ.

ನೀ ಬಂದು ನಿಂತಾಗ ನಿಂತು ನೀ ನಕ್ಕಾಗ ಸೋತೇ ನಾನಾಗ, ಇದೇ ನನ್ನ ಉತ್ತರ.... ನೂರೊಂದು ನೆನಪು ಎದೆಯಾಳದಿಂದ.. ಹೀಗೆ ಹಲವಾರು ಪ್ರಣಯ ಗೀತೆ ಮತ್ತು ವಿರಹ ಗೀತೆಗಳನ್ನು ಬರೆದ ಆರೆನ್ ಜಯಗೋಪಾಲ್ ಮಕ್ಕಳ ಗೀತೆಗಳನ್ನೂ ರಚಿಸಿದ್ದರು. ಮುದ್ದಿನ ಗಿಣಿಯೆ ಬಾರೋ ಮುತ್ತನು ಕೊಡುವೆ ಬಾರೋ, ಅಮ್ಮ ನಿನ್ನ ತೋಳಿನಲ್ಲಿ ಕಂದಾ ನಾನು ನಿನ್ನ ಸಂಗ ಆಡಲೆಂದು ಬಂದೆ ನಾನು, ಅಆಇಈ ಕನ್ನಡದ ಅಕ್ಷರಮಾಲೆ... ತರಹದ ಹಾಡುಗಳು ಇಂಪಾಗಿವೆಯಲ್ಲದೆ ಇವತ್ತಿಗೂ ಕಚಗುಳಿ ಕೊಟ್ಟ ಅನುಭವವಾಗುತ್ತದೆ. ಜಯಗೋಪಾಲ್‌ರ ಪದ ಬಳಕೆಯೇ ಅಂಥಾದ್ದು, ಎಂದೂ ಬತ್ತದ ಅಕ್ಷರ ಬತ್ತಳಿಕೆಯನ್ನು ಹೊಂದಿದ್ದ ಮಾಂತ್ರಿಕ ಸಾಹಿತಿ ಆರ್.ಎನ್. ಜಯಗೋಪಾಲ್.

ಆರೆನ್‌ಜೆ ಅವರ ಆಸಕ್ತಿ ಬರೀ ಸಾಹಿತ್ಯ ರಚಿಸುವುದರಲ್ಲಿ ಮಾತ್ರ ಇರಲಿಲ್ಲ, ಆಗೊಮ್ಮೆ ಈಗೊಮ್ಮೆ ಚಿತ್ರಗಳನ್ನೂ ನಿರ್ದೇಶಿಸುತ್ತಿದ್ದರು. ಜಯಗೋಪಾಲ್‌ರಿಗೆ ಕಿರುತೆರೆಯ ಬಗ್ಗೆ ಎಲ್ಲಿಲ್ಲದ ಆಸಕ್ತಿಯಿತ್ತು, ಈ ಕಾರಣಕ್ಕೆ ಅವರು ಧಾರಾವಾಹಿಗಳನ್ನು ನಿರ್ದೇಶಿಸಲು ಆರಂಭಿಸಿದರು.

ಆರೇಳು ವರ್ಷಗಳ ಹಿಂದೆ ಆರ್.ಎನ್. ಜಯಗೋಪಾಲ್ ನಿರ್ದೇಶಿಸಿದ 'ಜನನಿ' ಧಾರಾವಾಹಿ ಅಪಾರವಾದ ಮಹಿಳಾ ವೀಕ್ಷಕರನ್ನು ಮೋಡಿ ಮಾಡಿತ್ತು. ಮಧ್ಯಾಹ್ನ ಧಾರಾವಾಹಿ ಆರಂಭವಾಗುವ ಹೊತ್ತಿಗೆ ಹೆಂಗಸರು ತಮ್ಮೆಲ್ಲ ಕೆಲಸಗಳನ್ನು ಮುಗಿಸಿ ಇದಕ್ಕಾಗಿ ಕಾತರದಿಂದ ಕಾಯುತ್ತಿದ್ದರು. ಇಷ್ಟೇ ಅಲ್ಲದೆ 'ಜನನಿ' ನಟಿ ಭಾರತಿ ವಿಷ್ಣುವರ್ಧನ್‌ರಿಗೆ ಮರುಜನ್ಮವನ್ನೇ ನೀಡಿತ್ತು, ಈ ಧಾರಾವಾಹಿಯ ನಂತರ ಭಾರತಿಯವರನ್ನು ಅದೆಷ್ಟೋ ಜನ 'ಜನನಿ' ಎಂದೇ ಗುರುತಿಸಲಾರಂಭಿಸಿದ್ದರು. ಇವೆಲ್ಲದಕ್ಕೂ ಕಾರಣರಾಗಿದ್ದವರು ಆರೆನ್‌ಜೆ.

ಅಪಾರ ಸಂಯಮವನ್ನು ಮೈಗೂಡಿಸಿಕೊಂಡಿದ್ದ ಜಯಗೋಪಾಲ್ ಎಂದಿಗೂ ತಾಳ್ಮೆ ಕಳಕೊಂಡವರಲ್ಲ, ಜೊತೆಗೆ ತಮ್ಮೊಂದಿಗಿರುವವರನ್ನು ನೋಯಿಸಿದವರಲ್ಲ. ತಮ್ಮ ನಿರ್ದೇಶನದ ಧಾರಾವಾಹಿಗಳಲ್ಲಿ ಕಲಾವಿದರು ತಾವು ಬರೆದ ಸಂಭಾಷಣೆಯನ್ನು ಹೇಳಲು ಸ್ವಲ್ಪ ಕಷ್ಟಪಟ್ಟರೆ ಅದನ್ನು ತಿದ್ದಿ ಸರಳೀಕರಿಸುತ್ತಿದ್ದರು. ಎಂದೂ ಸಹ ತಾನು ಬರೆದದ್ದೇ ಸರಿ ಎಂದು ಹಠಕ್ಕೆ ಬೀಳುತ್ತಿರಲಿಲ್ಲ. ಈ ಕಾರಣಕ್ಕೇ ಆರ್‌ಎನ್‌ಜೆ ಕರೆದರೆಂದರೆ ಎಲ್ಲ ಕಲಾವಿದರೂ ಓಡಿಬರುತ್ತಿದ್ದರು. ತಮ್ಮೊಂದಿಗೆ ದುಡಿಯುವ ಪ್ರೊಡಕ್ಷನ್ ಟೀಂನವರನ್ನು ಸಹ ಆರೆನ್‌ಜೆ ತಮ್ಮ ಸ್ವಂತ ಮಕ್ಕಳ ಥರ ಟ್ರೀಟ್ ಮಾಡುತ್ತಿದ್ದರು. ಒಮ್ಮೆ ಅವರ ಪ್ರೊಡಕ್ಷನ್ ಮುಖ್ಯಸ್ಥ ರಘುಮಯ್ಯ ಅವರಿಗೆ ಕಿವಿ ಆಪರೇಷನ್ ಆಗಿತ್ತು, ಅದೇದಿನ ಆರ್.ಎನ್. ಜಯಗೋಪಾಲ್ ಅವರ ಮನೆಯಲ್ಲಿ ಕಳ್ಳರು ಎರಡು ಲಕ್ಷ ರೂಪಾಯಿಗಳನ್ನು ಹೊತ್ತೊಯ್ದಿದ್ದರು. ಆದರೂ ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳದ ಆರ್‌ಎನ್‌ಜೆ ಆಸ್ಪತ್ರೆಗೆ ಹೋಗಿ ರಘುಮಯ್ಯ ಅವರ ಖರ್ಚುವೆಚ್ಚಕ್ಕಾಗಿ ಹಣದ ಏರ್ಪಾಡು ಮಾಡಿಬಂದಿದ್ದರು. ಇದು ಜಯಗೋಪಾಲ್‌ರ ಪರೋಪಕಾರಿ ವ್ಯಕ್ತಿತ್ವವನ್ನು ತೋರಿಸುತ್ತದೆ.

ಆರೆನ್‌ಜೆ ತಮ್ಮ ಕೊನೆ ದಿನಗಳಲ್ಲೂ ಸುಮ್ಮನೇ ಕೂತವರಲ್ಲ, ಇಂದಿಗೂ ಅವರ ನಿರ್ದೇಶನದ 'ರಾಮಾಯಣ' ಧಾರಾವಾಹಿ ಕಿರುತೆರೆಯಲ್ಲಿ ಪ್ರಸಾರವಾಗುತ್ತಿದೆ. ಈ ವಯಸ್ಸಿನಲ್ಲಿ ರಾಮಾಯಣದಂಥ ಪೌರಾಣಿಕ ಧಾರಾವಾಹಿಯನ್ನು ನಿರ್ಮಿಸುವುದು ಅಷ್ಟು ಸುಲಭದ ಮಾತಲ್ಲ, ಸದ್ಯಕ್ಕೆ ಭಕ್ತ ಪ್ರಹ್ಲಾದ ಮತ್ತು ನರಸಿಂಹಾವತಾರದ ತನಕ ಪ್ರಸಾರವಾಗಿರುವ ರಾಮಾಯಣದ ವಾಲ್ಮೀಕಿ ಆಗಮನ, ದಶರಥಯಾಗ, ರಾಮನ ಬಾಲ್ಯ ಮತ್ತು ಸೀತಾ ಕಲ್ಯಾಣವನ್ನು ಮುಗಿಸಿಹೋಗಿದ್ದಾರೆ ಆರ್.ಎನ್.ಜೆ.

ಬೆಂಗಳೂರಿನ ಮಲ್ಲೇಶ್ವರದ ಫ್ಲಾಟ್ ಒಂದರಲ್ಲಿ ಅವರು ವಾಸ್ತವ್ಯ ಹೂಡುತ್ತಿದ್ದರಾದರೂ ಜಯಗೋಪಾಲ್ ಬಹಳ ವರ್ಷಗಳಿಂದ ಚೆನ್ನೈನಲ್ಲೇ ನೆಲೆಸಿದ್ದರು. ತಮ್ಮ ಮಡದಿಯೊಂದಿಗೆ ಅಲ್ಲಿ ವಿಜಯ ವಿದ್ಯಾ ವಿನೋದ ಎಂಬ ಶಾಲೆಯನ್ನು ನಡೆಸುತ್ತಿದ್ದರು. ನೆಲೆಸಿರುವುದು ತಮಿಳುನಾಡಿನಲ್ಲಾದರೂ ಜಯಗೋಪಾಲ್ ಅಲ್ಲೂ ಸಹ ತಮ್ಮ ಕನ್ನಡ ಪ್ರೇಮವನ್ನು ಮೆರೆಯುತ್ತಿದ್ದರು. ಇವರ ಶಾಲೆಯಲ್ಲಿ ಇಂದಿಗೂ ಸಹ ಕನ್ನಡವನ್ನು ಎರಡನೇ ಭಾಷೆಯಾಗಿ ಬೋಧಿಸಲಾಗುತ್ತಿದೆ. ಇದರಿಂದ ಚೆನ್ನೈನಲ್ಲಿ ನೆಲೆಸಿರುವ ಕನ್ನಡಿಗರಿಗೆ ಬಹಳ ಅನುಕೂಲವೂ ಆಗಿದೆ.

ಎಷ್ಟೇ ಕೆಲಸದ ಒತ್ತಡವಿದ್ದರೂ ಕೊಂಚವೂ ಗಡಿಬಿಡಿ ಮಾಡಿಕೊಳ್ಳದ ಇವರು ಕಷ್ಟಜೀವಿಯಾಗಿದ್ದರು ಎಂಬುದರಲ್ಲಿ ಎರಡು ಮಾತಿಲ್ಲ. ಚಿತ್ರೀಕರಣದ ಸೆಟ್‌ನಲ್ಲಿ ಎಲ್ಲರೂ ಆಯಾಸದಿಂದ ತಲೆಒರಗಿಸಿ ಮಲಗಿದ್ದರೂ ಸಹ ಆರ್‌ಎನ್‌ಜೆ ಮಾತ್ರ ಏನಾದರೊಂದು ಕೆಲಸ ಮಾಡುತ್ತಲೇ ಇರುತ್ತಿದ್ದರು. ಅಷ್ಟು ಚುರುಕು ಮತ್ತು ಕ್ರಿಯಾಶೀಲರಾಗಿದ್ದ ಆರ್‌ಎನ್‌ಜೆ ಸುಮಾರು ಏಳು ತಿಂಗಳ ಹಿಂದೆ ಜೆ.ವಿ. ಅಯ್ಯರ್ ಅವರ ಮನೆಯಲ್ಲಿ ರಾಮಾಯಣ ಧಾರಾವಾಹಿಯ ಚಿತ್ರೀಕರಣ ನಡೆಯುತ್ತಿದ್ದ ಸಂದರ್ಭದಲ್ಲಿ ತಲೆಸುತ್ತು ಬಂದು ಬಿದ್ದುಬಿಟ್ಟಿದ್ದರು. ತಕ್ಷಣ ಅವರನ್ನು ಮಲ್ಲಿಗೆ ಆಸ್ಪತ್ರೆಗೆ ದಾಖಲು ಮಾಡಿ ಶುಶ್ರೂಷೆ ನೀಡಲಾಗಿತ್ತು, ಆದರೆ ಆ ಘಟನೆಯ ನಂತರ ಆರೆನ್‌ಜೆ ಸ್ವಲ್ಪ ಮಂಕಾಗೇ ಇದ್ದರು. ಅವರ ಆರೋಗ್ಯ ಅಷ್ಟೇನೂ ಚೇತರಿಕೆಯಾಗಲೇ ಇಲ್ಲ.

ಕನ್ನಡ ಚಿತ್ರರಂಗದಲ್ಲಿ ಸಹಸ್ರಾರು ಸಂಖ್ಯೆಯ ಹಾಡುಗಳನ್ನು ಬರೆದು ಮೈಲಿಗಲ್ಲನ್ನು ಸೃಷ್ಟಿಸಿದ ಕವಿ ಮನಸ್ಸಿನ ಸಜ್ಜನ ವ್ಯಕ್ತಿ ಆರ್‌ಎನ್‌ಜೆ ಇಂದು ಎಲ್ಲರನ್ನೂ ಅಗಲಿದ್ದಾರೆ. ಆರ್.ಎನ್. ಜಯಗೋಪಾಲ್ ಎಂಬ ಅಕ್ಷರ ವ್ಯಾಮೋಹಿಗೆ ನಮ್ಮ ಭಾವಪೂರ್ಣ ಅಶ್ರುತರ್ಪಣ.

■ ಜೆ. ಅರುಣ್

ಒಂದು ಪತ್ರ

ಹಿಟ್ಲರ್ ಅದ್ವಾನಿಯ ಪಕ್ಷ ಹೇಗೆ 'ಪರಿಹಾರ'ವಾದೀತು?

"50 ವರ್ಷ ಆಳಿದ ಪಕ್ಷಕ್ಕೆ ಯಾವುದು ಮಹತ್ವದ್ದು? ನಮ್ಮ ಸಗಟು ಮತಗಳೋ ಇಲ್ಲ ಅಮೂಲ್ಯ ಜೀವಗಳೋ?"ಎಂದು ದೇಶಾದ್ಯಂತ ನಡೆದ ಭಯೋತ್ಪಾದಕ ವಿಧ್ವಂಸಕ ಕೃತ್ಯಗಳನ್ನು ತೋರಿಸುತ್ತಾ ಇದಕ್ಕೆಲ್ಲ "ಬಿಜೆಪಿಯೇ ಪರಿಹಾರ"ಎಂಬ ಜಾಹೀರಾತನ್ನು ಪ್ರತಿ ಯೊಬ್ಬರೂ ನೋಡಿರುತ್ತೀರಿ. ಯಾಕೆಂದರೆ ನಿಮಿಷಕ್ಕೊಮ್ಮೆ ಯಾವುದಾದರೊಂದು ಚಾನೆಲ್‌ಗಳಲ್ಲಿ ಇದು ಕಾಣಿಸಿಕೊಳ್ಳುತ್ತಲೇ ಇದೆ.

ಈ ಜಾಹೀರಾತಿನ ವಿರುದ್ಧ ಕೆಂಡಕಾರಿದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಹುಬ್ಬಳ್ಳಿಯ ಸಮಾರಂಭದಲ್ಲಿ "ಈ ದೇಶದಲ್ಲಿ ಭಯೋತ್ಪಾದನೆ ಈ ರೀತಿ ಹಬ್ಬಿ ಹರಡಲು ಮೂಲಕಾರಣ ಅಡ್ವಾಣಿ ಮಹಾಶಯನೇ" ಎಂದು ಬಿಜೆಪಿಗೆ ತಿರುಗೇಟನ್ನು ನೀಡಿದ್ದರು. ಇದಕ್ಕುತ್ತರವಾಗಿ ರಾಜನಾಥ್‌ಸಿಂಗ್, ಸ್ವಯಂ ಅದ್ವಾನಪ್ಪ ಮೋದಿ ಹಾಗೂ ಸುಷ್ಮಸ್ವರಾಜ್‌ಗಳೆಲ್ಲ ಯಾವುದೋ ಫೋಟಾ-ಕೊಟಾಗಳನ್ನೆಲ್ಲ ನೆಪಮಾಡಿಕೊಂಡು ಭಯೋತ್ಪಾದನೆಗೆ ಕಾಂಗ್ರೆಸ್ಸೇ ಕಾರಣ ಎಂದು ಪುನಃ ಜನರನ್ನು ನಂಬಿಸಲು ಪ್ರಯತ್ನಿಸಿದರು. ಭಯೋತ್ಪಾದನೆಗೆ ಕಾಂಗ್ರೆಸ್‌ನ ಕೊಡುಗೆ ಏನೇ ಇರಲಿ, ಬಿಜೆಪಿಯನ್ನು ಪ್ರಧಾನಮಂತ್ರಿ ಗಾದಿಯಲ್ಲಿ ಕುಳ್ಳಿರಿಸುವಂತೆ ಮಾಡಿದ ಅಡ್ವಾಣಿಗೂ ಭಯೋತ್ಪಾದನೆಗೂ ಇರುವ ನಂಟಂತೂ ಸ್ಪಷ್ಟ.

ಬಿಜೆಪಿಗೆ ಒಂದು ಗಟ್ಟಿ ನೆಲೆ ದೊರೆತ ನಂತರದ ದಿನಗಳಲ್ಲಿ ಅಡ್ವಾಣಿ ಮಹಾಶಯ ತುಂಬಾ ಬದಲಾದವರಂತೆ ವರ್ತಿಸುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯೇ. ವೃದ್ಧಾಪ್ಯದಿಂದ ಜರ್ಜರಿತರಾಗಿರುವ ವಾಜಪೇಯಿ ಸ್ಥಿತಿ ತಲುಪುವ ಮುನ್ನವೇ ಪ್ರಧಾನಿ ಕುರ್ಚಿಯಲ್ಲಿ ಕುಳಿತುಕೊಳ್ಳುವ ಕನಸು ಅಡ್ವಾಣಿಯದು. ಅದಕ್ಕಾಗಿಯೇ ಈ ಪೂರ್ವ ತಯಾರಿ. ಕುತಂತ್ರಗಾರಿಕೆಯ ಹಿನ್ನೆಲೆಯ ಅಡ್ವಾಣಿ ಇಂದು ಅಂದರಿಕಿ ಮಂಚಿವಾಡು ಅನಂತಯ್ಯನ ಪೋಸ್ ನೀಡಲು ಹೊರಟಿದ್ದಾರೆ. ಅದು ಕಾರಣವಿಲ್ಲದೇ ಜಿನ್ನಾ ಮಹಾಶಯನನ್ನು ವಾಚಾಮಗೋಚರವಾಗಿ ಹೊಗಳಿದ ಪ್ರಕರಣವಾಗಿರಬಹುದು, ಸಂಪೂರ್ಣ ಹಿಂದೂ ರಾಷ್ಟ್ರ ಅಸಾಧ್ಯವೆಂದು ಹೇಳಿಕೆ ನೀಡಿ ಶಿವಸೇನೆಯಂತವರಿಂದ ಉಗಿಸಿಕೊಂಡಂತಹ ಸಂಗತಿ ಇರಬಹುದು, ತನ್ನ ಸಹಚರರಿಂದಲೇ ಇದೊಂದು ಸುಳ್ಳುಗಳ ಕಂತೆ ಎಂದು ಶಹಭಾಷ್‌ಗಿರಿ ಗಿಟ್ಟಿಸಿಕೊಂಡಿರುವ ಅಡ್ವಾಣಿಯ ಆತ್ಮ(ವಂಚನೆಯ) ಕತೆ 'ಮೈ ಲೈಫ್, ಮೈ ಕಂಟ್ರಿ' ರಚನೆ ಇರಬಹುದು-ಇವೆಲ್ಲವುಗಳ ಉದ್ದೇಶ ಒಂದೇ: ತಾನೊಬ್ಬ ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡುವ ಸಂಭಾವಿತನೆಂದು ತೋರಿಸಿಕೊಂಡು ಹಳೆಯ ಅನಾಚಾರಗಳಿಗೆ ಆದಷ್ಟು ತೇಪೆ ಹಾಕಲು ನೋಡುವುದೇ ಆಗಿದೆ.



ಕಳೆದ ಬಾರಿ ಎನ್‌ಡಿಎ ಅಧಿಕಾರದಲ್ಲಿದ್ದಾಗ ಬಿಜೆಪಿ ಪಡೆಗಳು ಅಮೆರಿಕಾದ ಲಾಸ್ ಎಂಜೆಲಿಸ್‌ನ ಮ್ಯೂಸಿಯಂನ ಗೋಡೆಯ ಮೇಲಿದ್ದ ಚಿತ್ರವೊಂದರ ಬಗ್ಗೆ ತಲೆಕೆಡಿಸಿಕೊಂಡಿದ್ದರು. ಅಲ್ಲಿನ 'ಮ್ಯೂಸಿಯಂ ಆಫ್ ಟಾಲರೆನ್ಸ್'ನಲ್ಲಿ ಇರಾಕ್‌ನ ಸದ್ದಾಂ, ಉಗಾಂಡದ ಇದಿ ಅಮೀನ್ ನಂತವರ ಜೊತೆಗೆ "ಹಿಟ್ಲರ್ ಆಫ್ ಬಾಂಬೆ" ಎಂಬ ಶೀರ್ಷಿಕೆಯೊಂದಿಗೆ ಅಡ್ವಾಣಿಯ ಚಿತ್ರವನ್ನು ಗೋಡೆಯ ಮೇಲೆ ತೂಗು ಹಾಕಲಾಗಿತ್ತು. ಇಂತಹ ಅಭಿನವ ಹಿಟ್ಲರ್ ಇದೀಗ ಭಯೋತ್ಪಾದನೆಗೂ ತನಗೂ ಎಣ್ಣೆ-ಸೀಗೆಯ ಸಂಬಂಧ ಎಂಬಂತೆ ಮಾತಾಡುತ್ತಿರುವುದು ತಮಾಷೆಯಾಗಿ ತೋರುತ್ತದಲ್ಲವೇ?

ಭಯೋತ್ಪಾದನೆ ನಿನ್ನೆಮೊನ್ನೆಯದಲ್ಲ. ಮಾನವ ನಾಗರಿಕನೆನಿಸಿಕೊಂಡಾಗಿನಿಂದಲೂ ಅದು ಇದ್ದದ್ದೇ. ಆವತ್ತಿನ ಭಯೋತ್ಪಾದನೆ, ವಿಧ್ವಂಸಕ ಕೃತ್ಯಗಳಿಗೆ ಎಂಟೆದೆ ಬೇಕಿದ್ದರೆ ಇಂದು ಅತ್ಯಾಧುನಿಕ ತಂತ್ರಜ್ಞಾನಗಳ ಕಾರಣ ಯಾವನೋ ಒಬ್ಬ ತಲೆಕೆಟ್ಟ ಪುಕ್ಕಲನೂ ಕೂಡ ಆಟಿಕೆಯೊಳಗಿನ ಬಾಂಬನ್ನು ಥಿಯೇಟರ್‌ನೊಳಗಿಟ್ಟು ವಿಧ್ವಂಸಕ ಕೃತ್ಯವೆಸಗಬಹುದು. ಸೆಲ್ಫ್ ಲೋಡೆಡ್ ಮೆಷಿನ್‌ಗನ್‌ಗಳು, ಆಟೋಮ್ಯಾಟಿಕ್ ರಿವಾಲ್ವರ್‌ಗಳು, ರಿಮೋಟ್ ಕಂಟ್ರೋಲ್ ತಂತ್ರಜ್ಞಾನಗಳೆಲ್ಲವನ್ನು ಭಯೋತ್ಪಾದನೆಗೆ ಎಂಟೆದೆಯವನೇ ಆಗಬೇಕೆಂಬುದನ್ನು ಹುಸಿಮಾಡಿದೆ. ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ-ರಾಜ್ಯಗಳ ನಡುವೆ, ದೇಶ-ದೇಶಗಳೊಳಗೆ, ವಿವಿಧ ಭಾಷಿಕರು, ವಿವಿಧ ಧರ್ಮೀಯರ ನಡುವೆ, ಮನಸ್ತಾಪಗಳು ಇದ್ದೇ ಇರುತ್ತವೆ. ಅಂತಹವರ ದುರ್ಲಾಭ ಪಡೆದು ಕೆಲ ಮನಸ್ಸುಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತವೆ. ಇಂತಹವರ ಗುಂಪಿಗೆ ನಮ್ಮ ಅಡ್ವಾಣಿ ಮಹಾಶಯನೂ ಸೇರುತ್ತಾನೆ. ಈ ಕಾರಣಕ್ಕಾಗಿಯೇ "ಈ ನಾಡಿನಲ್ಲಿ ದ್ವೇಷದ ವಿಷ ಬೀಜ ಬಿತ್ತಿದವ" ಎಂದು ಖುಷ್ವಂತ್ ಸಿಂಗ್ ಈತನ ಬಗ್ಗೆ ಹೇಳಿದ್ದಾರೆ.

ಒಮ್ಮೆ ನನ್ನ ಅಣ್ಣ ಹೇಳಿದ್ದ : ಅವನ ಮುಸಲ್ಮಾನ ಗೆಳೆಯನೊಬ್ಬ ಮಾತನಾಡುತ್ತಾ "ಅಲ್ಲಾ ಮಾರಾಯ, ಮೊದಲು ನಾವೆಲ್ಲ ಹೇಗೆ ಇರ್‍ತಿದ್ವು? ಆದರೆ ಈಗ ನೋಡಿದ್ರೆ ನಮ್ಮವರನ್ನ ನೋಡಿದ್ರೆ ನಿಮಗಾಗಲ್ಲ, ನಿಮ್ಮವರನ್ನ ನೋಡಿದ್ರೆ ನಮಗಾಗಲ್ಲ" ಎಂದು ಹೇಳಿದನಂತೆ. ಕೆಲವರ್ಷಗಳ ಕಾಲ ವಿದೇಶದಲ್ಲಿದ್ದು ಬಂದ ಆತ ಇಂದಿನ ಸ್ಥಿತಿ ನೋಡಿ ತುಂಬಾ ಬೇಸರ ವ್ಯಕ್ತಪಡಿಸಿದನಂತೆ.

ಹಾಗಂತ 20 ವರ್ಷಗಳ ಹಿಂದೆ ಹಿಂದೂ-ಮುಸ್ಲಿಂರ ನಡುವೆ ಹೊಡೆದಾಟ ನಡೆಯುತ್ತಲೇ ಇರಲಿಲ್ಲ ಎಂದೇನೂ ಅಲ್ಲ. ಇಬ್ಬರೂ ಇಲ್ಲೇ ಒಬ್ಬರಿಗೊಬ್ಬರು ಬೇಕಾಗಿ ಬದುಕಬೇಕಿದ್ದ ಕಾರಣ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರಲಿಲ್ಲ. ಗಲಾಟೆಗಳಾದರೂ ನಂತರ ಯಾವುದೋ ಒಂದು ರೀತಿಯಲ್ಲಿ ಸಂಧಾನ ನಡೆದು ಏನೂ ನಡೆದೇ ಇಲ್ಲವೆಂಬಂತೆ ಜನ ವರ್ತಿಸುತ್ತಿದ್ದರು. ಆದರೀಗ ಊರಿಗೆ ಬೆಂಕಿ ಹಚ್ಚಲು ಸಣ್ಣ ನೆಪಕ್ಕಾಗಿ ಜನರು ತುದಿಗಾಲಲ್ಲಿ ನಿಂತಂತೆ ವರ್ತಿಸುತ್ತಿದ್ದಾರೆ. ಇಂತಹ ಒಂದು ಧಾರ್ಮಿಕ ವಿದ್ವೇಷಕ್ಕೆ ರಾಷ್ಟ್ರೀಯ ವ್ಯಾಪ್ತಿಯನ್ನು ಕೊಟ್ಟವನೇ ಈ ಅಡ್ವಾಣಿ.

ರಾಮನ ಹೆಸರಲ್ಲಿ ದೇಶದೆಲ್ಲೆಡೆ ತನ್ನ ಕುಖ್ಯಾತ ರಥಯಾತ್ರೆ, ಇಟ್ಟಿಗೆಯಾತ್ರೆಗಳ ಮೂಲಕ ವಿದ್ವೇಷ ಹರಡಿ ಬೇಳೆ ಬೇಯಿಸಿ ಕೊಂಡರೂ, ಅಧಿಕಾರ ಸಿಕ್ಕಾಗ ಮಾತ್ರ ತಾನು ಹತ್ತಿದ 'ರಾಮ'ನೆಂಬ ಏಣಿಯನ್ನೇ ಹಾಯಾಗಿ ಮರೆತು ರಾಮನಿಗೆ ದೋಖಾ ನೀಡಿದ ನಾಟಕಧಾರಿ ಈ ಅಡ್ವಾಣಿ. ಈತ ಪ್ರೇರೇಪಿಸಿ ಕೆಡವಲ್ಪಟ್ಟ ಬಾಬ್ರಿ ಮಸೀದಿಯ ಧ್ವಂಸದ ನಂತರ ಹಬ್ಬಿದ ಧಾರ್ಮಿಕ ಅಸಹಿಷ್ಣುತೆಯ ಕೆನ್ನಾಲಿಗೆ ಮಾಡಿದ ಹಾನಿ ಎಲ್ಲರಿಗೂ ತಿಳಿದದ್ದೆ. ಈ ಪ್ರಕರಣ ಕೇವಲ ಮುಸಲ್ಮಾನರನ್ನ ಗುರಿಯಾಗಿಟ್ಟುಕೊಂಡರೂ ಕ್ರಮೇಣ ಧರ್ಮದ ಹುಚ್ಚು ಅಮಲನ್ನು ತಲೆಗೇರಿಸಿಕೊಂಡ ಹಿಂದುತ್ವವಾದಿಗಳು ಇದನ್ನು ಕ್ರಿಶ್ಚಿಯನ್ನರೆಡೆಗೂ ತಿರುಗಿಸಿಕೊಂಡರು. ಇದು ಸ್ಟೇನ್ ಪಾದ್ರಿಯನ್ನು ಜೀವಂತ ಸುಟ್ಟ ಕೇಡಿ ಧಾರಾಸಿಂಗ್‌ನಂಥವರನ್ನು ಸೃಷ್ಟಿಸಿ, ಪೋಷಿಸಿತು. ಇವೆಲ್ಲವೂ ಕೂಡ ನಮ್ಮ ಅಡ್ವಾಣಿ ಮಹಾಶಯನೇ ದೇಶಕ್ಕೆ ನೀಡಿದ ಕೊಡುಗೆಗಳೇ.


ಇವನ್ನೆಲ್ಲ ನೋಡಿದಾಗ ಲಾಸ್ ಎಂಜಲೀಸ್‌ನಲ್ಲಿ ಅಡ್ವಾಣಿಗೆ ಸಿಕ್ಕಿದ ಹಿಟ್ಲರ್ ಆಫ್ ಬಾಂಬೆ ಎಂಬ ಬಿರುದು ಸರಿಯಾಗಿಲ್ಲವೆಂದೇ ತೋರುತ್ತದೆ. ಹಿಟ್ಲರ್ ಆಗಲಿ, ಅಮಿನ್ ಆಗಲಿ, ಸದ್ದಾಂ ಹುಸೇನ್ ಆಗಲಿ ಇವರೆಲ್ಲ ತಾವು ಮಾಡಿದ ಕಾರ್ಯಗಳ ಬಗ್ಗೆ ನುಣಚಿಕೊಳ್ಳಲಿಲ್ಲ, ಅದನ್ನೂ ಸಮರ್ಥಿಸಿಕೊಂಡರೇ ವಿನಃ ಈ ಅಡ್ವಾಣಿಯಂತೆ ನಾನು ಗಾಂಧಿಯ ಪುನರಾವತಾರ, ನನಗದು ಗೊತ್ತೇ ಇರಲಿಲ್ಲ ಎಂಬ ಪೋಸ್‌ನ್ನು ಇವರ‍್ಯಾರೂ ಕೊಡಲು ಹೋಗಲಿಲ್ಲ. ಆದರೆ ತನ್ನನ್ನು ಮುಂದೆ ಈ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಜನತೆ ಪ್ರಧಾನಿಯಾಗಿ ಸ್ವೀಕರಿಸದಿದ್ದರೆ ಹೇಗೆ ಎಂಬ ಭಯದ ಸಲುವಾಗಿ ಈತ ನಾಟಕವಾಡುತ್ತಿರುವುದನ್ನು ನೋಡಿದರೆ, ಆ ಹಿಟ್ಲರ್, ಅಮೀನ್‌ಗಳೆಲ್ಲ ನಾಚಿ ನೀರಾಗುವುದು ಖಂಡಿತ. ಜನರ ಭಾವನೆಗಳನ್ನು ಕೆರಳಿಸಿ ಅವರಲ್ಲಿ ಅಸುರಕ್ಷತೆಯ ವಾತಾವರಣವನ್ನು ಹುಟ್ಟುಹಾಕುವುದರ ಮೂಲಕ ಈ ದೇಶದಲ್ಲಿ ಭಯೋ ತ್ಪಾದನೆ ಹೆಚ್ಚಲು ಸ್ವಯಂ ಅಡ್ವಾಣಿಯೇ ಕಾರಣರಾಗಿರುವುದು ಹಗಲಿನಷ್ಟೇ ಸತ್ಯ.

ಈಗ ನೀವೇ ಹೇಳಿ "ಬಿಜೆಪಿಯೇ ಪರಿಹಾರ" ಎಂತದಕ್ಕೆ?

■ ರವಿ ಪುತ್ತೂರ (ದ.ಕ)

25 ವರ್ಷದ ಜಗ್ಗೇಶ್ ಜಗ್ಗಾಟ

ನವರಸ ನಾಯಕ ಜಗ್ಗೇಶ್ ಚಿತ್ರರಂಗಕ್ಕೆ ಕಾಲಿಟ್ಟು ಇಪ್ಪತ್ತೈದು ವರ್ಷಗಳೇ ಕಳೆದಿವೆ. ಅಷ್ಟೇ ಅಲ್ಲದೆ ಈಗ ಚುನಾವಣೆಯಲ್ಲಿ ಗೆದ್ದು ಅವರು ಶಾಸಕರೂ ಆಗಿದ್ದಾರೆ. ಈ ಸಂದರ್ಭದಲ್ಲಿ ಅವರು ನಡೆದುಬಂದ ಹಾದಿಯ ಕಿರು ಚಿತ್ರಣ ಇಲ್ಲಿದೆ....



ಜಗ್ಗೇಶರ ವೃತ್ತಿಜೀವನ ಇಪ್ಪತ್ತೈದು ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲೇ ಅವರ ಜೀವನದಲ್ಲಿ ಇನ್ನೊಂದು ತಿರುವು ಸಂಭವಿಸಿದೆ. ಅಂತೂ ಇಂತೂ ರಾಜಕಾರಣದಲ್ಲಿ ಅವರು ಯಶಸ್ಸು ಸಾಧಿಸಿದ್ದಾರೆ.

ಇನ್ನು ಮುಂದೆ ಅವರು ಏನು ಮಾಡುತ್ತಾರೆಂದು ನೋಡಬೇಕಿದೆ.

ಹಾಗೆ ನೋಡಿದರೆ ಈ ನವರಸನಾಯಕನ ಜೀವನವೂ ನವರಸಗಳಿಂದಲೇ ಕೂಡಿದೆ. ಆರಂಭದಲ್ಲಿ ಕನ್ನಡ ಹೋರಾಟಗಾರನೆಂದೇ ಒಂದಿಷ್ಟು ಖ್ಯಾತಿ ಮತ್ತು ಕುಖ್ಯಾತಿಯನ್ನು ಗಳಿಸಿದ ಜಗ್ಗೇಶ್ ಆ ಸಂದರ್ಭದಲ್ಲೇ ಒಂದೆರಡು ಎಡವಟ್ಟುಗಳನ್ನು ಮಾಡಿಕೊಂಡಿದ್ದರು. ಒಮ್ಮೆ ಮಂಕಿ ಕ್ಯಾಪ್ ಧರಿಸಿ 'ಬಲ್‌ಸನ್ ಮಗ' ಚಿತ್ರದ ನಿರ್ಮಾಪಕ ರಾಮಮೂರ್ತಿಯೊಂದಿಗೆ ಕಿರಿಕ್ ಮಾಡಿಕೊಂಡು ಕ್ರಿಕೆಟ್ ಬ್ಯಾಟಿನಿಂದ ಹೊಡೆದು ಸಿಕ್ಕಿಬಿದ್ದು ನ್ಯಾಯಾಲಯದ ಮೆಟ್ಟಿಲನ್ನೂ ಹತ್ತಿದ್ದರು. ಆಗ ನ್ಯಾಯಾಲಯದ ಮುಂದೆ ಹಾಜರಾದ ಜಗ್ಗೇಶ್‌ರ ಕತ್ತಿನಲ್ಲಿನ ದಪ್ಪದಾದ ಚೈನು, ಕೈಗಳಲ್ಲಿನ ಬ್ರೇಸ್‌ಲೇಟ್, ಬೆರಳುಗಳಲ್ಲಿನ ಉಂಗುರಗಳು ಮತ್ತು ಕೋರ್ಟಿನಲ್ಲೂ ಸಿನಿಮಾದಲ್ಲಿ ಡೈಲಾಗ್ ಹೊಡೆಯುವ ರೀತಿಯಲ್ಲೇ ಮಾತನಾಡಿದ್ದು, ಎಲ್ಲವೂ ನಮ್ಮ ಗಾಂಧಿನಗರದವರಿಗೆ ಹಲವಾರು ತಿಂಗಳುಗಳ ಹರಟೆಗೆ ಸಾಕಷ್ಟು ಗ್ರಾಸವನ್ನು ಒದಗಿಸಿದ್ದವು!

ಎರಡೂವರೆ ದಶಕಗಳ ಹಿಂದೆ ಬಂದ ರವಿಚಂದ್ರನ್‌ರ 'ಪ್ರೇಮಲೋಕ'ದ ಸರಿಗಮಪ ತಂಡದ ಸದಸ್ಯರಾಗಿ ಒಂದು ಚಿಕ್ಕ ಪಾತ್ರದಲ್ಲಿ ಕಾಣಿಸಿಕೊಂಡ ಜಗ್ಗೇಶ್‌ಗೆ ನಿಜವಾದ ಬ್ರೇಕ್ ನೀಡಿದ್ದು ಮಾಲಾಶ್ರೀ ಜಮಾನಾದಲ್ಲಿ ಬಂದ 'ರಾಣಿಮಹಾರಾಣಿ'. ಆ ಚಿತ್ರದಲ್ಲಿ ಉಮಾಶ್ರೀಯ ತಮ್ಮನ ಪಾತ್ರದಲ್ಲಿ ಕಾಣಿಸಿಕೊಂಡ ಜಗ್ಗೇಶ್ ತಮ್ಮ ವಿಲಕ್ಷಣ ಆಂಗಿಕಚೇಷ್ಟೆಯೊಂದಿಗೆ 'ಯಕ್ಕೋ.... ಕಡ್ಲೇಕಾಯ್ ಬೇಕಾ ಕಡ್ಲೇಕಾಯ್' ಎಂಬ ಡೈಲಾಗ್‌ಗೆ ಎಷ್ಟು ಜೀವ ತುಂಬಿದ್ದರೆಂದರೆ ಇಂದಿಗೂ ಪಡ್ಡೆ ಪೋಕರಿಗಳ ಬಾಯಿಂದ ಆ ಡೈಲಾಗ್ ಮರೆಯಾಗಿಲ್ಲ.

ಆಗಿನ ಕಾಲದಲ್ಲೂ ಇಂದಿನಂತೆ ನಾಯಕನಾಗಲು ತುಂಬಾ ಲಕ್ಷಣವಾಗಿರಬೇಕು, ಒಳ್ಳೇ ಫಿಸಿಕ್ಕಿರಬೇಕು ಎಂಬ ನಂಬಿಕೆ ಇತ್ತು. ಅಂತಹದರಲ್ಲಿ ಕರ‍್ರಗೆ, ಕುಳ್ಳಗಿದ್ದ ಜಗ್ಗೇಶ್ ನಾಯಕನಾಗಲು ಹೊರಟಾಗ ಲೇವಡಿ ಮಾಡಿದವರೇ ಹೆಚ್ಚು. ಆದರೆ ಜಗ್ಗೇಶ್‌ನಂತಹ ನಟ ಮತ್ತು ಉಪೇಂದ್ರನಂತಹ ನಿರ್ದೇಶಕ ಸೇರಿಕೊಂಡರೆ ಏನಾಗುತ್ತದೋ ಅದೇ ಆಯಿತು. ಅವರಿಬ್ಬರೂ ತಯಾರಿಸಿದ 'ತರ್ಲೆ ನನ್ಮಗ' ಸೂಪರ್ ಹಿಟ್ ಆಯಿತಲ್ಲದೆ ಅದರಲ್ಲಿದ್ದ 'ಐತೇರಿ ನೈಡಿ ಪಕ್ಕಡಿ ಜುಮ್ಮಾ' ಎಂಬ ಡೈಲಾಗ್ ಕೂಡ ಜಗ್ಗೇಶರ ಜನಪ್ರಿಯತೆಯನ್ನು ಹೆಚ್ಚಿಸಿತು.

ಅಲ್ಲಿಂದ ಜಗ್ಗೇಶ್ ಪೂರ್ಣ ಪ್ರಮಾಣದ ನಾಯಕನಾದರೂ ಅವರು ನಟಿಸಿದ್ದ ಪಾತ್ರಗಳೆಲ್ಲವೂ ಹಾಸ್ಯ ಪಾತ್ರಗಳೇ. ಒಂದಿಷ್ಟು ಚೇಷ್ಟೆ, ಒಂದಿಷ್ಟು ಪೋಲಿ ಡೈಲಾಗ್‌ಗಳು, ಒಂದೆರಡು ದೃಶ್ಯಗಳು– ಈ ಮೂರು ಅಂಶಗಳು ಮಾತ್ರ ಇದ್ದ ಅವರ ಹಲವಾರು ಸಿನಿಮಾಗಳು ಓಡದವು, ಹಿಟ್ ಆದವು. ಆದರೂ ಇತರ ನಾಯಕರಂತೆ ತಾನೂ ಹೀರೋಯಿನ್‌ಗಳನ್ನು ವರಿಸುವ, ಮರ ಸುತ್ತುತ್ತಾ ಹಾಡೇಳುವ, ಡಿಶುಂ ಡಿಶುಂ ಅಂತ ವಿಲನ್‌ಗಳನ್ನು ಹೊಡೆಯುವ ಚಿತ್ರಗಳಲ್ಲಿ ನಟಿಸಬೇಕು ಎಂದು ಅದ್ಯಾವಾಗ ಜಗ್ಗೇಶ್ ಅನ್ನಿಸಿತೋ. ಅವರು ಅಬು ಸಲೇಂ ಎಂಬ ಭೂಗತ ಪಾತಕಿಯ ಗೆಳತಿ ಮೋನಿಕಾ ಬೇಡಿಯನ್ನು ಮುಂಬೈನಿಂದ ಕರೆಸಿಕೊಂಡು 'ನನ್ನಾಸೆಯಾ ಹೂವೆ' ಎಂಬ ಚಿತ್ರದಲ್ಲಿ ನಟಿಸಿದರು. ಆ ಚಿತ್ರ ಇನ್ನಿಲ್ಲದಂತೆ ನೆಲಕಚ್ಚಿತು.

ಅದರಿಂದ ಪಾಠ ಕಲಿತ ಜಗ್ಗೇಶ್ ಆನಂತರ ತಮ್ಮ ಹಳೆಯ ದಿನ ಹಾಸ್ಯ ಚಿತ್ರಗಳಿಗೆ ಹಿಂದಿರುಗಿದರು. ಆ ಕಾರಣಕ್ಕಾಗಿಯೇ ಇವತ್ತಿಗೂ ದೊಡ್ಡ ದೊಡ್ಡ ಸ್ಟಾರ್ ಗಳ ಸಿನಿಮಾಗಳು ಮಕಾಡೆ ಮಲಗುತ್ತಿದ್ದರೂ ಜಗ್ಗೇಶ್ ಸಿನಿಮಾಗಳು ಮಾತ್ರ 'ಎ' ಸೆಂಟರ್‌ಗಳಲ್ಲದಿದ್ದರೂ 'ಬಿ' ಮತ್ತು 'ಸಿ' ಸೆಂಟರ್‌ಗಳಲ್ಲಿ ಯಶಸ್ವಿ ಆಗುತ್ತಾ ಬಂದಿವೆ. ನಿರ್ಮಾಪಕರ ಪಾಲಿಗೆ 'ಕಲೆಕ್ಷನ್ ಕಿಂಗ್' ಆಗಿರುವ ಜಗ್ಗೇಶ್ ಅಂದಿನಿಂದ ಇಂದಿನವರೆಗೂ ನಿರ್ಮಾಪಕ ಹೂಡಿದ ಹಣಕ್ಕೆ ಮಿನಿಮಮ್ ಗ್ಯಾರಂಟಿ ನೀಡುವ ಏಕೈಕ ನಟ ಆಗಿದ್ದಾರೆ.

ಇತ್ತ ಸಿನಿಮಾಗಳಲ್ಲಿ ಕೈತುಂಬಾ ಕೆಲಸ, ಅತ್ತ ಜನಪ್ರಿಯತೆ ಮತ್ತು ಸಾಕಷ್ಟು ಸಂಭಾವನೆ ಬರುತ್ತಿದ್ದರೂ ಜಗ್ಗೇಶ್ ತಮ್ಮ ಚೇಷ್ಟೆಗಳನ್ನು ಮಾತ್ರ ಬಿಡಲಿಲ್ಲ. ಒಮ್ಮೆ "ಕಿರುತೆರೆಯಲ್ಲಿ ನಟಿಸುವವರಿಗೆ ಸಿನಿಮಾಗಳಲ್ಲಿ ಅವಕಾಶ ಕೊಡಬಾರದು. ತಮ್ಮ ಮನೆಯ ಟೀವಿಗಳಲ್ಲಿ ದಿನಬೆಳಗಾದರೆ ಬಿಟ್ಟಿ ನೋಡುವ ಅವರ ಮುಖಗಳನ್ನು ಯಾರು ತಾನೆ ಕಾಸು ಕೊಟ್ಟು ನೋಡ್ತಾರೆ" ಎಂಬ ಶುದ್ಧ ಉಡಾಫೆಯ ಮಾತನ್ನು ಆಡಿ ಕಿರುತೆರೆಯವರಿಂದ ಬಹಿಷ್ಕಾರವನ್ನು



ಜಗ್ಗೇಶ್ ಹಾಕಿಸಿಕೊಂಡಿದ್ದರು. ಇನ್ನೊಮ್ಮೆ ತನಗೆ ಹೀರೋ ಪಟ್ಟವನ್ನು ನೀಡಿದ್ದ ಉಪೇಂದ್ರರನ್ನೇ ಲೇವಡಿ ಮಾಡುವಂತಹ 'ಜೀತೆಂದ್ರ' ಎಂಬ ಚಿತ್ರದಲ್ಲಿ ನಟಿಸಿ "ಈ ಉಸಾಬರಿ ಇವನಿಗ್ಯಾಕೆ ಬೇಕಿತ್ತು" ಎಂದು ಎಲ್ಲರಿಂದ ಉಗಿಸಿಕೊಂಡಿದ್ದರು. ಇದೆಲ್ಲ ಸಾಲದೆಂಬಂತೆ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ "ಎಲ್ಲರೂ ಪಾಕಿಸ್ತಾನದತ್ತ ಉಚ್ಚೆ ಹೊಯ್ಯುವ ಮೂಲಕ ಆ ದೇಶವನ್ನೇ ಮುಳುಗಡೆ ಮಾಡುವ" ಎಂದು ಸಾರ್ವಜನಿಕ ಸಭೆಯಲ್ಲಿ ಹೇಳಿ ಎಲ್ಲರಿಂದ 'ಛಿ, ಥೂ' ಎಂದೆನಿಸಿಕೊಂಡಿದ್ದರು.

ಹೀಗೆ ಕಾರಣವಲ್ಲದ ಕಾರಣಗಳಲ್ಲಿ ತನ್ನ ಮೂಗು ತೂರಿಸುತ್ತಾ ಇಲ್ಲದ ತಕರಾರುಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದ ಜಗ್ಗೇಶ್ ಒಮ್ಮೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದರು.

ಜಗ್ಗೇಶ್‌ರ ಇಂತಹ ಎಡವಟ್ಟುಗಳನ್ನು ಮತ್ತು ಆತ ಸೃಷ್ಟಿಸಿದ ರೇಜಿಗೆಗಳನ್ನು ಚಿತ್ರರಂಗ ಮತ್ತು ಪ್ರೇಕ್ಷಕರು ಸಹಿಸಿದ್ದು ಆತನ ಅಪರೂಪದ ಮತ್ತು ವಿಲಕ್ಷಣವಾದ ಪ್ರತಿಭೆಯಿಂದ. ಇಂದಿಗೂ ಜಗ್ಗೇಶ್‌ಗೆ ಅಪಾರ ಸಂಖ್ಯೆಯ ಅಭಿಮಾನಿಗಳಿದ್ದಾರೆ. ಅವರಲ್ಲಿ ಎಲ್ಲಾ ವರ್ಗದ ಜನರಿದ್ದಾರೆ. ಉದಾಹರಣೆಗೆ ಹಿರಿಯ ನಟ ಕಾಂಚನಾ ಅವರ ಸಂದರ್ಶಕರೊಬ್ಬರು 'ನಿಮಗೆ ಕನ್ನಡದಲ್ಲಿ ಯಾವ ನಟ ಇಷ್ಟ?' ಎಂದು ಕೇಳಿದಾಗ 'ಕಪ್ಪಗೆ, ಕುಳ್ಳಗೆ ಒಬ್ಬ ಕಾಮಿಡಿ ಸಿನಿಮಾಗಳಲ್ಲಿ ನಟಿಸ್ತಾನಲ್ಲಾ? ಅವ್ನನ್ನ ಕಂಡ್ರೆ ನಂಗೆ ತುಂಬಾ ಇಷ್ಟ. ಅವನ ಬಾಡಿ ಲಾಂಗ್ವೇಜು ಸೂಪರ್ಬ್' ಎಂದು ಅವರು ಜಗ್ಗೇಶ್ ಬಗ್ಗೆ ಹೇಳಿದ್ದರು.

ಜಗ್ಗೇಶ್ ಅದ್ಭುತ ನಟ ಎಂಬುದರ ಬಗ್ಗೆ ಎರಡು ಮಾತಿಲ್ಲ. ಅವರ ಡೈಲಾಗ್ ಡೆಲಿವರಿ ಮತ್ತು ಕಾಮಿಡಿ ಟೈಮಿಂಗ್ ಸಖತ್ತಾಗಿರುತ್ತೆ. ಆದರೆ ಕನ್ನಡ ಚಿತ್ರರಂಗದಲ್ಲಿ ತನ್ನೆಲ್ಲ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶಗಳು ಸಿಗುತ್ತಿಲ್ಲ ಎಂಬ ಕಾರಣಕ್ಕೋ ಏನೋ ಒಮ್ಮೆ ಜಗ್ಗೇಶ್ ತಾನು ಇಲ್ಲಿಯವರೆಗೂ ಸಂಪಾದಿಸಿದ್ದ ಹಣವನ್ನೆಲ್ಲ ಹೂಡಿ 'ಮೇಕಪ್' ಎಂಬ ಸಿನಿಮಾವನ್ನು ನಿರ್ಮಿಸಿ ಅದರಲ್ಲಿ ತಾವೇ ನಟಿಸಿದರು.

ಆದರೆ ಅಷ್ಟೊತ್ತಿಗಾಗಲೇ ತಮಿಳಿನ ಕಮಲ್ ಹಾಸನ್ 'ಅವ್ವೈ ಶಣ್ಮುಖಿ' ಎಂಬ ಚಿತ್ರದಲ್ಲಿ ಅಂತಹದ್ದೇ ಪಾತ್ರದಲ್ಲಿ ನಟಿಸಿ ಸೈ ಅನ್ನಿಸಿಕೊಂಡಿದ್ದರು. ಅದು ಗೊತ್ತಿದ್ದರೂ ಛಲ ಬಿಡದ ತ್ರಿವಿಕ್ರಮನಂತೆ ಜಗ್ಗೇಶ್ ಕೂಡ ಸೀರೆ ತೊಟ್ಟು ಮಹಿಳೆಯ ವೇಶಭೂಷಣಗಳನ್ನು ಧರಿಸಿ ಚಿತ್ರವನ್ನು ಮಾಡಿದ್ದರು. ಆದರೆ 'ಮೇಕಪ್' ಬರಕತ್ತಾಗದೇ ಅವರ ಶ್ರಮ ಮತ್ತು ಹಣವನ್ನೆಲ್ಲ ನುಂಗಿಹಾಕಿತು.

ಜಗ್ಗೇಶ್‌ರ ಇಂತಹ ಐಲು ಬುದ್ಧಿ, ಸ್ವಲ್ಪ ಹೆಚ್ಚು ಎನಿಸುವಷ್ಟು ದೌಲತ್ತುಗಳ ನಡುವೆಯೂ ಅವರಲ್ಲಿ ಕೆಲವು ಇಷ್ಟವಾಗುವಂಥಾ ಗುಣಗಳೂ ಇವೆ. ಒಬ್ಬ ಕಾಮಿಡಿ ಹೀರೋ ಆಗಿ ಜನಪ್ರಿಯತೆಯ ಉತ್ತುಂಗದಲ್ಲಿದ್ದಾಗ ಪರಭಾಷೆಗಳಿಂದ ಎಷ್ಟೇ ಅವಕಾಶಗಳು ಬಂದರೂ ಈತ ಅತ್ತ ಸುಳಿಯಲಿಲ್ಲ. ಇದು ಆತನಲ್ಲಿರುವ ಕನ್ನಡಾಭಿಮಾನಕ್ಕೆ ಸಾಕ್ಷಿ.

ಆ ಕಾರಣಕ್ಕಾಗಿ ಆತನನ್ನು ಯಾವುದೇ ವೇದಿಕೆಗೆ ಕರೆದು ಅವರ ಕೈಗೆ ಮೈಕು ಕೊಟ್ಟರೋ ನೀವು ದೊಡ್ಡ ತಪ್ಪು ಮಾಡುತ್ತೀರಿ. ಯಾಕೆಂದರೆ ಮೈಕು ಕಂಡರೆ ಸಾಕು ಬಾಯಿಯ ಮೇಲೆ ಹಿಡಿತವಿಲ್ಲದಷ್ಟು ಬಡಬಡಾಯಿಸುವುದು ಈತನ ವೀಕ್‌ನೆಸ್ಸು. ಆದರೂ ಈತ ತೀರಾ ಭಾವುಕ ಮನುಷ್ಯ. ಈತನ ಎಲ್ಲಾ ಪ್ರತಿಭೆಯನ್ನು 'ಮಠ' ಚಿತ್ರ ಹಿಡಿದಿಟ್ಟಿದ್ದು ಅದರಲ್ಲಿ ಅಭಿನಯಕ್ಕಾಗಿ ಜಗ್ಗೇಶ್‌ಗೆ ಪೋಷಕ ನಟ ಎಂದು ರಾಜ್ಯಪ್ರಶಸ್ತಿ ಘೋಷಿಸಲ್ಪಟ್ಟಾಗ ಅದನ್ನು ಸ್ವೀಕರಿಸಲು ನಿರಾಕರಿಸಿದ. 'ನನಗೆ ನಾಯಕ ನಟನ ಪ್ರಶಸ್ತಿ ಕೊಡಬೇಕಿತ್ತು, ಇದು ನನಗೆ ಬೇಡ' ಎಂದು ಗೊಳೋ ಎಂದು ಕಣ್ಣೀರಿಟ್ಟಿದ್ದರು. ಹಾಗೆಯೇ ತೀರಾ ಮೊನ್ನೆಮೊನ್ನೆ ಕಾಂಗ್ರೆಸ್‌ನವರು ಟಿಕೆಟು ಕೊಡದೇ ಕಣ್ಣಾ ಮುಚ್ಚಾಲೆ ಆಡಿಸಿದಾಗಲೂ ಅಪ್ಪ ಅಮ್ಮನ ಬಳಿ ಲಾಲಿಪಪ್ಪು, ಐಸ್‌ಕ್ರೀಮ್‌ಗೋಸ್ಕರ ರಚ್ಚೆ ಹಿಡಿದು ಊಳಿಡುವ ಮಕ್ಕಳಂತೆ ಅತ್ತಿದ್ದರು ಈ ಜಗ್ಗೇಶ್.

ದೊಡ್ಡ ದೊಡ್ಡ ರಾಜಕಾರಣಿಗಳಂತೆ ನಾನೂ ಸ್ಟೇಜಿನ ಮೇಲೆ, ಬಿಳೀ ಹಾಸಿಗೆ ಮೇಲೆ ಕುಳಿತುಕೊಳ್ಳಬೇಕು ಎಂಬ ಸಿಲ್ಲಿ ಆಸೆಯಿಂದ ರಾಜಕಾರಣಕ್ಕಿಳಿದ ಜಗ್ಗೇಶ್‌ಗೆ ಆರಂಭದಲ್ಲಿ ರಾಜಕೀಯ ಹುಡುಗಾಟಿಕೆಯಂತೆ ಕಂಡಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಾಗಲಂತೂ ಗಾಂಧಿನಗರಿಗಳು ಜಗ್ಗೇಶ್‌ರನ್ನು ಇನ್ನಿಲ್ಲದಂತೆ ಅಪಹಾಸ್ಯ ಮಾಡಿದ್ದರು. ತನ್ನ ತಪ್ಪನ್ನು ಅರಿತ ಜಗ್ಗೇಶ್ ಕಳೆದ ಐದು ವರ್ಷಗಳಿಂದ ತನ್ನ ಕ್ಷೇತ್ರವಾದ ತುರುವೇಕೆರೆಯೊಂದಿಗೆ ನಿಕಟವಾದ ಸಂಪರ್ಕವನ್ನಿಟ್ಟುಕೊಂಡಿದ್ದರು. ತನ್ನ ಕೈಲಾದಷ್ಟು ಸಮಾಜ ಸೇವೆಯನ್ನೂ ಮಾಡಿದರು. ಈಗ ಚುನಾವಣೆಯ ಫಲಿತಾಂಶವೂ ಬಂದಿದೆ. ಈ ಚುನಾವಣೆಯಲ್ಲಿ ಜಗ್ಗೇಶ್ ಜಯಭೇರಿ ಬಾರಿಸುವ ಮೂಲಕ ಬಹಳ ದಿನದ ಕನಸನ್ನು ನನಸು ಮಾಡಿಕೊಂಡಿದ್ದಾರೆ.

ಆರಂಭದ ವಕ್ರಬುದ್ಧಿ, ಉಡಾಫೆತನದಿಂದ ಸದ್ಯಕ್ಕೆ ದೂರವಿರುವ ಜಗ್ಗೇಶ್ ಈಗ ಜನನಾಯಕನಾಗಿ ಆಯ್ಕೆಗೊಂಡಿದ್ದಾರೆ. ಇನ್ನಾದರೂ ಸಿನಿಮಾ ಮತ್ತು ರಾಜಕಾರಣದ ವ್ಯತ್ಯಾಸವನ್ನು ಅರಿತು ತನ್ನನ್ನು ನಂಬಿರುವ ಜನತೆಯ ಪರವಾಗಿ ಪ್ರಾಮಾಣಿಕವಾದ ಕೆಲಸಗಳನ್ನು ಮಾಡಲಿ ಎಂಬುದೇ ಹಾರೈಕೆ.

■ ಅರುಣ್.ಜಿ

ಜಗ್ಗೇಶ್‌ರ ಬದುಕಿನ ಇನ್ನೊಂದು ಸೋಜಿಗ. ವಿಷಯವೇಂದರೆ ಅವರ ಸಿನಿಮಾಗಳಲ್ಲಿರದ ಗಂಭೀರತೆ ಅವರ ಖಾಸಗಿ ಬದುಕಿನಲ್ಲಿದೆ. ಯಾಕೆಂದರೆ ತೆರೆಯ ಮೇಲಿನ ತರ್ಲೆ ಜಗ್ಗೇಶ್ ಮನೆಯಲ್ಲಿ ಸೀರಿಯಸ್ ವ್ಯಕ್ತಿ. ಜೇಬಿನಲ್ಲಿ ಚಿಕ್ಕಾಸೂ ಇಲ್ಲದಾಗ ಹುಡುಗಿಯೊಬ್ಬಳನ್ನು ಪ್ರೇಮಿಸಿ ಓಡಿಸಿಕೊಂಡು ಮದುವೆ ಆದರು. ಅಷ್ಟೇ ಅಲ್ಲ, ಕಟ್ಟಿಕೊಂಡ ಹೆಂಡತಿಗೆ ಒಪ್ಪೊತ್ತಿನ ಊಟ ಹಾಕುವುದೇ ಕಷ್ಟಕರವಾದ ಪರಿಸ್ಥಿತಿಯಲ್ಲಿದ್ದರೂ ಸಹ ಜಗ್ಗೇಶ್ ತನ್ನ ಪತ್ನಿ ಪರಿಮಳಾಗೆ ಉನ್ನತ ಶಿಕ್ಷಣವನ್ನು ನೀಡಿ ಇಂಜಿನಿಯರನ್ನಾಗಿಸಿದವರು. ಅಲ್ಲದೆ ತನ್ನ ಸಹೋದರ ಕೋಮಲ್‌ನನ್ನೂ ಚಿತ್ರರಂಗಕ್ಕೆ ಕರೆ ತಂದು ಆತನಿಗೆ ಉತ್ತಮ ಮಾರ್ಗದರ್ಶನವನ್ನು ನೀಡಿ ಜೀವನದಲ್ಲಿ ನೆಲೆಗೊಳ್ಳುವಂತೆ ಮಾಡಿದರು. ಇವತ್ತು ಕೋಮಲ್ ಈ ಎತ್ತರಕ್ಕೆ ಬೆಳೆದ ಸಾಧಿಸಿದನಾಗಿದ್ದರೆ ಅದರಲ್ಲಿ ಅವನ ಪ್ರತಿಭೆ ಮತ್ತು ಜಗ್ಗೇಶ್‌ರ ಕೊಡುಗೆ ಎರಡೂ ಪಾತ್ರ ವಹಿಸಿವೆ.

ಇಷ್ಟರಲ್ಲೇ ತಮ್ಮ ಹಿರಿಯ ಮಗನಿಗೋಸ್ಕರ ತಾವೇ ಒಂದು ಚಿತ್ರ ನಿರ್ದೇಶಿಸುವ ಮಹತ್ತರ ಆಲೋಚನೆಯೂ ಜಗ್ಗೇಶ್‌ಗಿದೆ. ಅವರ ಹಲವಾರು ಚಿತ್ರಗಳಲ್ಲಿ ಅಭಿನಯಿಸಿರುವ ಕಿರಿಯ ಮಗನೂ ಸಾಕಷ್ಟು ಟ್ರೈನಿಂಗ್‌ನೊಂದಿಗೆ ನಟನೆಯ ಗೀಳು ಹತ್ತಿಸಿಕೊಂಡಿದ್ದಾನೆ. ಇದಕ್ಕೆಲ್ಲಾ ಸ್ಫೂರ್ತಿಯಾಗಿ ನಿಂತಿರುವುದು ಮಾತ್ರ ಇದೇ ಲಕ್ಷಣ ಪಕ್ಷಾ ಜಗ್ಗೇಶ್.



ಕಳ್ಳ ಬುದ್ಧಿಯ ಬ್ಲೇಡ್ ಬಾಬು



ರಿಮೇಕ್ ಸಮಿತಿಗೆ ದಿನೇಶ್ ಬಾಬು ಎಂಬ ಮಲಯಾಳಿ ಕಳ್ಳ ಒಂದು ಸವಾಲಾಗಿಬಿಟ್ಟಿದ್ದಾರೆ. ಯಾಕೆಂದರೆ ಈತ ಇತ್ತೀಚೆಗೆ 'ಬೇಜಾ ಫ್ರೈ' ಎಂಬ ಹಿಂದಿ ಚಿತ್ರವನ್ನು 'ಮಿ.ಗರಗಸ' ಎಂದು ಕನ್ನಡಕ್ಕೆ ಭಟ್ಟಿ ಇಳಿಸಿದ್ದರೂ ತಾನು ಫ್ರೆಂಚ್ ನಾಟಕದಿಂದ ಸ್ಫೂರ್ತಿ ಪಡೆದು ಚಿತ್ರ ಮಾಡಿದ್ದೇನೆಂದು ಯಾವ ನಾಚಿಕೆಯಿಲ್ಲದೆ ಘೋಷಿಸಿದ್ದರು.

ವಾಸ್ತವವಾಗಿ ಆ ಫ್ರೆಂಚ್ ನಾಟಕ ಈಗಾಗಲೇ ಫ್ರೆಂಚ್ ಮತ್ತು ಇಂಗ್ಲಿಷ್ ಸಿನಿಮಾ ಆಗಿ ಬಂದಿದೆಯಲ್ಲದೆ, ಇತ್ತೀಚೆಗೆ ಪಿ.ಲಂಕೇಶರ ಬಹಳ ವರ್ಷದ ಮಿತ್ರ ಬಳ್ಳಾರಿಯವರ ಪುತ್ರ ಅದನ್ನೇ ಹಿಂದಿಯಲ್ಲಿ 'ಬೇಜಾ ಫ್ರೈ' ಚಿತ್ರವಾಗಿ ನಿರ್ದೇಶಿಸಿದ್ದ. ಅದನ್ನೇ ದಿನೇಶ್ ಬಾಬು ಕನ್ನಡಕ್ಕೆ ಇಳಿಸಿದ್ದರು.

ಅಷ್ಟು ಸಾಲದೆಂಬಂತೆ ಮೊನ್ನೆ 'ಜನುಮದ ಗೆಳತಿ' ಎಂಬ ಹೊಸ ಚಿತ್ರವನ್ನು ದಿನೇಶ್ ಬಾಬು ಆರಂಭಿಸಿದರು. ಈ ಬಾರಿಯೂ ಫ್ರೆಂಚ್ ಕಾರ್ಡನ್ನು ಉಪಯೋಗಿಸಿರುವ ಬಾಬು ಚಿತ್ರದ ಕತೆಯನ್ನು ಫ್ರೆಂಚ್ ಕಾವ್ಯವೊಂದರ ಸಾಲಿನಿಂದ ತೆಗೆದುಕೊಂಡಿದ್ದೇನೆಂದು ಹೇಳಿದ್ದಾರೆ. ಅಲ್ಲ, ಇಷ್ಟು ವರ್ಷ ಕನ್ನಡ ಸಿನಿಮಾದಲ್ಲಿದ್ದರೂ ಕನ್ನಡ ಭಾಷೆಯನ್ನು ಕಲಿಯದ ಈ ಬಾಬು ಅದ್ಯಾವಾಗ ಫ್ರೆಂಚ್ ಕಲಿತರು? ಯಾವಾಗ ಆ ಭಾಷೆಯ ಪದ್ಯಗಳನ್ನು ಓದಲಾರಂಭಿಸಿದರು? ಹೋಗಲಿ ಅವರು ಓದಿರುವುದು ಯಾವ ಕಾವ್ಯ? ಅದನ್ನು ಬರೆದ ಕವಿ ಯಾರು ಎಂದು ಕೇಳಿದರೆ ಬಾಬು ಬಾಯಿ ಬಿಡುತ್ತಿಲ್ಲ.

ಬಿಡಿ ಪರವಾಗಿಲ್ಲ. ಅವರ ಚಿತ್ರ ಬಿಡುಗಡೆಯಾದ ನಂತರ ಅಂತರರಾಷ್ಟ್ರೀಯ ಸಿನಿಮಾ ಪ್ರಿಯರಿಗೆ ಬಾಬು ಯಾವ ಸಿನಿಮಾವನ್ನು ಕದ್ದಿದ್ದಾರೆ ಎಂಬುದು ಗೊತ್ತೇ ಗೊತ್ತಾಗುತ್ತದೆ.

ಆದರೆ ಈ ಮಲಯಾಳಿ ಬಾಬುವಿನ ಕಳ್ಳ ಬುದ್ಧಿಯನ್ನು ಮೆಚ್ಚಲೇ ಬೇಕು. ನಮ್ಮ ಗಾಂಧಿನಗರದ ತಲೆ ಇಲ್ಲದ ನಿರ್ದೇಶಕರೆಲ್ಲ ತಮಿಳು, ತೆಲುಗು ಚಿತ್ರಗಳನ್ನು ಕದ್ದು ಪೇಚಿಗೆ ಸಿಲುಕಿಕೊಳ್ಳುತ್ತಿದ್ದರೆ ಈತ ಮಾತ್ರ ಫಾರಿನ್ ಸಿನಿಮಾಗಳಿಂದ ಕದ್ದು ಯಾರ ಕೈಗೂ ಸಿಗದಂತೆ ಇದ್ದಾರೆ.

ಇದರ ನೀತಿ ಪಾಠವಿಷ್ಟೇ: ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಳ್ಳತನ ಮಾಡಿದರೆ ಹೀರೋ. ಲೋಕಲ್ ಲೆವೆಲ್‌ನಲ್ಲಿ ಕದ್ದರೆ ಜೀರೋ!

. . . .

'ಮಿ. ಗರಗಸ' ಬಾಕ್ಸಾಫೀಸಿನಲ್ಲಿ ಜಯಭೇರಿ ಬಾರಿಸಿದ್ದೇ ತಡ; ಅದರ ನಿರ್ದೇಶಕ ದಿನೇಶ್ ಬಾಬುಗೆ ಎಲ್ಲಿಲ್ಲದ ಬೇಡಿಕೆ ಬಂದಿತು. ಅವರೇ ಹೇಳುವಂತೆ ಸುಮಾರು ಹದಿನಾರು ನಿರ್ಮಾಪಕರು ಬಾಬು ಬಳಿ ಬಂದು 'ಗರಗಸ ತರಹದ ಸಿನಿಮಾ ಮಾಡಿಕೊಡಿ' ಎಂಬ ಮನವಿ ಮಾಡಿದರಂತೆ. ಆದರೆ ದಿನೇಶ್ ಬಾಬು ತನ್ನ ಸಂಭಾವನೆಯನ್ನು ಸಿಕ್ಕಾಪಟ್ಟೆ ಏರಿಸಿದ್ದರಿಂದ ಅವರೆಲ್ಲ ಬಂದ ದಾರಿಗೆ ಸುಂಕವಿಲ್ಲ ಎಂದು ಹಿಂದೆ ಹೋಗಿದ್ದಾರಂತೆ.

ಅಂದಹಾಗೆ, ಇದರಿಂದಾಗಿ ದಿನೇಶ್ ಬಾಬುಗೆ ನಷ್ಟವಾಗಿದ್ದರೂ ಕನ್ನಡ ಸಿನಿಮಾ ಪ್ರೇಕ್ಷಕರಿಗೆ ಲಾಭವಾಗಿದೆ. ಹೇಗೆಂದು ಕೇಳುತ್ತೀರಾ? ಅಕಸ್ಮಾತ್ ಬಾಬು ತಮ್ಮ ಸಂಭಾವನೆಯನ್ನು ಹೆಚ್ಚಿಸಿಕೊಳ್ಳದಿದ್ದರೆ 'ಗರಗಸ' ತರಹದ್ದೇ ಇನ್ನೂ ಡಜನ್ ಗಟ್ಟಲೆ ಸಿನಿಮಾಗಳನ್ನು ಸಾಲುಸಾಲಾಗಿ ನೋಡುವ ದುರ್ಗತಿ ಪ್ರೇಕ್ಷಕರದ್ದಾಗುತ್ತಿತ್ತು, ಅವಕ್ಕೇ!

. . . .

ದಿನೇಶ್ ಬಾಬು ಮತ್ತು ವಿಷ್ಣು ಕಾಂಬಿನೇಷನ್‌ನ ಚಿತ್ರಗಳು ಈ ಹಿಂದೆ ಪ್ರೇಕ್ಷಕರನ್ನು ಮೋಡಿ ಮಾಡಿವೆ. ಉದಾಹರಣೆಗೆ ಅವರಿಬ್ಬರೂ ಮಾಡಿದ್ದ 'ಲಾಲಿ' ಚಿತ್ರ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿತ್ತಲ್ಲದೆ ರಾಜ್ಯ ಪ್ರಶಸ್ತಿಯನ್ನೂ ಪಡೆದಿತ್ತು. ಅದಕ್ಕೂ ಮೊದಲು 'ಸುಪ್ರಭಾತ' ಸಾಕಷ್ಟು ಯಶಸ್ಸು ಕಂಡಿತ್ತು. ಅನಂತರ ಬಂದ ಎಲ್ಲ ಚಿತ್ರಗಳೂ ಒಂದಲ್ಲ ಒಂದು ರೀತಿಯಲ್ಲಿ ಪ್ರೇಕ್ಷಕರಿಗೆ ಇಷ್ಟವಾಗಿತ್ತು. ಈಗ ಈ ಜೋಡಿ ಮತ್ತೆ ಜೊತೆಗೂಡಿದ್ದು ಮುಂದಿನ ತಿಂಗಳು ಅವರ ಹೊಸ ಚಿತ್ರ ಸೆಟ್ಟೇರಲಿದೆ.

ಗಣೇಶನಂತಹ ಯುವಕರ ಪ್ರಭುತ್ವ ಭರಾಟೆಯಲ್ಲಿ ಹಿರಿಯ ನಟ ವಿಷ್ಣು ಮಂಕಾಗಿ ಕಾಣುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವರ ಫೇವರಿಟ್ ನಿರ್ದೇಶಕ ದಿನೇಶ್ ಬಾಬು ಕೈಚಳಕದಿಂದಲಾದರೂ ವಿಷ್ಣು ಮತ್ತೆ ಲೈಮ್ ಲೈಟಿಗೆ ಬರುತ್ತಾರೋ ನೋಡೋಣ.

R B P LANKESH, Kannada Weekly Price Rs. 12/- 4-6-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.



'ಸೈಕೋ' ಸಂಗೀತಗಾರ

ಇತ್ತೀಚಿಗೆ ಎಲ್ಲಾ ಎಫ್‌ಎಂ ಚಾನೆಲ್‌ಗಳಲ್ಲಿ 'ನಿನ್ನ ಪೂಜೆಗೆ ಬಂದೆ ಮಹಾದೇಶ್ವರಾ...' ಎಂಬ ಹಾಡನ್ನು ಕೇಳಿಸಿಕೊಂಡೇ ಇರುತ್ತೀರಿ. ಇದು 'ಸೈಕೋ' ಎಂಬ ಇನ್ನೂ ಬಿಡುಗಡೆಯಾಗದ ಚಿತ್ರದ ಹಾಡಾಗಿದ್ದರೂ ಈಗ ಎಲ್ಲೆಡೆ ಜನಪ್ರಿಯವಾಗಿದೆ. ಅದನ್ನು ಹಾಡಿರುವವರು ಮತ್ತು ಸಂಗೀತವನ್ನು ನಿರ್ದೇಶಿಸಿರುವವರು ಚಿತ್ರರಂಗಕ್ಕೆ ಹೊಸಬರಾದ ರಘು ದೀಕ್ಷಿತ್.

ಈತ ಮೊದಲ ಬಾರಿಗೆ ಸಂಗೀತ ನಿರ್ದೇಶನ ಮಾಡಿದ್ದರೂ ಈಗಾಗಲೇ ಈ ಒಂದು ಹಾಡಿನಿಂದಾಗಿ ಆ ಚಿತ್ರದ ಆಡಿಯೋ ಕ್ಯಾಸೆಟ್‌ಗಳು ಕಳ್ಳೆಪುರಿಯಂತೆ ಮಾರಾಟವಾಗುತ್ತಿದೆ. ಅಂದಹಾಗೆ '... ಮಾದೇಶ್ವರಾ' ಸೇರಿದಂತೆ ಆ ಚಿತ್ರದ ಎರಡು ಹಾಡುಗಳನ್ನು ಸ್ವತಃ ರಘು ಹಾಡಿ ಕೇಳುಗರನ್ನು ಮೋಡಿಮಾಡಿದ್ದಾರೆ.

ಈ ಯಶಸ್ಸಿನಿಂದಾಗಿ ಈ ಯುವಕ ಕನ್ನಡ ಚಿತ್ರರಂಗದಲ್ಲಿ ಬಹಳ ದೊಡ್ಡ ಹೆಸರು ಮಾಡುವ ಸಾಧ್ಯತೆ ಇದೆ ಎಂದು ಕೇಳಿಬರುತ್ತಿರುವ ಸಂದರ್ಭದಲ್ಲೇ ಕೆಟ್ಟ ಸುದ್ದಿಯೊಂದು ಕೇಳಿಬಂದಿದೆ. ಇತ್ತೀಚೆಗೆ ಹಿಂದಿ ಚಿತ್ರರಂಗದ ಪ್ರತಿಷ್ಠಿತ ಮ್ಯೂಜಿಕ್ ಸಂಸ್ಥೆಯ ಆಲ್ಬಮ್ ಒಂದರಲ್ಲಿ ಹಾಡಲು ಮುಂಬೈಗೆ ಹೋಗಿದ್ದ ರಘು ಕರ್ನಾಟಕಕ್ಕೆ ವಾಪಾಸ್ ಬರುತ್ತಿದ್ದಾಗ ರಸ್ತೆ ಅಪಘಾತಕ್ಕೆ ಒಳಗಾಗಿದ್ದಾರೆ. ಸದ್ಯಕ್ಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಘು ಆದಷ್ಟು ಬೇಗ ಸುಧಾರಿಸಲಿ ಎಂದೂ, ಚಿತ್ರ ಸಂಗೀತಕ್ಕೆ ಹೊಸ ಮಾಧುರ್ಯ ನೀಡುವಂತಾಗಲಿ ಎಂದೂ ನಾವು ಹಾರೈಸುತ್ತೇವೆ.



ಜಾಕಿ ನಂ. 4

ಮೊದಲು 'ಮಿಲನ' ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ರೇಡಿಯೋ ಜಾಕಿಯಾಗಿ ನಟಿಸಿದರು. ಆನಂತರ 'ಕೃಷ್ಣ' ಚಿತ್ರದಲ್ಲಿ ಗಣೇಶ್ ಟಿವಿ ಜಾಕಿಯಾಗಿದ್ದರು. 'ಆಕ್ಸಿಡೆಂಟ್' ಸಿನಿಮಾದಲ್ಲಿ ರಮೇಶ್ ಅರವಿಂದ್ ಸಹ ರೇಡಿಯೋ ಜಾಕಿ ಆಗಿದ್ದರು. ಇದೀಗ ಸುದೀಪ್ ಕೂಡ 'ಮುಸ್ಸಂಜೆಯ ಮಾತು' ಚಿತ್ರದಲ್ಲಿ ರೇಡಿಯೋ ಜಾಕಿಯಾಗಿ ಕಾಣಿಸಿಕೊಂಡಿದ್ದಾರೆ.

'ಮಿಲನ' ಮತ್ತು 'ಕೃಷ್ಣ' ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿದ್ದವು. ಆದರೆ ಅದೇ ಮಾತನ್ನು 'ಮುಸ್ಸಂಜೆಯ ಮಾತು' ಚಿತ್ರದ ಬಗ್ಗೆ ಹೇಳುವುದು ಸ್ವಲ್ಪ ಕಷ್ಟವಾಗುತ್ತಿದೆ. ಏಕೆಂದರೆ ಅದು ಈಗಾಗಲೇ ಬಾಕ್ಸ್ ಆಫೀಸ್‌ನಲ್ಲಿ ಕುಂಟುತ್ತಾ ಸಾಗುತ್ತಿದೆ.

ಆದರೇನಂತೆ, ನಾಯಕ ನಟ ರೇಡಿಯೋ ಜಾಕಿಯಾಗಿರುವ ಇನ್ನು ಮೂರ್ನಾಲ್ಕು ಚಿತ್ರಗಳು ಸದ್ಯದಲ್ಲೇ ಸೆಟ್ಟೇರಲಿವೆ ಎಂಬ ಮಾತು ಕೇಳಿ ಬರುತ್ತಿದೆ. ಗಾಂಧಿನಗರದವರ ಕ್ರಿಯೇಟಿವಿಟಿಗೆ ಜೈ ಅನ್ನೋಣವೇ?!

ಬಾಜಿ ಕಟ್ಟಲು ಬಂದ ಮರಿ ಕಾಶಿ

ಎಂಬತ್ತರ ದಶಕದಲ್ಲಿ ಕನ್ನಡ ಚಿತ್ರರಂಗಕ್ಕೆ ಕಾಮಕೇಳಿಯ ಟಚ್ ಮತ್ತು ಹಾಸ್ಯದ



ಹೆಸರಲ್ಲಿ ವಲ್ಗಾರಿಟಿಯನ್ನು ಪರಿಚಯಿಸಿದ ನಿರ್ದೇಶಕ ಕಂ ನಾಯಕ ನಟ ಕಾಶೀನಾಥ್‌ರನ್ನು ಈಗ ಬಹಳ ಜನ ಮರೆತಿದ್ದಾರೆ. ಆದರೆ ಜನ ತಮ್ಮನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡಲು ಈಗಲೂ ಕಾಶೀನಾಥ್ ತಮ್ಮ ಸೆಕ್ಸ್ ಪಂಡಿತನ ಅವತಾರದಲ್ಲಿ ಮತ್ತೆ ಮತ್ತೆ ತೆರೆಯ ಮೇಲೆ ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತಾರೆ. ಅದರಲ್ಲಿ ಅವರ ಅಷ್ಟು ಯಶಸ್ವಿಯಾಗಿಲ್ಲ ಎಂಬುದೇ ಸಂತೋಷದ ವಿಷಯ.

ಆದರೆ ಈ ಟಿಪ್ಪಣಿಯ ವಿಷಯ ಅದಲ್ಲ, ಅದೇನೆಂದರೆ ಈಗ ಕನ್ನಡ ಚಿತ್ರರಂಗದ ವಾತ್ಸಾಯನ ಕಾಶೀನಾಥನ ಪುತ್ರ ಆಲೋಕ್ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾನೆ. ಆತ ನಟಿಸುತ್ತಿರುವ 'ಬಾಜಿ' ಎಂಬ ಚಿತ್ರವನ್ನು ನಿರ್ದೇಶಿಸುತ್ತಿರುವವರು ಶಿವ್ನಘಟ್ಟ ಶ್ರೀನಿವಾಸ್.

ವಿಚಿತ್ರವೆಂದರೆ ಈ ಹುಡುಗನ ಅರಂಗೇಟ್ರಂ ಅನ್ನು ಆತನ ತಂದೆ ಕಾಶೀನಾಥ್ ಮಾಡದೇ ಇರುವುದು ಮತ್ತು ಆಲೋಕ್ ಕೂಡ ಎಲ್ಲೂ ತಾನು ಕಾಶೀನಾಥರ ಮಗ ಎಂದು ಹೇಳಿಕೊಳ್ಳದೇ ಇರುವುದು.

ಅದಕ್ಕೆ ಕಾರಣ ಕಾಶೀನಾಥ್ ಎಂಬ ಹೆಸರು ಎರಡೂ ಕಡೆ ಚೂಪಾಗಿರುವ ಖಡ್ಗದಂತೆ ಎಂಬುದೇ ಆಗಿರಬಹುದೇ?!

ಒಂದೇ ದಾರಿಯಲ್ಲಿ ಸಾಗಿದವರು....







ಗಣೇಶ್, ಕೋಮಲ್ ಮತ್ತು ಶರಣ್ ನಡುವೆ ಒಂದು ಸಾಮ್ಯತೆ ಇದೆ ಅಂದರೆ ನಿಮಗೆ ಆಚ್ಚರಿಯಾಗಬಹುದು. ಆ ಸಾಮ್ಯತೆ ಯಾವುದೆಂದರೆ ಈ ಮೂವರೂ ಮೊದಲು ಕಾಮಿಡಿ ಲೋಕದಲ್ಲಿ ಯಶಸ್ಸು ಗಳಿಸಿ ಆ ನಂತರ ಹೀರೋಗಳಾದವರು.

'ಮುಂಗಾರು ಮಳೆ' ಬಿಡ್ಡು ಹಿಟ್ ಆಗುವತನಕ ಗಣೇಶ್ ಸೀಮಿತವಾಗಿದ್ದು 'ಕಾಮಿಡಿ ಟೈಂ' ಎಂಬ ಟಿವಿ ಕಾರ್ಯಕ್ರಮಕ್ಕೆ ಮತ್ತು ಅಲ್ಲಲ್ಲಿ ಸಿಕ್ಕ ಚಿಕ್ಕಪುಟ್ಟ ಪಾತ್ರಗಳಿಗೆ. ಆತನ ಯಶಸ್ಸು ಕಂಡು ಹುಮ್ಮಸ್ಸುಗೊಂಡ ಕೋಮಲ್ ಕೂಡ ಇತ್ತೀಚೆಗೆ 'ಮಿಸ್ಟರ್ ಗರಗಸ' ಚಿತ್ರದಲ್ಲಿ ಹೀರೋ ಆಗಿ ನಟಿಸಿ ಗೆದ್ದರು. ಇದು ಅವರು ನಾಯಕನಟನಾಗಲು ಮಾಡಿದ ಎರಡನೆ ಪ್ರಯತ್ನ. ಈಗ ಅದೇ ಹಾದಿಯನ್ನು ಮತ್ತೋರ್ವ ಹಾಸ್ಯ ನಟ ಶರಣ್ ಹಿಡಿದಿದ್ದಾರೆ.

ಈತ ಹೀರೋ ಆಗಿ ನಟಿಸಿರುವ 'ಸುಂದರಿ ಗಂಡ ಸದಾನಂದ' ಈ ವಾರ ತೆರೆ ಕಂಡಿದೆ. ಈ ಚಿತ್ರದಲ್ಲಿ ಹಾಸ್ಯ ಮತ್ತು ಸೆಂಟಿಮೆಂಟಲ್ ದೃಶ್ಯಗಳನ್ನು ಶರಣ್ ನುರಿತ ಕಲಾವಿದನ ತರಹ ನಿರ್ವಹಿಸಿದ್ದಾನೆ.

ಹಾಗೆ ನೋಡಿದರೆ ಶರಣ್ ವೃತ್ತಿ ಜೀವನ ಆರಂಭವಾಗಿದ್ದೇ ನಾಯಕನಾಗಿ. ಮಹೇಂದರ್ ನಿರ್ದೇಶನದ 'ಕರ್ಪೂರದ ಗೊಂಬೆ' ಚಿತ್ರದಲ್ಲಿ ಈತ ದ್ವಿತೀಯ ನಾಯಕ. ಶೃತಿ ಮತ್ತು ರಮೇಶ್ ಈ ಚಿತ್ರದ ನಾಯಕ-ನಾಯಕಿ. ಆದರೆ ಆನಂತರ ಅವರಿಗೆ ಯಾಕೋ ಹೀರೋ ಆಗುವ ಅವಕಾಶಗಳು ಸಿಕ್ಕಿರಲಿಲ್ಲವಾದ್ದರಿಂದ ಅವರು ಹಾಸ್ಯನಟರಾಗಿಯೇ ಖ್ಯಾತಿ ಗಳಿಸಿದರು. ಈಗ ಸುಮಾರು ಹತ್ತು ವರ್ಷಗಳ ನಂತರ ಶರಣ್ ಮತ್ತೆ ನಾಯಕನಾಗಿದ್ದಾನೆ.

ಇಲ್ಲಿ ಈಗ ಒಂದು ಸಮಸ್ಯೆ ಎದುರಾಗುತ್ತಿದೆ. ಗಣೇಶ್, ಕೋಮಲ್ ಮತ್ತು ಶರಣ್ ಎಂಬ ಹಾಸ್ಯನಟರ ಹೀರೋಗಿರಿಗೆ ಸಿಕ್ಕಿರುವ ಯಶಸ್ಸನ್ನು ಕಂಡು ನಾಳೆ ಇವರ ತರಹವೇ ಹೀರೋಗಳಾಗಲು ಟೆನ್ನಿಸ್ ಕೃಷ್ಣ ಮತ್ತು ಸಾಧುಕೋಕಿಲ ಹೊರಟರೆ ಏನು ಗತಿ?!

ಗಾಂಧಿನಗರ ಗೋವಿಂದಾ, ಗೋವಿಂದಾ!!



ರಣಬೀರನ ಜೊತೆಯಾದ ದೀಪಿಕಾ



ಅರಳು ಕಂಗಳ ಸ್ನಿಗ್ಧ ಸುಂದರಿ ದೀಪಿಕಾ ಪಡುಕ್ಕೋಣೆ ಮತ್ತು ರಣಭೀರ್ ಕಪೂರ್‌ನ ಪ್ರೇಮ ಪ್ರಕರಣ ಅಂತೂ ಇಂತೂ ಒಂದು ಮಟ್ಟಕ್ಕೆ ಬಂದು ನಿಂತಿದೆ.

ಬಾಲಿವುಡ್‌ನ ಅನೇಕ ನಟಿಯರಂತೆ ಈ ಕನ್ನಡದ ಹುಡುಗಿ ದೀಪಿಕಾ ಸಹ ಅಫೇರುಗಳ ಸರಮಾಲೆಯಲ್ಲಿ ಸಿಲುಕಿದವಳು. ಮೊದ ಮೊದಲು ಕುಂತ್ರೆ ನಿಂತ್ರೆ ದೋನಿ ಧ್ಯಾನ ಮಾಡದಿದ್ದರೆ ಜೀವಕ್ಕಿಲ್ಲ ಸಮಾಧಾನ ಎನ್ನುತ್ತಿದ್ದವಳು ಇದ್ದಕ್ಕಿದ್ದಂತೆ ದೋನಿಗೆ ದೋಖಾ ಕೊಟ್ಟು ಮತ್ತೊಬ್ಬ ಕ್ರಿಕೆಟ್ ಕಿಂಗ್ ಯುವರಾಜನ ಆಸರೆಗೆ ಬಿದ್ದಳು. ಕಡೆಗೆ ಅವನಿಗೂ ಟಾಟಾ ಹೇಳಿದ್ದಾಯಿತು. ಆನಂತರ ಆಕೆ ಹಿಡಕೊಂಡಿದ್ದು ರಣಭೀರ್ ಕಪೂರ್ ಎಂಬಾತನನ್ನು. ಆದರೆ ಯಾವಾಗ ಉಪಿನ್ ಪಟೇಲ್ ಎಂಬಾತನೊಂದಿಗೆ ದೀಪಿಕಾಳ ಸರಸ ಸಲ್ಲಾಪದ ಫೋಟೋಗಳು ಅಂತರ್ಜಾಲದಲ್ಲಿ ಅಲೆಯತೊಡಗಿದವೋ ಆಗ ರಣಭೀರ್ ಕೆಂಡಾಮಂಡಲನಾಗಿದ್ದ. ದೀಪಾಕಾಳಿಗೆ ಇಮೇಲ್ ಮುಖಾಂತರ ಮೆಸೇಜ್ ಮಾಡಿ 'ನಮ್ಮಿಬ್ಬರ ಸಂಬಂಧ ಸಾಕು' ಎಂದು ಹೇಳಿದ್ದ.

ಆದರೆ ಆ ಮಧ್ಯೆ ಅವರಿಬ್ಬರಲ್ಲಿ ಅದೇನು ಒಪ್ಪಂದವಾಯಿತೋ ಏನೋ ಗೊತ್ತಿಲ್ಲ. ಈಗಂತೂ ದೀಪಿಕಾ ಮತ್ತು ರಣಭೀರ್ ಎಂಗೇಜ್‌ಮೆಂಟ್ ಮಾಡಿಕೊಳ್ಳುವುದರ ಮೂಲಕ ತಮ್ಮ ಮದುವೆ ಸುದ್ದಿಯನ್ನು ಅಧಿಕೃತವಾಗಿ ಘೋಷಿಸಿದ್ದಾರೆ. ಒಟ್ನಾರೆ ದೀಪಿಕಾ-ರಣಭೀರ್ ಸಹ ಐಶ್ವರ್ಯ-ಅಭಿಷೇಕ್ ಹಾದಿಯನ್ನೇ ತುಳಿದಂತೆ ಕಾಣುತ್ತಿದೆ. ಹತ್ತಾರು ಜನರೊಂದಿಗೆ ಓಡಾಡಿದರೂ ಮದುವೆ ಮಾತ್ರ ಒಬ್ಬನೊಂದಿಗೇ ಎಂಬುದನ್ನು ದೀಪಿಕಾ-ಐಶ್ವರ್ಯ ಇಬ್ಬರೂ ಸಾಬೀತುಮಾಡಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4. Phone : ...
Fax : 26604536, E-mail :lankesh70@rediffmail.com, Printed at Rajhans Enterprises, # ...